ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 69 ಸಂಚಿಕೆ- 69 | PAGE- 8 ಪುಟ-8 | ಭಾನುವಾರ 20.04.2025 | RS.2/- ಬೆಲೆ 2/-

# ನ್ಯಾಷನಲ್ ಹೆರಾಲ್ಡ್ ಪ್ರಕರಣ: ಸೇಡಿನ ರಾಜಕಾರಣ: ಖರ್ಗೆ



ನವದೆಹಲಿ:ಏ.19:ವಕ್ಫ್ (ತಿದ್ದುಪಡಿ) ಕಾಯ್ದೆ ಕುರಿತು ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಎತ್ತಿದ ಅಂಶಗಳಿಗೆ ಸುಪ್ರೀಂ ಕೋರ್ಟ್ ಪ್ರಾಮುಖ್ಯತೆ ನೀಡಿದೆ ಮತ್ತು ಅಂತಹ ಆಸ್ತಿಗಳ ವಿವಾದ ಸೃಷ್ಟಿಸಲು ಸರ್ಕಾರ ಉದ್ದೇಶಪೂರ್ವಕವಾಗಿ ಈ ವಿಷಯವನ್ನು ತೆಗೆದುಕೊಂಡಿದೆ ತರಾಟೆಗೆ ತೆಗೆದುಕೊಂಡಿರುವುದಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಹೇಳಿದ್ದಾರೆ.

ಇಲ್ಲಿ ನಡೆದ ಪ್ರಧಾನ ಕಾರ್ಯದರ್ಶಿ ಮತ್ತು ಉಸ್ತುವಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಖರ್ಗೆ, ಇಡಿ ಚಾರ್ಜ್ ಶೀಟ್ ನಲ್ಲಿ ಪಕ್ಷದ ಮಾಜಿ ಮುಖ್ಯಸ್ಥರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಹೆಸರಿದೆ ಮತ್ತು ದೆಹಲಿ, ಲಖನೌ ಮತ್ತು ಮುಂಬೈನಲ್ಲಿರುವ ನ್ಯಾಷನಲ್ ಹೆರಾಲ್ಡ್ ಆಸ್ತಿಗಳನ್ನು ಸೇಡಿನ ರಾಜಕೀಯದಿಂದ ವಶಕ್ಕೆ ಪಡೆಯಲಾಗಿದೆ ಎಂದು ಆರೋಪಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ವಕ್ಫ್ (ತಿದ್ದುಪಡಿ) ಕಾಯ್ದೆಯನ್ನು ಉಲ್ಲೇಖಿಸಿದ ಅವರು, "ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಪ್ರಸ್ತಾಪಿಸಿದ ಅಂಶಗಳಿಗೆ ಸುಪ್ರೀಂ ಕೋರ್ಟ್ ಪ್ರಾಮುಖ್ಯತೆ ನೀಡಿರುವುದು ನನಗೆ ಖುಷಿ ತಂದಿದೆ. ಬಿಜೆಪಿ ಮತ್ತು ಕೇಂದ್ರ ಸರಕಾರವು ವಕ್ಫ್ ವಿಷಯದಲ್ಲಿ ಜನರನ್ನು ದಾರಿ ತಪ್ಪಿಸುತ್ತಿದೆ. ಸರ್ಕಾರ ದುರುದ್ದೇಶದಿಂದ ಈ ವಿಚಾರವನ್ನು ವಿವಾದ ಮಾಡಿದೆ ಎಂದು ಆರೋಪಿಸಿದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ ಕ್ರಮದಿಂದ ಕಾಂಗ್ರೆಸ್ ನ್ನು ಬೆದರಿಸಲಾಗುತ್ತಿದೆ. ದೊಡ್ಡ ಪಿತೂರಿಯ ಭಾಗವಾಗಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಹೆಸರನ್ನು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಚಾರ್ಜ್ ಶೀಟ್‌ನಲ್ಲಿ ಹಾಕಲಾಗಿದೆ. ಆದರೆ ಅವರು ಯಾರ ಹೆಸರನ್ನು ಹಾಕಿದರೂ ನಾವು ಹೆದರುವುದಿಲ್ಲ. ಎರಡು ಮೂರು ದಿನಗಳ ಹಿಂದೆಯಷ್ಟೇ ದೆಹಲಿ, ಲಖನೌ ಮತ್ತು ಮುಂಬೈನಲ್ಲಿರುವ ನ್ಯಾಷನಲ್ ಹೆರಾಲ್ಡ್ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ಇದೆಲ್ಲವೂ ಸೇಡಿನ ಮನೋಭಾವದಿಂದ ನಡೆಯುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ ಎಂದು ಹೇಳಿದರು. 'ಯಂಗ್ ಇಂಡಿಯನ್' ಲಾಭಕ್ಕಾಗಿ ಕಂಪನಿ ಅಲ್ಲ' ಎಂದು ಪ್ರತಿಪಾದಿಸಿದ ಖರ್ಗೆ, ಅಸೋಸಿಯೇಟೆಡ್ ಜರ್ನಲ್ ಲಿಮಿಟೆಂಡ್ ಗೆ ಷೇರುಗಳು, ಆಸ್ತಿಗಳು ಅಥವಾ ಲಾಭವನ್ನು ಯಾರೂ ಪಡೆಯಲು ಅಥವಾ ವರ್ಗಾಯಿಸಲು ಸಾಧ್ಯವಿಲ್ಲ ಎಂಬುದು ಇದರರ್ಥವಾಗಿದೆ. ಬಿಜೆಪಿ ಜನರು ಸುಳ್ಳು ಹೇಳುವ ಮೂಲಕ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ನಾವು ಸಾರ್ವಜನಿಕರಿಗೆ ಸತ್ಯವನ್ನು ಹೇಳಬೇಕಾಗಿದೆ ಎಂದರು. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ರೂ. 988 ಕೋಟಿ ಅಕ್ರಮವಾಗಿ ವರ್ಗಾವಣೆಯಾಗಿದೆ ಎಂದು ಆರೋಪಿಸಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ಜಾರ್ಜ್ ಶೀಟ್ ನಲ್ಲಿ ಉಲ್ಲೇಖಿಸಿದೆ. ಸೋನಿಯಾ ಮತ್ತು ರಾಹುಲ್ ಗಾಂಧಿ ಬಹುಪಾಲು ಷೇರುದಾರರಾಗಿರುವ ಯಂಗ್ ಇಂಡಿಯನ್ ಎಂಬ ತಮ್ಮ ಖಾಸಗಿ ಕಂಪನಿಗೆ ಕೇವಲ ರೂ. 50 ಲಕ್ಷಕ್ಕೆ ಶೇ. 99 ರಷ್ಟು ಷೇರುಗಳನ್ನು ವರ್ಗಾಯಿಸುವ ಮೂಲಕ ಅದರ ಸಾರ್ವಜನಿಕ ಕಂಪನಿ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ನ ರೂ. 2,000 ಕೋಟಿ ಮೌಲ್ಯದ ಆಸ್ತಿಯನ್ನು ಆಕ್ರಮಿಸಲು ಕಾಂಗ್ರೆಸ್ ನಾಯಕರು "ಕ್ರಿಮಿನಲ್ ಪಿತೂರಿ" ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

## ಗುಡುಗು ಸಿಡಿಲಿನ ಮಳೆಗೆ 8 ಕುರಿಗಳ ಸಾವು



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಏ.19: ಶುಕ್ರವಾರ ಮಧ್ಯಾಹ್ನ ಭಾರಿ ಬಿರುಗಾಳಿ ಸಮೇತ ಗುಡುಗು, ಮಿಂಚಿನ ಮಳೆ ಸುರಿದ ಪರಿಣಾಮದಿಂದ ಪಟ್ಟಣದ ಸುಭಾಷ ಮಹಾಜನ ಅವರಿಗೆ ಸೇರಿದ ಸರ್ವೆ ನಂಬರ್ 115 ಹೊಲದಲ್ಲಿ ಗುಡುಗು ಮಿಂಚಿನ ಮಳೆಯಿಂದಾಗಿ ಸಿಡಿಲು ಬಡಿದು ಹೊಲದಲ್ಲಿ ಮೇವು ತಿನ್ನುತ್ತಿದ್ದ 8 ಕುರಿಗಳಿಗೆ ಸಿಡಿಲು ಬಡಿದು ಸ್ಥಳದಲೇ ಮೃತಪಟ್ಟಿವೆ. ಈ ಸಂಬಂಧ ಚಿಟಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಲಬುರಗಿ ಜಿಲ್ಲಾದ್ಯಂತ ಜೋರು ಗಾಳಿ,ಮಳೆ ಧರೆಗುರುಳಿದ ಮರ



ಮಲ್ಲಮ್ಮನುಡಿವಾರ್ತೆ ಕಲಬುರಗಿ:ಏ.19: ಜಿಲ್ಲೆಯಾದ್ಯಂತ ಬಿರುಗಾಳಿ ಸಹಿತ ಧಾರಾಕಾರ ಮಳೆ ಶನಿವಾರ ಸಂಜೆ ಸುರಿದಿದೆ, ಇದರಿಂದಾಗಿ ಮರಗಳು ಧರೆಗುರುಳಿದ್ದರಿಂದ ರಸ್ತೆ ಸಂಚಾರ ಅಸ್ತವ್ಯಸ್ತವಾಗಿದೆ.

ಬಿರುಗಾಳಿ ಸಹಿತ ಮಳೆಯಿಂದಾಗಿ ಕಲಬುರಗಿ ಚಿಂಚೋಳಿ ರಾಜ್ಯ ಹೆದ್ದಾರಿ ಮೇಲೆ ಮರಗಳು ಉರುಳಿಬಿದ್ದ ಪರಿಣಾಮ ವಾಹನ ಸಂಚಾರ ಸ್ಥಗೀತವಾಗಿದೆ. ಇದರಿಂದಾಗಿ ಜನರು ಪರದಾಡುವಂತಾಗಿದೆ.

ಚಿಂಚೋಳಿ ತಾಲೂಕಿನ ಸುಲೇಪೇಟ ಹಾಗೂ ಹೊಡೆಬಿರನಳ್ಳಿ ಮಧ್ಯೆ ಬಿರುಗಾಳಿ ಸಹಿತ ಮಳೆಗೆ ಮರಗಳು, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಇದರಿಂದಾಗಿ ಸಂಚಾರ ವ್ಯತ್ಯಯವಲ್ಲದೇ,

ವಿದ್ಯುತ್ ವ್ಯತ್ಯಯ ಸಹ ಉಂಟಾಗಿದ್ದು ಜನರು ಪರದಾಡುವಂತಾಗಿದೆ.

ಸುಲೇಪೇಟ –ಕಲಬುರಗಿ

ರಾಜ್ಯ ಹೆದ್ದಾರಿ ಮೇಲಿನ ರಸ್ತೆ ಸಂಚಾರ ಸಂಪೂರ್ಣ ಸ್ಥಗೀತಗೊಂಡಿದೆ ಎಂದು ವರದಿಯಾಗಿದೆ.

## ನಗರಸಭೆ ಆವರಣದಲ್ಲಿ ಹೊತ್ತಿ ಉರಿದ ಕಾರು



ಮಲ್ಲಮ್ಮನುಡಿ ವಾರ್ತೆ ಬೀದರ.ಏ.19: ಇಲ್ಲಿನ ನಗರಸಭೆ ಆವರಣದಲ್ಲಿ ನಿಲ್ಲಿಸಿದ ಕಾರು ಶನಿವಾರ ಧಗಧಗನೆ ಹೊತ್ತಿ ಉರಿದಿದೆ.

ನಗರಸಭೆ ಮಾಜಿ ಉಪಾಧ್ಯಕ್ಷ ಅಂಬರೀಶ್ ಸ್ವಾಮಿ ಎಂಬುವವರಿಗೆ ಈ ಕಾರು ಸೇರಿತ್ತು. ಕೆಲಸದ ನಿಮಿತ್ತ ಅವರು ಆವರಣದಲ್ಲಿ ಕಾರು ನಿಲ್ಲಿಸಿ ಕಚೇರಿಯೊಳಗೆ ಹೋಗಿದ್ದರು. ಕೆಲ ಸಮಯದ ನಂತರ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದೆ.

ಬೆಂಕಿಯ ಆರ್ಭಟಕ್ಕೆ ಕಾರು ಸಂಪೂರ್ಣ ಸುಟ್ಟು ಕರಕಲಾಗಿದೆ. ವಿಷಯ ತಿಳಿದು ಅಗ್ನಿಶಾಮದ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸುವ ಹೊತ್ತಿಗೆ ಕಾರು ಸುಟ್ಟು ಹೋಗಿದೆ. ಎಮ್ ಎಚ್ 03 ಎಆರ್ 8550 ಸಂಖ್ಯೆಯ ಇಂಡಿಕಾ ವಿಸ್ತಾ ಕಾರ್ ಇದಾಗಿದೆ. ಘಟನೆಗೆ ಇನ್ನಷ್ಟೇ ನಿಖರ ಕಾರಣ ಗೊತ್ತಾಗಬೇಕಿದೆ. ಮಾರ್ಕೆಟ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ರೈತರ ನೆರವಿಗೆ ಬಾರದ ಸಕ್ಕರೆ ಕಾರ್ಖಾನೆಗಳು:ಮೌನವಹಿಸಿದ ಚುನಾಯಿತ ಪ್ರತಿನಿಧಿಗಳು: ಸಂಕಷ್ಟದಲ್ಲಿ ಕಬ್ಬು ಸಾಗಿಸಿದ ರೈತರು

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್,ಬೀದರ್ ಜಿಲ್ಲೆಯ ರೈತರು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಿಸಿ ಸುಮಾರು ಮೂರು ತಿಂಗಳು ಆದರೂ ಕೊಡಾ ರೈತರ ಖಾತೆಗಳಿಗೆ ಹಣ ಜಮಾ ಆಗದೇ ಇರುವುದರಿಂದ ಕಾರ್ಖಾನೆಗಳ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಸಾಕಷ್ಟು ರೈತರು ಕಬ್ಬಿನ ಬಿಲ್ ಮೇಲೆಯೇ ಅವಲಂಬಿತರಾಗಿದ್ದಾರೆ. ರೈತರ ಮಕ್ಕಳ ಮದುವೆಗಳು, ಸೇರಿದಂತೆ ಇತರೆ ಶುಭ ಕಾರ್ಯಗಳು ಮಾಡಬೇಕಾದರೆ ಕಬ್ಬಿನ ಬಿಲ್ ಬಂದರೇ ಮಾತ್ರ ಮಾಡಬಹುದು. ಆದರೆ ಕಳೆದ ಮೂರು ತಿಂಗಳಿಂದ ಕಬ್ಬಿನ ಬಿಲ್ ಪಾವತಿ ಮಾಡದೇ ಇರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮೌನವಹಿಸಿದ ಚುನಾಯಿತ ಪ್ರತಿನಿಧಿಗಳು:– ಜಿಲ್ಲೆಯ ರೈತರು ಸಾಕಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದರೂ ಕೂಡಾ ಜಿಲ್ಲೆಯ ಶಾಸಕರುಗಳು, ಸಚಿವರುಗಳು, ಸಂಸದರು, ಅಧಿಕಾರಿಗಳು, ರೈತರ ಕಬ್ಬಿನ ಬಿಲ್ ಪಾವತಿಸುವಂತೆ ಯಾರೂಬ್ಬರು ನಿರ್ದೇಶನ ನೀಡದೇ

ಇರುವುದರಿಂದ ಚುನಾಯಿತ ಪ್ರತಿನಿಧಿಗಳ ವಿರುದ್ಧ ರೈತರು ಆಕ್ರೋಶ ವ್ಯಕ್ತ ಪಡಿಸುತ್ತಿದ್ದಾರೆ.

ಚುನಾವಣೆಯ ಪೂರ್ವದಲ್ಲಿ. ರೈತರು ಈ ದೇಶದ ಬೆನ್ನಲಬು ಎಂದು ಹೇಳುವುದರ ಮೂಲಕ ಮತ ಪಡೆದು ಅವರ ನೇರವಿಗೆ ಬಾರದೆ ಇರುವದು ದುರಾದ್ರಷ್ಟಕರ ಸಂಗತಿಯಾಗಿದೆ. ಇಗಲಾದರೂ ಸಂಬಂಧ ಪಟ್ಟವರು. ಕಬ್ಬು ಸಾಗಿಸಿದ ರೈತರಿಗೆ ಹಣ ಬಿಡುಗಡೆ ಮಾಡಿಸಲು ಕ್ರಮ ಕೈಗೂಳ್ಳುವದು ಅತಿ ಅವಶ್ಯಕವಾಗಿದೆ.

## ಭಾರತದ ವಿದೇಶೀ ವಿನಿಮಯ ಮೀಸಲು $1.57 ಬಿಲಿಯನ್ ನಿಂದ $677.83 ಬಿಲಿಯನ್ ಗೆ ಏರಿಕೆ



ಮಲ್ಲಮ್ಮ ನುಡಿ ವಾರ್ತೆ

ಮುಂಬೈ:ಏ.19: ಏಪ್ರಿಲ್ 11ಕ್ಕೆ ಕೊನೆಗೊಂಡ ವಾರದಲ್ಲಿ ಭಾರತದ ವಿದೇಶೀ ವಿನಿಮಯ ಮೀಸಲು $1.57 ಬಿಲಿಯನ್‌ನಿಂದ $677.83 ಬಿಲಿಯನ್‌ಗೆ ತಲುಪಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

ಇದು ಸತತ ಆರನೇ ವಾರದಲ್ಲಿ ಏರಿಕೆಯಾಗಿದೆ. ಏಪ್ರಿಲ್ 4 ಕ್ಕೆ ಕೊನೆಗೊಂಡ ಹಿಂದಿನ ವರದಿ ವಾರದಲ್ಲಿ ಒಟ್ಟಾರೆ ಮೀಸಲು $10.87 ಬಿಲಿಯನ್‌ನಿಂದ $676.27 ಬಿಲಿಯನ್‌ಗೆ ತಲುಪಿದೆ. ಸೆಪ್ಟೆಂಬರ್ 2024 ರಲ್ಲಿ ವಿದೇಶೀ ವಿನಿಮಯ ಮೀಸಲು $704.88 ಬಿಲಿಯನ್‌ನ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿತ್ತು.

ಏಪ್ರಿಲ್ 11 ಕ್ಕೆ ಕೊನೆಗೊಂಡ ವಾರದಲ್ಲಿ, ಮೀಸಲುಗಳ ಪ್ರಮುಖ ಅಂಶವಾದ ವಿದೇಶಿ ಕರೆನ್ಸಿ ಸ್ವತ್ತುಗಳು $892 ಮಿಲಿಯನ್‌ನಿಂದ $574.98 ಬಿಲಿಯನ್‌ಗೆ ತಲುಪಿವೆ ಎಂದು ಶುಕ್ರವಾರ ಬಿಡುಗಡೆಯಾದ ದತ್ತಾಂಶ ತೋರಿಸಿದೆ.

ಡಾಲರ್ ಪರಿಭಾಷೆಯಲ್ಲಿ ಹೇಳುವುದಾದರೆ, ವಿದೇಶಿ ಕರೆನ್ಸಿ ಸ್ವತ್ತುಗಳು ವಿದೇಶಿ ವಿನಿಮಯ ಮೀಸಲುಗಳಲ್ಲಿ ಹೊಂದಿರುವ ಯೂರೋ, ಪೌಂಡ್ ಮತ್ತು ಯೆನ್‌ನಂತಹ ಯುಎಸ್ ಅಲ್ಲದ ಯುನಿಟ್‌ಗಳ ಮೌಲ್ಯವರ್ಧನೆಗಳನ್ನು ಒಳಗೊಂಡಿವೆ. ಈ ವಾರದಲ್ಲಿ ಚಿನ್ನದ ಮೀಸಲು $638 ಮಿಲಿಯನ್‌ನಿಂದ $78 ಬಿಲಿಯನ್‌ಗೆ ತಲುಪಿದೆ ಎಂದು ಆರ್‌ಬಿಐ ತಿಳಿಸಿದೆ.

ವಿಶೇಷ ಡ್ರಾಯಿಂಗ್ ಹಕ್ಕುಗಳು $6 ಮಿಲಿಯನ್ ಇಳಿಕೆಯಾಗಿ $18.36 ಬಿಲಿಯನ್‌ಗೆ ತಲುಪಿದೆ. ವರದಿ ಮಾಡುವ ವಾರದಲ್ಲಿ ಐಎಂಎಫ್ ನಲ್ಲಿ ಭಾರತದ ಮೀಸಲು ಸ್ಥಾನ $43 ಮಿಲಿಯನ್ ಏರಿಕೆಯಾಗಿ $4.50 ಬಿಲಿಯನ್‌ಗೆ ತಲುಪಿದೆ ಎಂದು ಸುಪ್ರೀಂ ಬ್ಯಾಂಕ್ ಡೇಟಾ ಮೂಲಕ ತಿಳಿದುಬಂದಿದೆ.

## ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲಿನ ತಂಬಾಕು ಜಾಹೀರಾತು ತೆರವು




ಬೆಂಗಳೂರು:ಏ.19:ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ದ ಬಸ್‌ಗಳ ಮೇಲಿನ ತಂಬಾಕು, ಸಿಗರೇಟು, ಮದ್ಯ ಉತ್ಪನ್ನಗಳ ಜಾಹೀರಾತುಗಳನ್ನು ಕೂಡಲೇ ಸಂಪೂರ್ಣ ತೆರವುಗೊಳಿಸುವಂತೆ ಮುಖ್ಯಮಂತ್ರಿ ಕಚೇರಿಯಿಂದ ಸೂಚನೆ ನೀಡಿದೆ.


ಸಿಎಂ ಕಚೇರಿ ಸೂಚನೆ ಮೇರೆಗೆ ಕೆಎಸ್ ಆರ್ ಟಿಸಿ, ಸಂಬಂಧಪಟ್ಟ ಜಾಹೀರಾತು ಪರವಾನಗಿದಾರರಿಗೆ ಈಗಾಗಲೇ ನೋಟಿಸ್ ನೀಡಲಾಗಿದ್ದು, ಜಾಹೀರಾತುಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ನಾಗರಿಕರೊಬ್ಬರು ಸಾಮಾಜಿಕ ಮಾಧ್ಯಮದ ಮೂಲಕ ಬಸ್ ಗಳಲ್ಲಿ ತಂಬಾಕು ಜಾಹೀರಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಸಂಬಂಧ ಏಪ್ರಿಲ್ 8 ರಂದು ಮುಖ್ಯಮಂತ್ರಿಗೆ ವಿಶೇಷ ಕರ್ತವ್ಯ ಅಧಿಕಾರಿಯನ್ನು ಟ್ಯಾಗ್ ಮಾಡಿ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದ ಸಿರಾಜ್ ಎಂಬುವವರು, ಯುವಜನರಲ್ಲಿ ಜನಪ್ರಿಯವಾಗಿರುವ ಹೊಗೆರಹಿತ ತಂಬಾಕು ಉತ್ಪನ್ನದ ಜಾಹೀರಾತನ್ನು ಪ್ರದರ್ಶಿಸುವ ಹಿಂಭಾಗದ ಫಲಕದೊಂದಿಗೆ ಕೆಎಸ್‌ಆರ್‌ಟಿಸಿ ಬಸ್‌ನ ಫೋಟೋವನ್ನು ಘಿ ನಲ್ಲಿ ಹಂಚಿಕೊಂಡಿದ್ದರು.

"ಸರ್ಕಾರಿ ಸ್ವಾಮ್ಯದ ಬಸ್‌ಗಳಲ್ಲಿ ತಂಬಾಕು, ಸಿಗರೇಟ್ ಮತ್ತು ಮದ್ಯದಂತಹ ಆರೋಗ್ಯಕ್ಕೆ ಹಾನಿಕಾರಕ

(2ನೇ ಪುಟ ನೋಡಿ)

## ಸಿಡಿಲು ಬಡಿದು ಇಬ್ಬರು ಮೃತ: ಸಂತ್ರಸ್ತರಿಗೆ ಭೇಟಿ ಮಾಡಿ ಶಾಸಕರಿಂದ ಸಾಂತ್ವನ, ಪರಿಹಾರ ವಿತರಣೆ



ರಾಯಚೂರು: ಏ.19 : ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರ ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಏಪ್ರೀಲ್ 19ರಂದು ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡರು.

ಅಕಾಲಿಕ ಮಳೆಯಿಂದ ಸಿಡಿಲು ಬಡಿದು ಮೃತಪಟ್ಟ ಕುಟುಂಬದವರಿಗೆ ಭೇಟಿ ಮಾಡಲು ಶಾಸಕರು ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಮರ್ಚಟಾಳ ಮತ್ತು ಉಡಮಗಲ್ ಗ್ರಾಮಗಳಿಗೆ ಭೇಟಿ ನೀಡಿದರು.

ವಿಪತ್ತು ನಿರ್ವಹಣೆಯಲ್ಲಿ ರಾಯಚೂರ ಜಿಲ್ಲಾಡಳಿತವು ತುರ್ತು ಕ್ರಮ ವಹಿಸಿದ್ದರಿಂದ ಘಟನೆ ನಡೆದು 24 ಗಂಟೆಯೊಳಗೆ ಸಂತ್ರಸ್ತರಿಗೆ ಸರ್ಕಾರದಿಂದ ಪರಿಹಾರ ವಿತರಿಸಲು ಕ್ರಮ ವಹಿಸಲಾಗಿದೆ ಎಂದು ಇದೆ ವೇಳೆ ಶಾಸಕರು ತಿಳಿಸಿದರು.

ಇದೆ ವೇಳೆ ಶಾಸಕರು ಎರಡು ಕುಟುಂಬಗಳ ಸಂತ್ರಸ್ಥರಿಗೆ ತಲಾ 5 ಲಕ್ಷ ರೂ. ಗಳಂತೆ 10 ಲಕ್ಷ ರೂ.ಗಳ ಪರಿಹಾರ ಧನ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಏಪ್ರಿಲ್ 18ರಂದು ಸುರಿದ ತೀವ್ರ ಮಳೆಯಿಂದಾಗಿ ರಾಯಚೂರ ತಾಲೂಕಿನ ಮರ್ಚಟಾಳ ಗ್ರಾಮದಲ್ಲಿ ಸಣ್ಣ ಹನುಮಂತ ತಂದೆ ಹೇಮೇಂದ್ರಪ್ಪ ಅವರು ಮತ್ತು ಯರಗೇರಾ ಹೋಬಳಿಯ ಉಡಮಗಲ್ ಗ್ರಾಮದಲ್ಲಿ ಮಲ್ಲಮ್ಮ ಗಂಡ ಭೀಮಯ್ಯ ಅವರು ಸಿಡಿಲು ಬಡಿದು ಮೃತಪಟ್ಟಿದ್ದರು.

## ತೆಲಂಗಾಣ ಭೀಕರ ಬಿಸಿಗಾಳಿ ರಾಜ್ಯವೆಂದು ಘೋಷಣೆ



ಮಲ್ಲಮ್ಮ ನುಡಿ ವಾರ್ತೆ

ಹೈದರಾಬಾದ್,ಏ.19–ಬೇಸಿಗೆಯ ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತೆಲಂಗಾಣ ಶಾಖದ ಅಲೆ ಎದುರಿಸಲು ರಾಜ್ಯವನ್ನು ಭೀಕರ ಬಿಸಿಗಾಳಿ ರಾಜ್ಯ ಎಂದು ಘೋಷಿಸಿದ್ದು ಬಿಸಿಗಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ತಲಾ 4 ಲಕ್ಷ ಪರಿಹಾರ ನೀಡುವುದಾಗಿ ಪ್ರಕಟಿಸಿದ್ದಾರೆ

ಬಿಸಿಲಿನ ತಾಪಮಾನದಿಂದ ಮೃತಪಟ್ಟ ವ್ಯಕ್ತಿಗಳಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಬಲಿಯಾದವರ ಕುಟುಂಬಗಳಿಗೆ 4 ಲಕ್ಷ ರೂ.ಗಳ ಪರಿಹಾರವನ್ನು

(2ನೇ ಪುಟ ನೋಡಿ)

**ಒಂದನೇ ಪುಟದಿಂದ**

# ತಂಬಾಕು ಜಾಹೀರಾತು ತೆರವು

ಉತ್ಪನ್ನಗಳ ಜಾಹೀರಾತುಗಳನ್ನು ಪ್ರದರ್ಶಿಸುವುದು ಸಮಾಜಕ್ಕೆ ಒಳ್ಳೆಯದಲ್ಲ. ಸಮಾಜದ ಹಿತದೃಷ್ಟಿಯಿಂದ, ಸರ್ಕಾರಿ ಸ್ವಾಮ್ಯದ ಬಸ್‌ಗಳಲ್ಲಿ ಅಂತಹ ಜಾಹೀರಾತುಗಳನ್ನು ಪ್ರದರ್ಶಿಸದಿರುವುದು ಉತ್ತಮ. ದಯವಿಟ್ಟು ಗಮನ ಕೊಡಿ" ಎಂದು ಸಿರಾಜ್ ಬರೆದಿದ್ದರು.

ಅದೇ ದಿನ ಪೋಸ್ಟ್ ಅನ್ನು ಗಮನಿಸಿದ್ದ ಮುಖ್ಯಮಂತ್ರಿಯ ವಿಶೇಷ ಕರ್ತವ್ಯ ಅಧಿಕಾರಿ ಡಾ. ವೈಷ್ಣವಿ ಕೆ ಅವರು, ತಕ್ಷಣವೇ ದೂರನ್ನು ಕೆಎಸ್‌ಆರ್‌ಟಿಸಿಗೆ ರವಾನಿಸಿದರು ಮತ್ತು ಮುಖ್ಯ ಸಂಚಾರ ವ್ಯವಸ್ಥಾಪಕರು(ಸಿಟಿಎಂ) ಕ್ರಮ ಕೈಗೊಂಡು ಬಸ್‌ನಿಂದ ತಂಬಾಕು ಜಾಹೀರಾತನ್ನು ತೆಗೆದುಹಾಕುವಂತೆ ಸೂಚಿಸಿದ್ದರು.

ಏಪ್ರಿಲ್ 17 ರಂದು ಡಾ. ವೈಷ್ಣವಿ ಅವರಿಗೆ ಬರೆದ ಪತ್ರದಲ್ಲಿ, ಸಿಟಿಎಂ ತನ್ನ ಬಸ್‌ಗಳಲ್ಲಿ ಜಾಹೀರಾತುಗಳನ್ನು ಇರಿಸಲು ಬಸ್ ನಿಗಮದಿಂದ ಪರವಾನಗಿ ಪಡೆದ ಜಾಹೀರಾತು ಸಂಸ್ಥೆಗೆ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದ್ದಾರೆ.

# ರಾಜ್ಯವೆಂದು ಘೋಷಣೆ

ನೀಡಲಾಗುವುದು ಎಂದು ಹೇಳಿದೆ.ಕಂದಾಯ–ವಿಪತ್ತು ನಿರ್ವಹಣೆ ಇಲಾಖೆಯ ವಿಶೇಷ ಮುಖ್ಯ ಕಾರ್ಯದರ್ಶಿ ಅರವಿಂದ್ ಕುಮಾರ್ ಹೊರಡಿಸಿದ ಸರ್ಕಾರಿ ಆದೇಶದಲ್ಲಿ ಶಾಖದ ಅಲೆಗಳು ಗಮನಾರ್ಹ ಪರಿಣಾಮ ಹೊಂದಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ರೇವಂತ್ ರೆಡ್ಡಿ ನೇತೃತ್ವದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದಿದ್ದಾರೆ

2024 ರಲ್ಲಿ ತೆಲಂಗಾಣದ 33 ಜಿಲ್ಲೆಗಳಲ್ಲಿ 28 ಜಿಲ್ಲೆಗಳು ಕನಿಷ್ಠ 15 ದಿನಗಳ ಕಾಲ ಶಾಖದ ಅಲೆಯ ಪರಿಸ್ಥಿತಿ ಎದುರಿಸಿತ್ತು , ಬಿಸಿಲಿನ ತಾಪವನ್ನು ವಿಪತ್ತು ಎಂದು ವರ್ಗೀಕರಿಸುವ ಯಾವುದೇ ಅಧಿಸೂಚನೆ ಇಲ್ಲದ ಕಾರಣ, ರಾಜ್ಯ, ಆಪದ್ಬಂಧು ಯೋಜನೆಯಡಿ ಬಿಸಿಲಿನ ಆಘಾತಕ್ಕೆ ಒಳಗಾದವರ ಕುಟುಂಬಕ್ಕೆ ಕೇವಲ 50,000 ರೂ.ಗಳ ಸಹಾಯವನ್ನು ಮಾತ್ರ ನೀಡಲು ಸಾಧ್ಯವಿತ್ತು. ಇದೀಗ ಆ ಮೊತ್ತವನ್ನು ನಾಲ್ಕು ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ ಎಂದಿದ್ದಾರೆ

ಸರ್ಕಾರದ ಮಾರ್ಗಸೂಚಿಗಳ ಅಡಿಯಲ್ಲಿ, ರಾಜ್ಯ ಸರ್ಕಾರಗಳು ಔಪಚಾರಿಕವಾಗಿ ತಿಳಿಸಲ್ಪಟ್ಟ ನಂತರ "ರಾಜ್ಯ–ನಿರ್ದಿಷ್ಟ ವಿಪತ್ತುಗಳನ್ನು" ಪರಿಹರಿಸಲು ತಮ್ಮ ವಾರ್ಷಿಕ ನಿಧಿಯ 10 ಪ್ರತಿಶತದವರೆಗೆ ಹಂಚಿಕೆ ಮಾಡಲು ಅನುಮತಿಸಲಾಗಿದೆ. ತೆಲಂಗಾಣ ಸರ್ಕಾರ ಈಗ ಬಿಸಿಲಿನ ಆಘಾತ ಮತ್ತು ಬಿಸಿಲಿನ ತಾಪಮಾನ ಎದುರಸಲು ಅಗ್ತ್ಯಯ ಸಿದ್ಧತೆ ಮಾಡಿಕೊಂಡಿದೆ.

ಆದೇಶದ ಪ್ರಕಾರ, ಜಿಲ್ಲಾ ವೈದ್ಯಕೀಯ ಮತ್ತು ಆರೋಗ್ಯ ಅಧಿಕಾರಿ ಸೇರಿದಂತೆ ಸೂಕ್ತ ಅಧಿಕಾರಿಗಳು, ಶಾಖಕ್ಕೆ ಸಂಬಂಧಿಸಿದ ಸಾವಿಗೆ ಕಾರಣವನ್ನು ನಿರ್ಧರಿಸುವುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ. ಪರಿಹಾರ ಪ್ರಕ್ರಿಯೆಗೊಳಿಸಲು ಗುರುತಿನ ಚೀಟಿಗಳು, ಮರಣ ಪ್ರಮಾಣಪತ್ರಗಳು ಮತ್ತು ಸಂಬಂಧಿತ ಹವಾಮಾನ ವರದಿಗಳು ಸೇರಿದಂತೆ ಅಗತ್ಯ ದಾಖಲೆಗಳನ್ನು ಸಂಗ್ರಹಿಸುವ ಅಧಿಕಾರ ನೀಡಲಾಗಿದೆ

ಶಾಖದ ಅಲೆಗಳಿಂದ ಉಂಟಾಗುವ ಸಾವುಗಳು ಮತ್ತು ತೀವ್ರ ಪರಿಣಾಮಗಳು, ವಿಶೇಷವಾಗಿ ವೃದ್ಧರು, ಮಹಿಳೆಯರು, ಮಕ್ಕಳು ಮತ್ತು ರೈತರು ಮತ್ತು ನಿರ್ಮಾಣ ಕಾರ್ಮಿಕರು ಸೇರಿದಂತೆ ಹೊರಾಂಗಣ ಉದ್ಯೋಗಗಳಲ್ಲಿ ನಿರತರಾಗುವ ಮಂದಿ ಎಚ್ಚರಿಕೆ ವಹಿಸುವಂತೆ ತಿಳಿಸಲಾಗಿದೆ

ಮೂಲಸೌಕರ್ಯಗಳಿಗೆ ಹಾನಿ ಮಾಡುವ ಮತ್ತು ನಷ್ಟವನ್ನು ತಕ್ಷಣವೇ ಅಳೆಯಬಹುದಾದ ಬಿರುಗಾಳಿಗಳು, ಪ್ರವಾಹಗಳು ಅಥವಾ ಭೂಕಂಪಗಳಂತಹ ಇತರ ನೈಸರ್ಗಿಕ ವಿಕೋಪಗಳಿಗಿಂತ ಭಿನ್ನವಾಗಿ, ಶಾಖದ ಅಲೆಗಳು ಅಥವಾ ಸೂರ್ಯನ ಹೊಡೆತದಿಂದ ಉಂಟಾಗುವ ಜೀವಹಾನಿಯನ್ನು ಅಳೆಯಲು ಅಂತಹ ಯಾವುದೇ ವ್ಯವಸ್ಥೆ ಇಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಒಂದು ಸ್ಥಳದಲ್ಲಿ ಗರಿಷ್ಠ ತಾಪಮಾನ ಕನಿಷ್ಠ 40 ಡಿಗ್ರಿ ಸೆಲ್ಸಿಯಸ್ ತಲುಪಿದಾಗ ಮತ್ತು ಸಾಮಾನ್ಯಕ್ಕಿಂತ 5 ಡಿಗ್ರಿ ಸೆಲ್ಸಿಯಸ್‌ನಿಂದ 6 ಡಿಗ್ರಿ ಸೆಲ್ಸಿಯಸ್‌ನಷ್ಟು ನಿರ್ಗಮಿಸಿದಾಗ ಅದನ್ನು ಶಾಖದ ಅಲೆ ಎಂದು ಘೋಷಿಸಲಾಗುತ್ತದೆ.

# ದೇಶದ ಸಂಸ್ಕೃತಿಗೆ, ಅಭಿವೃದ್ಧಿಗೆ ಅಲೆಮಾರಿ ಸಮುದಾಯದ ಕೊಡುಗೆ ಅಪಾರ:ಪಲ್ಲವಿ.ಜಿ



ಮಲ್ಲಮ್ಮ ನುಡಿ ವಾರ್ತೆ

ಬೀದರ:ಏ.19:ನಮ್ಮ ದೇಶದ ಸಾಂಸ್ಕೃತಿಕ ವೈಭವದಲ್ಲಿ, ಜನಜೀವನದಲ್ಲಿ,ಅಭಿವೃದ್ಧಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲೆಮಾರಿ ಜನಾಂಗಗಳ ಕೊಡುಗೆ ಸ್ಮರಣೀಯವಾದುದಾಗಿದೆಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ.ಜಿ ಹೇಳಿದರು.

ಅವರು ಬೀದರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿದ್ದು ಹಮ್ಮಿಕೊಂಡಿದ್ದ 'ಬೀದರ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಲೆಮಾರಿ ಸಮುದಾಯಗಳ ಸಮಸ್ಯೆ, ಸವಾಲುಗಳು ಮತ್ತು ಪರಿಹಾರೋಪಾಯಗಳು' ಕುರಿತಾದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾವಂತರಾದವರು ತಳವರ್ಗದ, ಅಲೆಮಾರಿಗಳ ಚಿಂತನೆ ಮಾಡಬೇಕು. ಧ್ವನಿಯಿಲ್ಲದವರಿಗೆ ಅವಕಾಶ ವಂಚಿತರಿಗೆ ಅವಕಾಶ ನೀಡುವ ಮನಸ್ಸು ಮಾಡಬೇಕು. ಸಮಾಜ ಕಲ್ಯಾಣವೆಂದರೆ ಜನರ ಕಲ್ಯಾಣ, ಸಮುದಾಯದ ಕಲ್ಯಾಣ. ಹೀಗಾಗಿ ಮೂಲನಿವಾಸಿಗಳಾದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಅಲೆಮಾರಿಗಳ ಕುರಿತು ಅಧ್ಯಯನ ಕೈಗೊಂಡು ಅವರ ವಾಸ್ತವ ಬದುಕಿನ ಬಗ್ಗೆ ಬೆಳಕು ಚೆಲ್ಲಬೇಕಾದ ಅವಶ್ಯಕತೆಯಿದೆ ಎಂದರು.

ವಿಶೇಷ ಉಪನ್ಯಾಸಕರಾಗಿದ್ದ ಬಿ.ಎಸ್.ಆನಂದಕುಮಾರ ಏಕಲವ್ಯ ಅವರು ಮಾತನಾಡಿ, ಅಲೆಮಾರಿಗಳು ಸಾರ್ಥಕ ಬದುಕಿನ ನಿಜವಾದ ರೂವಾರಿಗಳು. ನಾಳಿನ ಬದುಕಿಗಾಗಿ, ಸ್ವಚ್ಛ ಭಾರತದ ನಿಜವಾದ ನಾಗರೀಕರು. ಅವರು ತಮ್ಮ ಉಪಜೀವನಕ್ಕಾಗಿ ಹಾವು, ಕೋತಿ, ಕರಡಿ ಆಡುಸುತ್ತಾ ಸಮಾಜದ ಸ್ವಾಸ್ಥ ??ಕ್ಕಾಗಿ, ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸುವ ಪ್ರಾಂಜಲಭಾವದ ಕಾಯಕಜೀವಿಗಳು. ಅವರು ಸ್ವಂತ ಸೂರಿಲ್ಲದೇ ನಿರಂತರ ಸಂಚರಿಸಿ ತಾವು ಪಟ್ಟ ಪಾಡೇ ದೇಶಕ್ಕೆ ಹಾಡಾಗಿಸಿದರು. ಅತ್ಯಂತ ಕಠಿಣ ಕೆಲಸಗಳನ್ನು ಈ ಅಲೆಮಾರಿ, ಬುಡಕಟ್ಟು ಜನಾಂಗದಿಂದಲೇ ಅಂದಿನ ಆಡಳಿತವರ್ಗ ಮಾಡಿಸಿತು. ಅಲೆಮಾರಿಗಳು ಪ್ರಕೃತಿಯ ಆರಾಧಕರು. ಪ್ರಕೃತಿಯೊಂದಿಗೆ ಮಾತಾಡುವವರು. ಅರಣ್ಯದ ಹಕ್ಕನ್ನು ನಿಷೇಧ ಮಾಡಿದಾಗ ಅವರು ಅರಣ್ಯವನ್ನು ತೊರೆದು ದೊಂಬರಾಟ, ದುರುಗಮುರುಗಿ ಮುಂತಾದ ಕಾಯಕದಲ್ಲಿ ತಮ್ಮನ್ನು ಗುರುತಿಸಿಕೊಂಡು ಬಾಳಿದರು. ಇಂದು ಅಲೆಮಾರಿ ಬದುಕು ಆಧುನಿಕತೆಯ ಹೊಡೆತಕ್ಕೆ ಸಿಕ್ಕು ಮೂರಾಬಟ್ಟೆಯಾಗಿದೆ. ಅವರು ತಯಾರಿಸುವ ವಸ್ತುಗಳ ಸ್ಥಾನದಲ್ಲಿ ಇಂದು ಪ್ಲಾಸ್ಟಿಕ್, ಎಲೆಕ್ಟ್ರಾನಿಕ್ ವಸ್ತುಗಳು ಆವರಿಸಿವೆ. ಹೀಗಾಗಿ ಅಲೆಮಾರಿಗಳ ಅಭಿವೃದ್ಧಿ, ಅವರ ಬದುಕು ಕಟ್ಟಿಕೊಡುವಲ್ಲಿ ಎಲ್ಲರೂ ಪ್ರಾಮಾಣಿಕವಾಗಿ, ಸಹಕಾರಿಯಾಗಬೇಕೆಂದರು.

ಬೀದರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಎಸ್.ಬಿರಾದಾರರವರು ಮಾತನಾಡಿ, ಅಲೆಮಾರಿ ಜನಾಂಗ ಧ್ವನಿಯಿಲ್ಲದ, ಶಕ್ತಿಯಿಲ್ಲದ ಜನಾಂಗ. ಬಡವರ ನೋವು ಅದನ್ನು ಅನುಭವಿಸಿದವರಿಗೆ ಮಾತ್ರ ಅರ್ಥವಾಗುತ್ತದೆ. ಇಂದಿಗೂ ನಿರ್ಲಕ್ಷಕ್ಕೊಳಗಾದ ಅಲೆಮಾರಿ ಸಮುದಾಯ ನಿರಂತರ ಸಂಚಾರದಿಂದಾಗಿ ಜನಸಂಖ್ಯಾ ಗಣತಿಯಲ್ಲಿ, ಆಧಾರನಲ್ಲಿಯೂ ಅಡ್ರೆಸ್ ಸಿಗದಷ್ಟು ನತದೃಷ್ಟರಾಗಿದ್ದಾರೆ. ಅವರ ಜೀವನ ನಿಜವಾಗಿಯೂ ಶೋಚನೀಯ. ಅವರು ಸಂಜೆ ನಾಳೆಯ ಹೊಟ್ಟೆಪಾಡಿಗಾಗಿ ಹುಡುಕಾಡುತ್ತಿರುವ ಅತ್ಯಂತ ಕಷ್ಟದ ಬದುಕನ್ನು ಹೊಂದಿದವರಾಗಿದ್ದಾರೆ. ಅಂತಹ ನಿರ್ಲಕ್ಷಿತರ ಸಬಲೀಕರಣಕ್ಕಾಗಿ ಎಲ್ಲರೂ ಶ್ರಮಿಸಬೇಕಾಗಿದೆ ಎಂದರು.

ಬೀದರ ವಿಶ್ವವಿದ್ಯಾಲಯದ ಆಡಳಿತ ಕುಲಸಚಿವರಾದ ಸು–ರೇಖಾ ಕೆ.ಎ.ಎಸ್. ಮಾತನಾಡಿ, ದೇಶದ ಉದ್ಧಾರವೆಂದರೆ ಎಲ್ಲರ ಜೀವನಮಟ್ಟ ಸುಧಾರಣೆಯಾಗಬೇಕು. ಅಲೆಮಾರಿಗಳ, ತಳವರ್ಗದ ಜನರೆಲ್ಲ ಮುಖ್ಯವಾಹಿನಿಗೆ ತರಬೇಕಾದ ಅವಶ್ಯಕತೆಯಿದೆ ಎಂದರು.

ಕಾರ್ಯಕ್ರಮದಲ್ಲಿ ಬೀದರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಶ್ರೀನಾಗಭೂಷಣ ಕಮತಾಣೆ, ಶಾಂತಲಿಂಗ ಸಾವಳಗಿ, ಸಚಿನ್ ಶಿವರಾಜ, ವಿಠ್ಠಲದಾಸ ಪ್ಯಾಗೆ, ಅಬ್ದುಲ್ ಸತ್ತಾರಸಾಬ, ವೈಷ್ಣವಿ ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರಾದ ಸಿಂಧು, ಬೀದರ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ.ಪರಮೇಶ್ವರನಾಯ್ಕ.ಟಿ., ಬೀದರ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ ಡಾ.ರವೀಂದ್ರನಾಥ ವಿ.ಗಬಾಡಿ, ಬೀದರ ಹಾಗೂ ವಿವಿಧ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ವಿಶ್ವವಿದ್ಯಾಲಯದ ಅಧ್ಯಾಪಕ, ಅಧ್ಯಾಪಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಅಲೆಮಾರಿ ಜನರಿಗೆ ತಲುಪಿಸಿ :ಪಲ್ಲವಿ ಜಿ.



ಬೀದರ : ಏ.19: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಅಲೆಮಾರಿ ಜನರಿಗೆ ತಲುಪಿಸಬೇಕೆಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಮಗಡದ ಅಲೆಮಾರಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಿರುವ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ ಹಾಗೂ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ಬೀದರ ಜಿಲ್ಲೆಯಲ್ಲಿ ಮೂರು ದಿವಸ ಪ್ರವಾಸಕೈಗೊಂಡ ಅವರು ಹುಮನಾಬಾದ, ಬಸವಕಲ್ಯಾಣ, ಭಾಲ್ಕಿ, ಔರಾದ ಮತ್ತು ಬೀದರನ ಅಲೆಮಾರಿ ಸಮುದಾಯದವರು ವಾಸಿಸುವ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ನಿವಾಸಿಗಳೊಂದಿಗೆ ಮಾತನಾಡಿ ಸಮಸ್ಯೆಗಳನ್ನು ತಿಳಿದುಕೊಳ್ಳಲಾಯಿತು. ನಿಗಮ ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಪೂರಕವಾಗಿದೆ. ಪ್ರತಿ ಜಿಲ್ಲೆಯಲ್ಲೂ ಪ್ರವಾಸ ಮಾಡಿ ಅಲೆಮಾರಿಗಳ ಸ್ಥಿತಿಗತಿ, ಸಮಸ್ಯೆಗಳಲ್ಲಿ ಪರಿಶೀಲಿಸಿ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಹಿತಿ ನೀಡಲಾಗುತ್ತಿದೆ. ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕೆ ಪಾಲಕರು ಆದ್ಯತೆ ನೀಡಬೇಕು. ಅಲೆಮಾರಿಗಳು ಮನೆ, ಸ್ವಯಂ ಉದ್ಯೋಗ, ಒಟ್ಟಾರೆಯಾಗಿ ಜೀವನದಲ್ಲಿ ಭದ್ರತೆ ದೊರೆತು ಸಮಾಜದ ಮುಖ್ಯವಾಹಿನಿಗೆ ಬರಬೇಕು. ಪ್ರತಿ ಹಂತದಲ್ಲಿ ಸರ್ಕಾರ ಸವಲತ್ತುಗಳನ್ನು ಒದಗಿಸುತ್ತಿದೆ ಎಂದರು. ಅಲೆಮಾರಿ ಜನರಿಗೆ ಸ್ವಂತ ನಿವೇಶನಗಳಿಲ್ಲ, ವಸತಿಗಳಿಲ್ಲ, ಪರಿತರ ಚೀಟಿ, ಆಧಾರ ಕಾರ್ಡ, ಜಾತಿ ಪ್ರಮಾಣ ಪತ್ರ ಇರುವುದಿಲ್ಲ ಹಾಗೂ ಅವರು ವಾಸಿಸುವ ಸ್ಥಳಗಳು ಸ್ವಚ್ಛವಾಗಿಲ್ಲ ಮತ್ತು ಶಿಕ್ಷಣದಿಂದ ಬಹಳ ವಂಚಿತರ ಬಗ್ಗೆ ಮಾಹಿತಿ ಕಲೆ ಹಾಕಿ ವರದಿ ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದ್ದೆನೆ. ಸರ್ಕಾರ ಅಲೆಮಾರಿ ಜನರ ಅಭಿವೃದ್ಧಿಗಾಗಿ ಹತ್ತಾರು ಯೋಜನೆಗಳನ್ನು ಹಾಕಿಕೊಂಡಿದೆ ಅದು ಅವರಿಗೆ ತಲುಪಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಈ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ನಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರ ಕಾರ್ಯದರ್ಶಿ ಆನಂದ್, ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಸಿಂಧು ರಘು ಹಚ್.ಎಸ್, ಬೀದರನ ತಹಸೀಲ್ದಾರರಾದ ಟಿ.ಮೆಹತ್, ಡಿ.ವಾಯ್.ಎಸ್.ಪಿ.ಶಿವನಗೊಡ ಪಾಟೀಲ್, ಎಲ್ಲಾ ತಾಲೂಕಿನ ಸಮಾಜ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಅಲೆಮಾರಿ ಅನುಷ್ಠಾನ ಸಮಿತಿ ಸದಸ್ಯರುಗಳು, ಅಲೆಮಾರಿ ಸಮುದಾಯದ ಮುಖಂಡರು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ನಿರಂತರ ಪ್ರಯತ್ನದಲ್ಲಿರಬೇಕು: ಚಂದ್ರಕಾಂತ ಶಾಬಾದಕರ್



ಬೀದರ:ಏ.19:ಡೈಮಂಡ್ ಶಿಕ್ಷಣ ಸಂಸ್ಥೆ ಅಡಿಯಲ್ಲಿ ಬರುವ ಶಾಹು ಮಹಾರಾಜ್ ಪಿಯು ಸೈನ್ಸ್ ಕಾಲೇಜು ವತಿಯಿಂದ 2024–25ನೇ ಸಾಲಿನ ದ್ವಿತೀಯ ವರ್ಷದ ಪದವಿಪೂರ್ವ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗರದ ಸರ್ಕಾರಿ ನೌಕರರ ಭವನದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಚಂದ್ರಕಾಂತ ಶಾಬಾದಕರ ಉದ್ಘಾಟಿಸಿ ಮಾತನಾಡಿದರು. ಮಕ್ಕಳು ಸಮಯಪ್ರಜ್ಞೆ ಹಾಗೂ ಶಿಸ್ತನ್ನು ಮೈಗೂಡಿಸಿಕೊಂಡು ಓದಿನ ಕಡೆ ಗಮನ ಹರಿಸಿದರೆ ಜೀವನದಲ್ಲಿ ಖಂಡಿತ ಯಶಸ್ಸು ಸಾಧಿಸಬಹುದು. ಅಭ್ಯಾಸದ ಜೊತೆಗೆ ತಂದೆ ತಾಯಿಗಳಿಗೆ ಗೌರವಿಸುವುದು, ಮೊಬೈಲ್‌ನಿಂದ ದೂರವಿದ್ದು, ಸತತ ಪ್ರಯತ್ನ ಮಾಡಬೇಕು. ಅಂದಾಗ ಮಾತ್ರ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಂಕಗಳನ್ನು ಗಳಿಸಿ ಉನ್ನತ ಮಟ್ಟಕ್ಕೆ ಬೆಳೆಯಿರಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಶ್ರೀಮತಿ ಶೈನಿ ಪ್ರದೀಪ್ ಗುಂಟಿ ಮಾತನಾಡಿ ಇಂದಿನ ಕಾಲದಲ್ಲಿ ಸಾಕಷ್ಟು ಟೆಕ್ನಾಲಜಿ ಬಂದಿವೆ. ಜಾಬ್ ಓರಿಯೆಂಟೆಡ ಕೋರ್ಸ್‌ಗಳು ಬಂದಿವೆ. ಅವುಗಳನ್ನು ಸದುಪಯೋಗ ಮಾಡಿಕೊಂಡು ಜೀವನದಲ್ಲಿ ಶ್ರಮಜೀವಿಗಳಾಗಿ ಬದುಕಬೇಕೆಂದು ಸಲಹೆ ನೀಡಿದರು. ಡೈಮಂಡ ಗ್ರೂಪ್ ಆಫ್ ಸಂಸ್ಥೆ ಅಧ್ಯಕ್ಷ ವೈ ಮಾಧವರಾವ ಅವರು ಮಾತನಾಡಿ ಯಾರ ತಂದೆ ತಾಯಿಗಳಿಗೆ ಗೌರವ ಕೊಡುವುದಿಲ್ಲವೋ ಅಂಥವರು ಅನುತ್ತೀರ್ಣರಾಗಿದ್ದಾರೆ. ತಂದೆ ತಾಯಿ ಹಾಗೂ ಪಾಲಕರ ಆದೇಶ ಪಾಲಿಸಿದವರು ಪಾಸಾಗಿದ್ದಾರೆ.

# ಜನಿವಾರ ತೆಗೆಸಿದ ಪ್ರಕರಣ ಖಂಡಿಸಿ ಪ್ರತಿಭಟನೆ



ಕಲಬುರಗಿ,ಏ.19:ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳ ಪವಿತ್ರ ಜನಿವಾರ ತೆಗೆಸಿರುವ ಅಧ್ವಾನ ಘಟನೆಯನ್ನು ಬ್ರಾಹ್ಮಿನ್ ಆರ್ಗನೈಜೇಶನ್ ಆಫ್ ಇಂಡಿಯಾ, ವಿಶ್ವಮಧ್ವ ಮಹಾಪರಿಷತ್ತು ಸೇರಿದಂತೆ ವಿವಿಧ ಸಂಘಟನೆಗಳು ತೀವ್ರವಾಗಿ ಖಂಡಿಸಿವೆ. ಈ ಹಿನ್ನೆಲೆಯಲ್ಲಿ ಇಂದು ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಟೈರ್ ಸುಟ್ಟು ತಮ್ಮ ಆಕ್ರೋಶ ಹೊರಹಾಕಿದರು.

ವರ್ಷಪೂರ್ತಿ ಅಧ್ಯಯನ ಮಾಡಿ ಪರೀಕ್ಷೆಯ ತಯಾರಿ ಮಾಡಿಕೊಂಡಿದ್ದ ವಿದ್ಯಾರ್ಥಿಗಳ ಜನಿವಾರ ತೆಗೆಸಿಹಾಕಿದ್ದು, ಪರೀ–ಕ್ಷೆ ಪ್ರವೇಶಕ್ಕೆ ನಿರಾಕರಿಸಿದ್ದು, ಸಂವಿಧಾನ ವಿರೋಧಿ ಕ್ರಮ. ಇದು ಹಿಂದೂ ವಿರೋಧಿ ನಿಲುವಾಗಿದ್ದು ಖಂಡನೀಯ ಎಂದು ಕಿಡಿಕಾರಿದರು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು. ಕ್ರಮ ಕೈಗೊಳ್ಳದಿದ್ದಲ್ಲಿ ಮುಂದೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವದು ಎಂದು ಎಚ್ಚರಿಸಿದರು. ನಂತರ ಜಿಲ್ಲಾಡಳಿತದ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಘಂಟಿರಾಮಾಚಾರ್ಯ, ರಾಜ್ಯಾಧ್ಯಕ್ಷ ರವೀಂದ್ರ ಕುಲಕರ್ಣಿ, ಡಿ.ಕೆ ಕುಲಕರ್ಣಿ, ವೆಂಕಟೇಶ ಕುಲಕರ್ಣಿ, ಸುಮಂಗಲಾ ಚಕ್ರವರ್ತಿ, ಗುರುರಾಜ ಜೋಶಿ, ವೆಂಕಟೇಶ ಚಿತ್ತಾಪುರ, ಕೆಬಿ ಕುಲಕರ್ಣಿ, ಬಿಜಿದೇಶಪಾಂಡೆ, ಅನಂತ ಕಾಮೇಗಾಂವಕರ್ ಇದ್ದರು.

# ಕಮಲನಗರ:ಮೆಥೋಡಿಸ್ಟ್ ಚರ್ಚನಲ್ಲಿ ಶ್ರದ್ಧಾ, ಭಕ್ತಿಯಿಂದ ಗುಡ್ ಫ್ರೈಡೆ



ಮಲ್ಲಮ್ಮ ನುಡಿ ವಾರ್ತೆ


ಕಮಲನಗರ:ಏ.19:ಪಟ್ಟಣದ ಮೆಥೋಡಿಸ್ಟ್ ಚರ್ಚನಲ್ಲಿ ಜಗತ್ತಿಗೆ ಶಾಂತಿ ಸಂದೇಶ ಸಾರಿದ ಏಸುಕ್ರಿಸ್ತ ಅವರನ್ನು ಶಿಲುಬೆಗೇರಿಸಿದ ದಿನವಾದ ಶುಭ ಶುಕ್ರವಾರ ಗುಡ್ ಫ್ರೈಡೆ ಯನ್ನು ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ರೆವರೆಂಡ ಅಮೀತಕುಮಾರ ರೆಕಾಟೆ ಮಾತನಾಡಿ, ಜಗತ್ತಿನಲ್ಲಿ ಶಾಂತಿ ನೆಲೆಸಲು ಏಸುಸ್ವಾಮಿ ಸಾರಿದ ಶಾಂತಿ ಸಂದೇಶ, ಅವರ ತ್ಯಾಗ, ಪ್ರೀತಿ ಹಾಗೂ ಆದರ್ಶಗಳು ನಮ್ಮೆಲ್ಲರಿಗೆ ದಾರಿ ದೀಪವಾಗಿವೆ ಎಂದರು.

ವೈರತ್ವ ಭಾವ ಇಲ್ಲದೆ ನಾವು ಎಲ್ಲರನ್ನು ಪ್ರೀತಿ ಇಂದ ಬಾಳಬೇಕು, ಅವಾಗ ಮಾತ್ರ ನಮಗೆ ಜೀವನದಲ್ಲಿ ನಿಜವಾದ ನೆಮ್ಮದಿಯ ಬದುಕು ಬದುಕಲು ಸಾಧ್ಯ ಎಂದು ನುಡಿದರು.

ಸದರಿ ಕಾರ್ಯಕ್ರಮದಲ್ಲಿ ಸುಶೀಲ ಘಾಗರೆ, ನಿಲೇಶ ಘಾಗರೆ, ದಯಾನಂದ ಘಹುಕಾಂಬಳೆ, ಲಕ್ಷ್ಮಣ ಘಾಗರೆ, ರಾಮು ಘಾಗರೆ, ದಯಾನಂದ ಔತಾಡೆ, ಶ್ರಾವಣ ಘಾಗರೆ, ಜೋಶವಾ ಫಿರಂಗೆ ಹಾಗೂ ಕಮಲನಗರ ತಾಲೂಕಿನ ಕ್ರಿಸ್ತ ಬಂದುಗಳು ಇದ್ದರು.

# ಹಿರಿಯರ ಹಬ್ಬದ ಸಡಗರದಲ್ಲಿ ಭೋವಿ ವಡ್ಡರ ಸಮುದಾಯ



ಮಲ್ಲಮ್ಮ ನುಡಿ ವಾರ್ತೆ

ಅಫಜಲಪುರ:ಏ.19:ಪಟ್ಟಣದ ವೆಂಕಟೇಶ್ವರ ದೇವಸ್ಥಾನದಲ್ಲಿ ಹಿರಿಯರ ಹಬ್ಬದ ಸಡಗರದಲ್ಲಿ ಕೆಪಿಸಿಸಿ ಸದಸ್ಯ ಅರುಣಕುಮಾರ ಪಾಟೀಲ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು.

ನಂತರ ಮಾತನಾಡಿದ ಅರುಣಕುಮಾರ ಪಾಟೀಲ ಭೋವಿವಡ್ಡರ ಸಾಮಾಜ ಶ್ರಮಿಕ ವರ್ಗದ ಜನರಾಗಿದ್ದು, ಶೈಕ್ಷಣಿಕವಾಗಿ, ಆರ್ಥಿಕವಾಗಿ ರಾಜಕೀಯವಾಗಿ ಮುಂದೆ ಬರಬೇಕು. ಭಕ್ತಿಯಲ್ಲಿ ಶಿವನ ಆರಾಧಕರಾದರೆ ಶಕ್ತಿಯಲ್ಲಿ ಭಲಭೀಮನ ಮಿರುಸುವಂತಹವರು ಭೋವಿವಡ್ಡರ ಸಮುದಾಯದವರು. ಈಗಾಗಲೇ ಭೋವಿವಡ್ಡರ ಸಮುದಾಯದ ಹೆಸರಿನಲ್ಲಿ ಕಾಲೋನಿ ನಿರ್ಮಾಣ ಮಾಡಲಾಗಿದೆ. ಹಿರಿಯರಿಗೆ ಗೌರವ ಕೊಡುವ ಸಮಾಜ ಹಾಗೂ ಸಾಂಸ್ಕೃತಿ ಕವಾಗಿ ಎಲ್ಲಾ ರಂಗಗಳಲ್ಲಿಯೂ ಮುಂದುವರೆದ ಸಮಾಜ ನಮ್ಮ ಸೋದರ ಸಮುದಾಯ ಭೋವಿ ಸಮಾಜ. ಅವರ ಕಷ್ಟ ಸುಖಗಳಲ್ಲಿ ನಾನು ಯಾವಾಗಲೂ ಭಾಗಿಯಾಗುತ್ತೇನೆ ಎಂದರು.

ನಂತರ ಮಾತನಾಡಿದ ಮಾಜಿ ಜಿಲ್ಲಾ ಪಂಚಾಯತ ಸದಸ್ಯ ಮತೀನ್ ಪಟೇಲ್ ಸಮಾಜದ ಏಳಿಗೆಗಾಗಿ ನಾವು ಎಲ್ಲಾ ರೀತಿಯ ಸಹಾಯ ಮಾಡಲು ನಾವು ಸಿದ್ಧ. ಹಿರಿಯರ ಹಬ್ಬ ಮಾಡುತ್ತಿರುವ ಭೋವಿ ಸಮಾಜದ ಯುವಕರು ಹಾಗೂ ಮುಖಂಡರಿಗೆ ಶುಭವಾಗಲಿ. ನಿಮ್ಮಿಂದ ಹಿರಿಯರಿಗೆ ಗೌರವ ನೀಡುವ ಮನೋಭಾವ ಎಲ್ಲರಲ್ಲೂ ಮೂಡಲಿ ಎಂದರು.


ಇದೆ ಸಂದರ್ಭದಲ್ಲಿ ಭಾರತೀಯ ಸೇನೆ ರಾಷ್ಟ್ರೀಯ ಅಧ್ಯಕ್ಷರಾದ ರಾಜು ಸುರಪುರ ಡೊಣ್ಣೆಗೆರಿ, ವಕೀಲರಾದ ರವಿಚಂದ್ರ ಗುತ್ತೇದಾರ, ದೇವು ನಡುವಿನ, ಶ್ರೀಕಾಂತ ಡಾಬಿ ಮನಿ, ಪರಶುರಾಮ ಮಾಡ್ಯಾಳ, ಪವನ ದೊಡ್ಡನಿ,

ತಿಪ್ಪಣ್ಣ ಗಾಡಿವಡ್ಡರ ವೆಂಕಟೇಶ್ವರ ದೇವ ಸ್ಥಾನದ ಪೂಜಾರಿಗಳು, ತಿಪ್ಪಣ್ಣಗಾಡಿವಡ್ಡರ, ವೆಂಕಟೇಶ, ತಿಮ್ಮಣ್ಣಾ, ಚಂದ್ರಕಾಂತ, ಪ್ರಮೋದ,

ಮಾರುತಿ, ದೇವೆಂದ್ರ,

ರಾಜುಗೋಟೆಕರ, ಮಹಾಂತೇಶ, ಶೆಟ್ಟೆಪ್ಪ, ರಾಜುವೆಂಕಪ್ಪ, ತಿಮ್ಮಣ್ಣ, ಅಶೋಕ, ಹಣಮಂತ, ಶಾಂತಕುಮಾರ, ಲಕ್ಷ್ಮಣ ದಂಡಗೊಲ್ಕರ, ಲಕ್ಷ್ಮಣ ಭಾಗೇವಾಡಿ, ಶಾಂತು ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

# ತಂದೆ, ತಾಯಿ ದೇವರ ಸ್ವರೂಪ: ಜೇಮಸಿಂಗ್ ಮಹಾರಾಜರು




ಮಲ್ಲಮ್ಮ ನುಡಿ ವಾರ್ತೆ

ಚಿಂಚೋಳಿ:ತಂದೆತಾಯಂದಿರು ತೀರ್ಥ ಸ್ವರೂಪ ಇದ್ದಂತೆ. ಹಲವಾರು ತೀರ್ಥಯಾತ್ರೆ ಕೈಗೊಂಡರು ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಬದುಕುವುದು ಮುಖ್ಯವಲ್ಲ, ಯಾವ ರೀತಿಯಾಗಿ ಬದುಕುತ್ತೇವೆ ಎನ್ನುವುದು ಮುಖ್ಯ' ಎಂದು ಮುಗಳನಾಗಾಂವ ಜೇಮಸಿಂಗ್ ಮಹಾರಾಜರು ತಿಳಿಸಿದರು. ತಾಲೂಕಿನ ಗಡಿ ನಿಂಗದಳ್ಳಿ ತಾಂಡಾದಲ್ಲಿ ಸ್ವ.ತುಳಜಾಬಾಯಿ ಸ್ವ. ಮೋನು (ಅಜ್ಜ& ಅಜ್ಜಿ) ಹಾಗೂ ಸ್ವ.ಗುಜರಿಬಾಯಿ ಸ್ವ. ಭೀಮ್ಲಾ ಕಿಶನ್ (ತಂದೆ&ತಾಯಿ) ಇವರ ಹೆಸರಿನಲ್ಲಿ ಹೊಸದಾಗಿ ನಿರ್ಮಿಸಿದ ಪರಮ ಶಾಂತಿ ಧಾಮ ಹೆಸರಿನ ಸಮಾಧಿಯ ಶಾಂತಿ ಸಮಾರಾಧನೆ ಹಾಗೂ ಮಾನವ ಧರ್ಮ ಸತ್ಸಂಗ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ಭೂಮಿಯ ಮೇಲೆ ಮಾನವನ ಹುಟ್ಟು ಅಪರೂಪ. ಜೀವನದುದ್ದಕ್ಕೂ ನಾವು ಮಾಡಿದ ಕಾಯಕದಲ್ಲಿ ನಮ್ಮ ಕರ್ಮಗಳು ನಮ್ಮ ಜೊತೆಗೆ ಬರುತ್ತವೆ. ಋಷಿ, ಪಿತೃ ಹಾಗೂ ದೇವ ಋಣಗಳನ್ನು ತೀರಿಸುವುದು ಮುಖ್ಯವಾಗಿದೆ. ಶಿಷ್ಯರಿಂದ ಮಾತ್ರ ಗುರುವಿಗೆ ಮಹತ್ವ ಬರುತ್ತದೆ. ಶಿಷ್ಯ ಎತ್ತರಕ್ಕೆ ಬೆಳೆದಷ್ಟು ಗುರುವಿನ ಸ್ಥಾನ ಗಟ್ಟಿಯಾಗುತ್ತ ಹೋಗುತ್ತದೆ ಎಂದು ಯಲ್ಲಾಲಿಂಗೇಶ್ವರ ಪುಣ್ಯಾಶ್ರಮ ಮುಗಳನಾಗಾಂವ ಜೇಮಸಿಂಗ್ ಮಹಾರಾಜರು ಹೇಳಿದರು. ಕಲ್ಬುರ್ಗಿ ಲೋಕಸಭಾ ಮಾಜಿ ಸದಸ್ಯ ಡಾ. ಉಮೇಶ್ ಜಾಧವ್ ಮಾತನಾಡಿ, ಲಂಬಾಣಿ ಸಮಾಜ ತೀರ ನಿರ್ಲಕ್ಷ್ಯಕ್ಕೆ ಬಳಪಟ್ಟ ಸಮಾಜವಾಗಿದೆ, ಸಮಾಜದ ಜನರು ಒಗ್ಗಟ್ಟಿನಿಂದ ಸೌಹಾರ್ದತೆಯಿಂದ ಬಾಳಲು ತಿಳಿಸಿದರು. ಕರ್ನಾಟಕ ಸರ್ಕಾರ ಇತ್ತಿಚೆಗೆ ಬಿಡುಗಡೆ ಮಾಡಿದ ಜಾತಿ ಜನಗಣತಿ ವರದಿಯಿಂದ ಹಲವಾರು ಸಮಾಜಗಳಿಗೆ ನೋವುಯಾಗಿದೆ, ನಮ್ಮ ಸಮಾಜದ ಜನಗಣತಿ ಒಳ್ಳೆಯ ರೀತಿಯಾಗಿಲ್ಲ, ವೀರಶೈವ ಸಮಾಜದ ಹಲವಾರು ಮಠಾಧೀಶರು ಕೂಡ ಲಿಂಗಾಯತ ಹಾಗೂ ವೀರಶೈವ ಸಮಾಜದ ಜನಗಣತಿ ಒಳ್ಳೆಯ ರೀತಿಯಲ್ಲಿ ಸಮೀಕ್ಷೆ ಮಾಡಿಲ್ಲ ಎಂದು ಅತೃಪ್ತಿ ವ್ಯಕ್ತಪಡಿಸಿ ಬಹಿರಂಗ ಹೇಳಿಕೆ ನೀಡಿದ್ದಾರೆ. ಗೋಪಾಲಸಿಂಗ್ ರಾಥೋಡ ಅವರು ಸಮಾಜ ಕಾರ್ಯಕರ್ತರಾಗಿ ಒಂದು ಜನಜಾಗೃತಿ ಒಡಮುಡಿಸುತ್ತಿದ್ದಾರೆ ಲಂಬಾಣಿ ಸಮಾಜದ ಒಗ್ಗಟ್ಟಿಗಾಗಿ ಹಗಲಿರಳು ಶ್ರಮಿಸುತ್ತಿದ್ದಾರೆ ಎಂದರು. ಅವರ ಹಿರಿಯರ ಹಾಗೂ ತಂದೆ ತಾಯಿಗಳ ಸಮಾಧಿ ಶಾಂತಿ ಸಮಾರಾಧನೆ ಹಾಗೂ ಸತ್ಸಂಗ ಕಾರ್ಯಕ್ರಮ ಹಮ್ಮಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದರು. ಕೀರ್ತನಕೇಸರಿ ಪುರಸ್ಕೃತ ಮಲ್ಲಯ್ಯಾ ಶಾಸ್ತ್ರಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ತಂದೆ ತಾಯಿಗಳನ್ನು ನಿರ್ಲಕ್ಷದಿಂದ ನೋಡುತ್ತಿದ್ದಾರೆ ತಂದೆ ತಾಯಿಗಳನ್ನು ದೇವರ ಸಮಾನ ಎಂದು ತಿಳಿದು ಅವರನ್ನು ಒಳ್ಳೆ ರೀತಿಯಲ್ಲಿ ನೋಡಿಕೊಳ್ಳಲು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಅವಿನಾಶ ಜಾಧವ್ ಮಾತನಾಡಿ, ಚಿಂಚೋಳಿ ಮತಕ್ಷೇತ್ರದ ಜನತೆಯ ಆಶೀರ್ವಾದದಿಂದ ಹಾಗೂ ತಾಂಡಾ ಜನಗಳ ಆಶೀರ್ವಾದದಿಂದ ಎರಡನೇ ಬಾರಿಗೆ ನಿಮ್ಮ ಸೇವೆ ಸಲ್ಲಿಸಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು ಸಲ್ಲಿಸಿದರು. ನಾನು ಪ್ರತಿ ಗ್ರಾಮಗಳ ಹಾಗೂ ತಾಂಡಾಗಳ ಅಭಿವೃದ್ಧಿಯ ಕಾರ್ಯಗಳು ಕೈಗೊಂಡಿದ್ದೇನೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಕೂಡ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಗಳು ಮಾಡಲು ಸಹಕರಿ ನೀಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಸ್ವಾಧಿ ಮತೆ ರಮಾದೇವಿ, ಹಾಲು ಒಕ್ಕೂಟದ ನಿರ್ದೇಶಕ ಅಶೋಕ ಪಡಶೆಟ್ಟಿ, ಕರ್ನಾಟಕ ಬಂಜಾರ ಲಮಾಣಿ ಸೇವಾ ಸಂಘದ ಜಿಲ್ಲಾಧ್ಯಕ್ಷ ಬಿ.ಬಿ.ನಾಯಕ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಮನೋಹರ್ ಪವಾರ್, ಪರಿಸರ ವಾಹಿನಿ ಜಿಲ್ಲಾಧ್ಯಕ್ಷ ಶೈಲೇಂದ್ರ ಕಾವಡಿ, ಬಿಸಿಎಂ ಕಲ್ಯಾಣಾಧಿಕಾರಿ ರಮೇಶ್ ರಾಠೋಡ್, ಗ್ರಾಮ ಪಂಚಾಯತ್ ಅಧ್ಯಕ್ಷೆ ಮೀನಾಕ್ಷಿ ರಾಠೋಡ, ಬಂಜಾರ ಸಂದೇಶ ಟಿವಿ, ಸುಭಾಷ ಚವ್ಹಾಣ, ಬೀದರ್ ಸಾಮಾಜಿಕ ವಲಯ ಅರಣ್ಯಾಧಿಕಾರಿ ಶಿವಕುಮಾರ್ ರಾಠೋಡ ಸೇರಿದಂತೆ ರಾಠೋಡ ಪರಿವಾರದವರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು. ಪ್ರಸಾದ ವ್ಯವಸ್ಥೆ ಏರ್ಪಡಿಸಿದ್ದರು.

## ಸಾಮಾಜಿಕ ಕಾರ್ಯಕರ್ತ ಅಸ್ಲಾಂಮಿಯಾಗೆ ಕಾಳಗಿಯಲ್ಲಿ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಕಾಳಗಿ:– ಶ್ರೀ ನೀಲಕಂಠೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ ನಡೆಯುತ್ತಿರುವ ಪುರಾಣ ಕಾರ್ಯಕ್ರಮ ಬರದಿಂದ ನಡೆಯುತ್ತಿದೆ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲೆಯ ಚಿಟಗುಪ್ಪ ತಾಲೂಕಿನ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಪಾಲ್ಗೊಂಡಿದರು. ಇವರಿಗೆ ಜಾತ್ರಾ ಮಹೋತ್ಸವ ಕಮಿಟಿ ವತಿಯಿಂದ ಸನ್ಮಾನಿಸಿ ಗೌರವಿಸಿದರು. ಕಾಳಗಿ ಪಟ್ಟಣದ ಉದ್ಯಮಿ ವಿಶ್ವನಾಥ ವನಮಾಲೆ ಅವರ ಅಂಗಡಿಯಲ್ಲಿ ಗೆಳೆಯರ ಬಳಗದಿಂದ ಮಹಮ್ಮದ್ ಅಸ್ಲಾಂಮಿಯಾ ಅವರಿಗೆ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಪೂಜ್ಯರು ಹಾಗೂ ದೇವಸ್ಥಾನ ಸಮಿತಿ ಅಧ್ಯಕ್ಷ ರಾಜೇಶ್ ಗುತ್ತೆದಾರ್, ಪರಿಸರವಾದಿ ಶೈಲೇಂದ್ರ ಕಾವಡಿ, ನಿವೃತ್ತ ಶಿಕ್ಷಕ ಘುಡುಸಾಬ್, ನೀಲಕಂಠರಾವ ಮಡಿವಾಳ, ಅಭಿಷೇಕ ವನಮಾಲೆ, ಚಂದ್ರಕಾಂತ ಮಠಪತಿ, ರಾಜಕುಮಾರ ಆರ್. ಹಡಪದ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸಾಧಕ ಮಾರುತಿ ಚವ್ಹಾಣನ ಸಹಾಯಕ್ಕೆ ಜಿಲ್ಲಾಡಳಿತ,ರಾಜ್ಯ ಸರ್ಕಾರ ಕೂಡಲೇ ಬರಲು ಮನವಿ.



ಮಲ್ಲಮ್ಮ ನುಡಿ ವಾರ್ತೆ.

ಯಾದಗಿರಿ: ಕುಗ್ರಾಮದಿಂದ ನೆರೆಯ ದೇಶದವರೆಗೂ ಹೋಗಿ ಫ್ಲೋರೆಸ್ಲಿಂಗ್ ಕ್ರೀಡೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ಬಂದಿರುವ ಗಿರಿಜಿಲ್ಲೆಯ ಹರಯದ ಪೋರ ಮಾರುತಿ ಚವ್ಹಾಣನಿಗೆ ಈಗ

ಡಬ್ಲೂಡಬ್ಲೂಇ ಕ್ರೀಡೆಯಲ್ಲಿ ಭಾಗವಹಿಸಲು ಆಸ್ಟ್ರೇಲಿಯಾ ದೇಶಕ್ಕೆ ಹೊಗುವವನಿದ್ದು, ಇದ–ಕ್ಕೆ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ಅಗತ್ಯ ಸಹಾಯ ಮಾಡಬೇಕೆಂದು ಬಂಜಾರ ಸಮಾಜದ ವಿವಿಧ ಸಂಘಟನೆಗಳ ಪರವಾಗಿ ಉಪನ್ಯಾಸಕ ಪಾಂಡು ಎಲ್. ರಾಠೋಡ್, ವಕೀಲ ಶಾಂತಕುಮಾರ ಡಿ.ಜಾಧವ್ ಮತ್ತು ಜಿಪಂ ಮಾಜಿ ಸದಸ್ಯ ದೇವರಾಜ್ ನಾಯಕ್ ಒತ್ತಾಯಿಸಿದ್ದಾರೆ.

ಶುಕ್ರವಾರ ಪತ್ರಿಕಾ ಭವನದಲ್ಲಿ ಸಾಧಕ ಮಾರುತಿ ಸಮ್ಮುಖದಲ್ಲಿಯೇ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುಮಠಕಲ್ ತಾಲೂಕಿನ ಮಲ್ಲಾಪುರ ತಾಂಡಾ ಈ ಪ್ರತಿಭೆ ಅಂತರ ರಾಷ್ಟ್ರಮಟ್ಟದಲ್ಲಿ ತನ್ನ ಪ್ರತಿಭೆ ಮೆರೆಯುವ ಅವಕಾಶ ಬಂದಿದೆ. ಕಾರಣ ಗ್ರಾಮೀಣ ಪ್ರತಿಭೆಗೆ ಆರ್ಥಿಕ ಸಹಾಯ ಸೇರಿದಂತೆಯೇ ಬೇಕಾದ ಅಗತ್ಯ ಸಹಾಯ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಮೂಲತಃ ಅಡವಿಯಲ್ಲಿ ಹುಟ್ಟಿ ಬೆಳೆದ ಮಾರುತಿ, ಯಾವ ಗಾಡಫಾದರ್ ಇಲ್ಲದೇ ಇಷ್ಟು ಎತ್ತರಕ್ಕೆ ಬೆಳೆದಿದ್ದಾನೆ. ಈಗ ಇನ್ನಷ್ಟು ಎತ್ತರಕ್ಕೆ ಬೆಳೆಯಲು ರಾಜ್ಯ ಮತ್ತು ಕೇಂದ್ರ ಸರ್ಕಾರ ತುರ್ತು ಸಹಾಯ ಮಾಡಬೇಕೆಂದು ಅವರು ಮನವಿ ಮಾಡಿದ್ದಾರೆ.

ಕಡುಬಡತನ ಕುಟುಂಬದ ಇತ

ಹೈಸ್ಕೂಲ್ ಮುಗಿಸಿ ಪ್ಯಾರಾ ಮೆಡಿಕಲ್ ಕೋರ್ಸ ಮಾಡಿ ಅದು ಅರ್ಧಕ್ಕೆ ನಿಲ್ಲಿಸಿ, ಟಿವಿ ನೋಡುತ್ತಲೇ ಈ ಕ್ರೀಡೆ ಆಸಕ್ತಿ ಬೆಳೆಸಿಕೊಂಡು ಒಂದು ದಿನ ಮನೆ ಬಿಟ್ಟು ತರಬೇತಿ ನೀಡುವ ಪಂಜಾಬ್ ರಾಜ್ಯದ ಜಲಂದರ್ ನಗರಕ್ಕೆ ಹೊಗಿ ಅಲ್ಲಿ ಕೆಲಸ ಮಾಡುತ್ತಲೇ ದಿ ಗ್ರೇಟ್ ಕಲಿ ದೀಲಿಪ್ ಸಿಂಗ್ ಅವರ ಹತ್ತಿರ ಆರು ತಿಂಗಳ ತರಬೇತಿ ಪಡೆದು ಸ್ಪರ್ಧೆಯಲ್ಲಿ ಭಾಗವಹಿಸಿ ಸೊಲುಂಡ. ಆದರೂ ಛಲಬಿಡದ ಮಲ್ಲನಂತೆಯೇ ಅಲ್ಲಿಂದ ನೆರೆಯ ದೇಶ ನೇಪಾಳಕ್ಕೆ ತೆರಳಿ ಅಲ್ಲಿ ವಾಚಮನ್ ಕೆಲಸ ಮಾಡುತ್ತ ಮುಂದಿನ ತರಬೇತಿ ಪಡೆದು ವಿವಿಧ 14 ಸ್ಪರ್ಧೆಗಳಲ್ಲಿ ಭಾಗವಹಿಸಿ ಚಿನ್ನದ ಪದಕ, ಬೆಳ್ಳಿ ಪದಕ ಪಡೆದು ಪಾಕಿಸ್ತಾನ, ನೇಪಾಳ,ಕೆನಡಾ ಹೀಗೆ ವಿವಿಧ ದೇಶಗಳ ಕ್ರೀಡಾಪಟುಗಳನ್ನು ಸೋಲಿಸಿ ಸಾಧನೆ ಮೆರೆದಿದ್ದಾನೆ ಎಂದು ಆತನ ಬಗ್ಗೆ ವಿವರಿಸಿದರು.

ಈಗ ಆತನ ಜೀವನದ ಮಹತ್ವದ ಘಟ್ಟ ಬಂದಿದ್ದು ಆಸ್ಟ್ರೇಲಿಯಾದಲ್ಲಿ ಅಂತರ ರಾಷ್ಟ್ರೀಯ ಡಬ್ಲೂಡಬ್ಲೂಇ ಕ್ರೀಡೆಯಲ್ಲಿ ಭಾಗವಹಿಸಿ ಅಲ್ಲೂ ಸಾಧನೆ ಮಾಡಿ ಗಿರಿಜಿಲ್ಲೆ ಕೀರ್ತಿ ಜಗತ್ತಿಗೆ ತೊರಿಸಲು ಸಿದ್ಧನಾಗಿದ್ದಾನೆ. ಕಾರಣ ಈಗ ಕೂಡಲೇ ಜಿಲ್ಲಾಡಳಿತ,ಕ್ರೀಡಾ ಇಲಾಖೆ ಮತ್ತು ರಾಜ್ಯ ಸರ್ಕಾರ ಮಾರುತಿ ಚವ್ಹಾಣನ ಸಹಾಯ ಬರಬೇಕೆಂದು ಅವರು ಒತ್ತಾಯಿಸಿದ್ದಾರೆ.

ಇದಕ್ಕಾಗಿ ಶನಿವಾರ ಡಿಸಿ, ಗುರುಮಠಕಲ್ ಶಾಸಕರನ್ನು ಭೇಟಿ ಮಾಡಿ ಮನವಿ ಕೊಡುವುದಾಗಿ ಹೇಳಿದ್ದಾರೆ. ಆಕಾಶ ಪವಾರ, ಬಂಗಾರು ಲಕ್ಷ್ಮಣ, ರವಿ ರಾಠೋಡ ಮುದ್ನಾಳ್, ರವಿ ರಾಠೋಡ್ ಸೇರಿದಂತೆಯೇ ಇತರರಿದ್ದರು.

## ಡಿ.ಎಂ.ಸಾವಕಾರಗೆ ಜೀಶಂಪ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ.

ಬಾಗಲಕೋಟೆ, ಏ.19– ಕನ್ನಡ ಜಾನಪದ ಪರಿಷತ್ ಕೊಡಮಾಡುವ ಜಾನಪದ ವಿದ್ವಾಂಸ ಜೀ.ಶಂ.ಪರಮಶಿವಯ್ಯ ಪ್ರಶಸ್ತಿಯನ್ನು ಜಿಲ್ಲೆಯ ಕ 'ನ್ನಡ ಜಾನಪದ ಪರಿಷತ್ ಅಧ್ಯಕ್ಷ ಡಿ.ಎಂ.ಸಾವಕಾರ ಅವರಿಗೆ ಘೋಷಿಸಲಾಗಿದೆ. ಜಾನಪದ ಕ್ಷೇತ್ರದಲ್ಲಿ ಅಪ್ರತಿಮ ಸೇವೆಗೈದ ಪ್ರಯುಕ್ತ ಸಾವಕಾರ ಅವರಿಗೆ ಈ ಸಾಲಿಗೆ ಜೀಶಂಪ ಪ್ರಶಸ್ತಿ ನೀಡಲಾಗುತ್ತಿದ್ದು, ಏ.23 ರಂದು ಚಿಕ್ಕಮಗಳೂರ ತಾಲೂಕಿನ ಕೊಪ್ಪದ ಲಕ್ಷ್ಮೀ ವೆಂಕಟೇಶ್ವರ ವಿದ್ಯಾ ಮಂದಿರದ ದಾಸಮಠ ಹುಲ್ಕಿಯಲ್ಲಿ ನಡೆಯುವ ಕನ್ನಡ ಜಾನಪದ ಪರಿಷತ್ ದಶಮಾನೋತ್ಸವ ಸಂಭ್ರಮ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

## ಮೇ 14ರಿಂದ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರಿಲ್ 19–ರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವತಿಯಿಂದ "ಆಂಟಿಮೈಕ್ರೊಬಿಯಲ್ ಪ್ರತಿ–ರೋಧ ತಡೆಗಟ್ಟುವಿಕೆ ಮತ್ತು ಪರ್ಯಾಯಗಳಿಗಾಗಿ ತಂತ್ರಗಳು" ಎಂಬ ವಿಷಯದ ಕುರಿತು ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಮೇ 14ರಿಂದ ಮೇ 16ರವರೆಗೆ ಬೆಂಗಳೂರು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ.

ಈ ಸಮ್ಮೇಳನದಲ್ಲಿ ದೇಶದ ವಿವಿಧ ಪ್ರತಿಷ್ಠಿತ ಸಂಸ್ಥೆಗಳಿಂದ ಖ್ಯಾತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಜೊತೆಗೆ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಯುವ ವಿಜ್ಞಾನಿಗಳಿಗೆ ತಮ್ಮ ಸಂಶೋಧನಾ ಲೇಖನಗಳನ್ನು ಮಂಡಿಸಲು ಅವಕಾಶ ನೀಡಲಾಗುವುದು, ಆಯ್ಕೆಯಾದ ಲೇಖನಗಳಿಗೆ ನಗದು ಬಹುಮಾನವೂ ಇರಲಿದೆ. ಸಮ್ಮೇಳನದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧಕರು, ಪ್ರಾಧ್ಯಾಪಕರು, ಶೈಕ್ಷಣಿಕ ತಜ್ಞರು ಹಾಗೂ ಯುವ ಉದ್ಯಮಿಗಳು ಭಾಗವಹಿಸಬಹುದಾಗಿದೆ. ಆಸಕ್ತರು ಮೇ 6ರೊಳಗಾಗಿ https://forms.gle/nphLXewAES-vuPP5Y8 ಈ ಗೂಗಲ್ ಫಾರ್ಮ್ ಮೂಲಕ ನೋಂದಣಿ ಮಾಡಬಹುದಾಗಿದ್ದು, ಹೆಚ್ಚಿನ ಮಾಹಿತಿಗೆ https://kstacademy.in ವೆಬ್‌ಸೈಟ್ ಅಥವಾ ಮೊಬೈಲ್ ಸಂಖ್ಯೆಗಳು: 9845258894, 9743084194, 9686449019 ಸಂಪರ್ಕಿಸಬಹುದು ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏಪ್ರಿಲ್ 23ರಂದು ಜನ ಸಂಪರ್ಕ ಸಭೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರಿಲ್ 19– ಕರ್ನಾಟಕ ಲೋಕಾಯುಕ್ತ, ರಾಯಚೂರು ಘಟಕದ ವತಿಯಿಂದ ಪೊಲೀಸ್ ಅಧೀಕ್ಷಕರಾದ ಸತೀಶ್ ಎಸ್. ಚಿಟಗುಬ್ಬಿ ಅವರ ಮಾರ್ಗದರ್ಶನದಲ್ಲಿ ಏಪ್ರಿಲ್ 23ರಂದು ರಾಯಚೂರು ಮಹಾನಗರ ಪಾಲಿಕೆ ಆಯುಕ್ತರ ಕಚೇ–ರಿಯ ಸಭಾಂಗಣದಲ್ಲಿ, ತಹಶೀಲ್ ಕಚೇರಿ ಎದುರುಗಡೆ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಜನ ಸಂಪರ್ಕ ಸಭೆಯನ್ನು ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಸಾರ್ವಜನಿಕರಿಂದ ಕುಂದುಕೊರತೆ ಅರ್ಜಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸಲಿದ್ದು. ಯಾವುದೇ ರೀತಿಯ ಸಾರ್ವಜನಿಕ ಸಮಸ್ಯೆ, ಹಗರಣ ಅಥವಾ ದೂರುಗಳನ್ನು ಹೊಂದಿರುವವರು ಈ ದಿನಾಂಕ ಮತ್ತು ಸ್ಥಳದಲ್ಲಿ ಹಾಜರಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್‌ಬಿಆರ್ ಶಾಲೆಯಲ್ಲಿ ಬೇಸಿಗೆ ಶಿಬಿರ ಮುಕ್ತಾಯ



ಮಲ್ಲಮ್ಮ ನುಡಿ ವಾರ್ತೆ.

ಕಲಬುರಗಿ:ಏ.19:ಶರಣಬಸವೇಶ್ವರ ವಸತಿ ಪಬ್ಲಿಕ್ ಶಾಲೆಯಲ್ಲಿ ಸತತವಾಗಿ 30 ದಿನಗಳ ಕಾಲ ನಡೆದ ಪಠ್ಯತರ ಬೇಸಿಗೆ ಶಿಬಿರದ ಮುಕ್ತಾಯ ಸಮಾರಂಭ ಜರುಗಿತು. ಈ ಕಾರ್ಯಕ್ರಮದಲ್ಲಿ ಕಲಬುರಗಿ ಹಲವಾರು ಶಾಲೆಯ ಮಕ್ಕಳು ಶಿಬಿರದಲ್ಲಿ ಭಾಗಿಯಾಗಿ 30 ದಿನಗಳ ಪಠತರ ವಿಷಯಗಳು ಸ್ವಇಚ್ಛೆಯಿಂದ, ಸ್ವಬಳಕೆಯಿಂದ ಕಲಿತು ಕುಣಿದು ಕುಪ್ಪಳಿಸಿ ಆಟದೊಂದಿಗೆ ಪಾಠದ ಕಡೆಗೆ ಎಂಬುದು ಅರಿತರು. ಶಿಬಿರದಲ್ಲಿ ಬೆಳಿಗ್ಗೆ ಆಟ, ಯೋಗ, ಸಂಗೀತ, ಭರತನಾಟ್ಯ, ಅಬಾಕಸ್, ಅಕ್ಷರ ಬರವಣಿಗೆ, ರೋಬೋಟಿಕ್ಸ್, ಗಣಕಯಂತ್ರ ಹಾಗೂ ಚಿತ್ರಕಲೆ ಅವರಿಗೆ ಸಂತೋಷವಾಗವ ರೀತಿಯಲ್ಲಿ ಆನಂದವಾಗಿ 30 ದಿನಗಳ ಕಾಲ ಕಳೆದರು. ಶಿಬಿರದಲ್ಲಿ ಮಕ್ಕಳಿಗೆ ಉಪಹಾರ ಮತ್ತು ಬಸ್ಸಿನ ಸೌಲಭ್ಯ ಒದಗಿಸಿ ಕೊಡಲಾಯಿತು. ಮಕ್ಕಳು ಸಂಸ್ಕೃತಿಕ ಕಾರ್ಯಕ್ರಮದಲ್ಲಿ ತಾವು ಕಲಿತ ನೃತ್ಯ ಹಾಡು, ಆಟ, ಯೋಗ ಇವುಗಳನ್ನು ವೇದಿಕೆಯ ಮೇಲೆ ವ್ಯಕ್ತಪಡಿಸಿದಿರು. ಮಕ್ಕಳ ಕಾರ್ಯಕ್ರಮಗಳನ್ನು ನೋಡಿ ಪಾಲಕರು ಸಂತೋಷದಿಂದ ಈ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶರಣಸಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಶ್ರೀ. ಬಸವರಾಜ ದೇಶಮುಖ ಅವರು ಆಗಮಿಸಿದರು ಹಾಗೂ ಹಿರಿಯ ಶಿಕ್ಷಕರಾದ ಶ್ರೀ. ಡಾ. ಚಂದ್ರಕಾಂತ ಪಾಟೀಲ್ ಅಧ್ಯಕ್ಷತೆ ಸ್ಥಾನವನ್ನು ಅಲಂಕರಿಸಿದರು. ಸಂಸ್ಕಾರದಿಂದ ಶಿಕ್ಷಣ ಎಂಬ ಕಿವಿಮಾತು ಪಾಲಕರಿಗೆ ಅತಿಥಿಗಳು ತಿಳಿಸಿರು. ಇಂದಿನ ಮಕ್ಕಳು ಮೊಬೈಲ್, ಟಿವಿ ಕಡೆ ಒಲವು ಜಾಸ್ತಿ ಇದೆ ಇವುಗಳನ್ನು ಮರೆಯಲು ಇಂತಹ ಶಿಬಿರಗಳು ಅತಿ ಅವಶ್ಯಕ ಮಕ್ಕಳಿಗೆ ಸಂಸ್ಕಾರ ಬೆಳೆಸಲು ಶರಣರು ನಡೆದು ಬಂದ ದಾರಿ ಮಕ್ಕಳಿಗೆ ಮತ್ತು ಪಾಲಕರಿಗೆ ತಮ್ಮ ಭಾಷಣದಲ್ಲಿ ತಿಳಿಸಿದರು. ಮುಂದೆ ಗುರಿ ಹಿಂದೆ ಗುರು ಎಂಬ ಯುಕ್ತಿಗೆ ಕಾರಣೀಭೂತರಾದ ಶಾಲೆಯ ಪ್ರಾಂಶುಪಾಲರಾದ ಶ್ರೀ. ಎನ್. ಎಸ್. ದೇವರಕಲ್ ಅವರ ಅಪಾರ ದಿವ್ಯಾಮಾರ್ಗದರ್ಶನದೊಂದಿಗೆ ಈ ಕಾರ್ಯಕ್ರಮ ಯಶಸ್ವಿಗೊಂಡಿದೆ ಮತ್ತು ಹಿರಿಯ ಶಿಕ್ಷಕಿಯರಾದ ಶ್ರೀಮತಿ. ಶಾರದಾ ರಾಂಪೂರೆ ಅವರ ನಾಯಕತ್ವದಲ್ಲಿ ಶಿಬಿರವು ಅಚ್ಚುಕಟ್ಟಾಗಿ ಮುಕ್ತಾಯಗೊಂಡಿದೆ. ಈ ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಪಾಲ್ಗೊಂಡರು.

ಈ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರು ಹಾಗೂ ಪೂಜ್ಯ ಮಾತೋಶ್ರೀ ದಾಕ್ಷಾಯಣಿ ಅವ್ವಾಜಿ ಹಾಗೂ 9ನೇ ಪೀಠಾಧಿಪತಿ ಪೂಜ್ಯ ಚಿ. ದೊಡ್ಡಪ್ಪ ಅಪ್ಪ ಅವರು, ಹಾಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ. ಬಸವರಾಜ ದೇಶಮುಖ ಹಾಗೂ ಪ್ರಾಚಾರ್ಯರಾದ ಶ್ರೀ. ಎನ್.ಎಸ್.ದೇವರಕಲ್ ಅವರು ಈ ಎಲ್ಲಾ ವಿದ್ಯಾರ್ಥಿಗಳಿಗೆ ಶುಭಾ ಹಾರೈಸಿದರು.

## ಯುವಕರನ್ನು ಸಂಸ್ಕಾರದಿಂದ ಮೇಳೈಸೋಣ: ಮಾದನಹಿಪ್ಪರಗಿ ಶ್ರೀ

ಕಾಳಗಿ,ಏ.19: ತಂತ್ರಜ್ಞಾನ ಯುಗದಲ್ಲಿ ಯುವಕರು ದಾರಿ ತಪ್ಪುತ್ತಿರುವ ಸ್ಥಿತಿಯಲ್ಲಿ, ಧರ್ಮ ಹಾಗೂ ಸಂಸ್ಕಾರದಿಂದ ಅವರನ್ನು ಬೆಳೆಸಿದರೆ, ಅವರು ಮನೆಗೂ ದೇಶಕ್ಕೂ ಕೊಡುಗೆ ನೀಡುವಂತಹವರಾಗುತ್ತಾರೆ ಎಂದು ಮಾದನಹಿಪ್ಪರಗಿಯ ಶಿವಲಿಂಗ ಮಹಾಸ್ವಾಮಿಗಳು ನುಡಿದರು.

ಕಾಳಗಿ ಪಟ್ಟಣದಲ್ಲಿ ನಡೆಯುತ್ತಿರುವ 9ನೇ ದಿನದ ನೀಲಕಂಠೇಶ್ವರ–ಕಾಳೇಶ್ವರ ಜಾತ್ರಾ ಮಹೋತ್ಸವದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಸುಗೂರ ಹಿರೇಮಠದ ಚನ್ನರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಬಿಎಚ್ ನಿರಗುಡಿ ಮಾತನಾಡಿದರು. ವೇದಿಕೆಯಲ್ಲಿ ವಿಶ್ರಾಂತ ನ್ಯಾಯಾಧೀಶ ಸಿ.ಆರ್.ಬೆನಕನಳ್ಳಿ, ಶಹಾಬಾದ್ ಡಿವೈಎಸ್ಪಿ ಶಂಕರಗೌಡ ಪಾಟೀಲ, ವಿಜಯಕುಮಾರ್ ಪರುತೆ, ಶರಣಗೌಡ ಪಾಟೀಲ ಪಾಳಾ, ಶಿವರಾಜ ಅಂಡಗಿ, ಅಣವೀರಪ್ಪ ಪಾಟೀಲ, ಶೈಲೇಂದ್ರ ಕಾವಡಿ ಬೀದರ, ಭಿಮಾಶಂಕರ ಅಂಕಲಗಿ, ಉಪಸ್ಥಿತರಿದ್ದರು. ಸಂತೋಷ ಪತಂಗೆ ನಿರೂಪಿಸಿದರು.

## ರಸ್ತೆಯಲ್ಲಿ ಚೇರ್ ಮೇಲೆ ಕುಳಿತು ರೀಲ್ಸ್ ಯುವಕ ವಶಕ್ಕೆ



ಮಲ್ಲಮ್ಮ ನುಡಿ ವಾರ್ತೆ.

ಬೆಂಗಳೂರು,ಏ.18–ರೀಲ್ಸ್ ಹುಚ್ಚಿಗಾಗಿ ನಡು ರಸ್ತೆಯಲ್ಲಿ ಚೇರ್ ಹಾಕಿ ಕುಳಿತುಕೊಂಡು ವಿಡಿಯೋ ಮಾಡುತ್ತಿದ್ದ ಯುವಕನನ್ನು ನಗರದ ಎಸ್. ಜೆ.ಪಾರ್ಕ್ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವಶಕ್ಕೆ ಪಡೆದಿರುವ ವಾಹನ ಚಾಲಕ ಪ್ರಶಾಂತ್ , ರೀಲ್ಸ್ ವ್ಯಾಮೋಹ ಬೆಳೆಸಿಕೊಂಡಿದ್ದ. ಹೀಗಾಗಿ, ಎಸ್.ಜೆ.ಪಾರ್ಕ್?ನ ಮುಖ್ಯರಸ್ತೆಯಲ್ಲಿ ಕುರ್ಚಿ ಹಾಕಿ ಕುಳಿತು ಟೀ ಕುಡಿಯುತ್ತ ರೀಲ್ಸ್ ಮಾಡಿದ್ದ. ಈ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್?ಲೋಡ್ ಮಾಡುತ್ತಿದ್ದಂತೆ, ಕೆ.ಆರ್.ಮಾರ್ಕೆಟ್ ಠಾಣೆ ಸೋಷಿಯಲ್ ಮೀಡಿಯಾ ವಿಂಗ್ ಎಸ್.ಜೆ.ಠಾಣೆ ಪೊಲೀಸರಿಗೆ ಮಾಹಿತಿ ನೀಡಿತ್ತು.

ಇದರ ಆಧಾರದ ಮೇರೆಗೆ ಆರೋಪಿತನ ವಿರುದ್ಧ ಎನ್?ಸಿಆರ್ ಪ್ರಕರಣ ದಾಖಲಿಸಿಕೊಂಡು, ವಶಕ್ಕೆ ಪಡೆಯಲಾಗಿದೆ. ಏಪ್ರಿಲ್? 12ರಂದು ರೀಲ್ಸ್ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

## ಕೂಡ್ಲಿಗಿ: ಹೈವೇಯಲ್ಲಿ ಬೆಂಕಿಗಾಹುತಿಯಾದ ಲಾರಿ.

ಮಲ್ಲಮ್ಮ ನುಡಿ ವಾರ್ತೆ.


ಕೂಡ್ಲಿಗಿ. ಏ. 19 :– ದನಗಳಿಗೆ ಹಾಕುವ ಹಿಂಡಿ ತುಂಬಿದ ಲೋಡ್ ಲಾರಿಯೊಂದು ಹೈವೇ 50ರ ರಸ್ತೆಯಲ್ಲಿ ಹೋಗುತ್ತಿರುವಾಗ್ಗೆ ಏಕಾಏಕಿ ಪಲ್ಟಿಯಾಗಿ ಧಗಧಗನೆ ಹೊತ್ತಿ ಉರಿದ ಘಟನೆ ಇಂದು ಬೆಳಿಗ್ಗೆ 6–30ಗಂಟೆಗೆ ತಾಲೂಕಿನ ಶಿವಪುರ ಸಮೀಪದ ಹೈವೇ 50ರಲ್ಲಿ ಜರುಗಿದೆ

ಬಾಗಲಕೋಟ ದಿಂದ ಬೆಂಗಳೂರು ಕಡೆಗೆ ಹೊರಟಿದ್ದ ಲಾರಿ ಇದಾಗಿದ್ದು ತಾಲೂಕಿನ ಶಿವಪುರ ಸಮೀಪದ ಹೈವೇ 50ರ ರಸ್ತೆಯಲ್ಲಿ ಏಕಾ ಏಕಿ ಪಲ್ಟಿಯಾಗಿದ್ದು ತಕ್ಷಣ ಬೆಂಕಿಹತ್ತಿ ಧಗಧಗನೇ ಹೊತ್ತಿ ಉರಿಯಲಾರಾಂಭಿಸಿತು ಚಾಲಕ ತಕ್ಷಣ ಪ್ರಾಣಪಾಯದಿಂದ ಪಾರಾಗಿದ್ದು ವಿಷಯ ತಿಳಿದ ಕೂಡ್ಲಿಗಿ ಅಗ್ನಿಶಾಮಕ ಸಿಬ್ಬಂದಿ ಲಾರಿಗೆ ಹತ್ತಿದ ಬೆಂಕಿಯನ್ನು ಆರಿಸಿದ್ದಾರೆ ಕೂಡ್ಲಿಗಿ ಎಸ್ಐ ಪ್ರಕಾಶ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಟ್ರಾಫಿಕ್ ಆಗದಂತೆ ಒನ್ ವೇ ಮೂಲಕ ವಾಹನ ಸಂಚಾರ ಸುಗಮ ಗೊಳಿಸಿದ್ದಾರೆ.

# ಅಕಾಲಿಕ ಆಲಿಕಲ್ಲು ಮಳೆಯಿಂದ ತೋಟಗಾರಿಕಾ ಬೆಳೆಗಳಿಗೆ ಆದ ನಷ್ಟಕ್ಕೆ ಪರಿಹಾರ ಒದಗಿಸಲು ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 19 : ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಗಮನಕ್ಕೆ ತರಬಯಸುವದೇನೆಂದರೆ ಕಳೆದ ವಾರ ಬೀದರ ನಗರ ಸೇರಿದಂತೆ ವಿವಿಧಡೆ ಗುರುವಾರ ಮಧ್ಯಾನ್ಹ ಗುಡುಗು, ಗಾಳಿ ಸಹಿತ ಆಲಿಕಲ್ಲು ಮಳೆಯಾಗಿದ್ದು, ಅನೇಕ ಗಿಡ ಮರಗಳು ನೆಲಕ್ಕೆ ಉರುಳಿದಲ್ಲದೇ ಟನ್‌ಗಟ್ಟಲೇ ತೋಟಗಾರಿಕಾ ಬೇಳೆಗಳಾದ ಮಾವು, ದ್ರಾಕ್ಷಿ, ನೇರಲೆ, ಚಿಕ್ಕು, ಪೇರು, ಪಪ್ಪಾಯಿ,, ಟಮಾಟೋ, ಇನ್ನಿತರ ಹಣ್ಣು, ಹೂ, ಹಂಪಲು, ತರಕಾರಿ ಫಸಲುಗಳು ಬಿರುಗಾಳಿ ಮಳೆಗೆ ನೆಲಕ್ಕೆ ಉರುಳಿ ಲಕ್ಷಾಂತರ ರೂಪಾಯಿ ಬೆಳೆ ಹಾನಿಯಾಗಿರುತ್ತದೆ. ಕೈಗೆಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತೆ ರೈತರು ಶ್ರಮ ವಹಿಸಿ ತಮ್ಮೆಲ್ಲ ಹಣವನ್ನು ತೊಡಗಿಸಿ ಇನ್ನೇನು ಅದರ ಫಲ ಪಡೆಯಬೇಕು ಎನ್ನುವಷ್ಟರಲ್ಲಿ ಎಲ್ಲ ಬೆಳೆ ಹಾನಿಯಾಗಿ ತಲೆ ಮೇಲೆ ಕೈ ಎತ್ತಿ ಕೊಂಡು ಸಂಕಷ್ಟದಲಿದ್ದಾರೆ.





ಆದ್ದರಿಂದ ತಕ್ಷಣ ಜಿಲ್ಲಾಡಳಿತ ಮತ್ತು ತೋಟಗಾರಿಕೆ ಇಲಾಖೆ ಈ ಭಾಗದಲ್ಲಿ ನಿರಿಕ್ಷಣೆ ಮತ್ತು ಸಮಿಕ್ಷೆಮಾಡಿ ರೈತರುಗಳಿಗೆ ಆದ ಹಾನಿ ಲೆಕ್ಕಚಾರಮಾಡಿ ಅವರುಗಳಿಗೆ ಪರಿಹಾರ ನೀಡುವುದು ಹಾಗು ಅವರ ಬೆಳೆಗಳಿಗೆ ಬೆಳೆಜೀವವಿಮೆ ಯೋಜನೆಗೆ ತೋಟಗಾರಿಕೆ ಬೆಳೆಗಳಿಗೂ ಸಹಿತ ಪರಿಗಣಿಸಲು ವಿನಂತಿಸುತ್ತೇವೆ. ಏಕೆಂದರೆ ಬೀದರ ಜಿಲ್ಲೆ ವಿಶೇಷವಾಗಿ ಬೀದರ ತಾಲುಕಾ ವ್ಯಾಪ್ತಿಯ ಹವಾಗುಣ ತೋಟಗಾರಿಕೆ ಬೆಳೆಗಳಿಗೆ ಸೂಕ್ತವಾದ ಪ್ರದೇಶವೆಂದು ಇಲಾಖೆ ಪರಿಗಣಿಸಿದ್ದಲ್ಲದೇ ರೈತರುಗಳು ಸಹ ಸಾಂಪ್ರದಾಯಕ ಬೆಳೆಗಳನ್ನು ಬೆಳೆಯದೇ ವಿವಿಧ ತರಹದ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವುದು ಖುಷಿಯ ಸಂಗತಿಯಾಗಿದೆ. ಕಾರಣ ಇಂತಹ ರೈತರುಗಳಿಗೆ ಪ್ರೋತ್ಸಾಹ, ಉತ್ತೇಜನ, ಆಮೀಶಗಳು ಹಾಗು ವಿನಾಯಿತಿಗಳಂತಹ ಸೌಲಭ್ಯಗಳು ನೀಡಿ ಅವರುಗಳನ್ನು ಆರ್ಥಿಕ ಸ್ವಾವಲಂಭಿಗಳನ್ನಾಗಿ ಮಾಡುವುದು ಇಂದಿನ ಅವಶ್ಯಕತೆ ಇದೆ. ಆದ್ದರಿಂದ ಈ ಭಾಗದ ಸಮೀಕ್ಷೆ ಮಾಡಿ ರೈತರುಗಳಿಗೆ ಆದ ನಷ್ಟವನ್ನು ಭರಿಸಿಕೊಡಲು ಆದರ ಪೂರ್ವಕವಾಗಿ ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ರೈತರು ಮತ್ತು ವ್ಯಾಪಾರಿಗಳ ಪರವಾಗಿ ಕಳಕಳಿಯಿಂದ ವಿನಂತಿಸುತ್ತೇವೆ.

ಕಾರಣ ತಾವುಗಳು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಜಿಲ್ಲೆಗೆ ಕಳುಹಿಸಿ, ತೋಟಗಾರಿಕಾ ಬೆಳೆಗಳು ಹಾನಿಯಾದ ಕುರಿತು ಸಮೀಕ್ಷೇ ಕೈಗೊಂಡು ರೈತಾಪಿ ಜನರಿಗೆ ಸೂಕ್ತ ಪರಿಹಾರ ಒದಗಿಸಲು ಕ್ರಮಕೊಳ್ಳಬೇಕೆಂದು ವಿನಂತಿಸುತ್ತೇವೆ.

# ಮಹಾ ರುದ್ರಯಾಗ: ಕೇದಾರ ಜಗದ್ಗುರುಗಳಿಂದ ಭಿತ್ತಿಪತ್ರ ಬಿಡುಗಡೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 19 : ಕೇದಾರ ಜಗದ್ಗುರು ಶ್ರೀ ಭೀಮಾಶಂಕರಲಿಂಗ ಶಿವಾಚಾರ್ಯ ಭಗತ್ಪಾದರ ಪಟ್ಟಾಭಿಷೇಕದ ರಜತ ಮಹೋತ್ಸವ ಅಂಗವಾಗಿ ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಡಿಸೆಂಬರ್‌ನಲ್ಲಿ ಹಮ್ಮಿಕೊಂಡಿರುವ ಮಹಾ ರುದ್ರಯಾಗ, ಯಜ್ಞ ಹಾಗೂ ಸರ್ವ ಧರ್ಮ ಪರಿಷತನ ಭಿತ್ತಿಪತ್ರವನ್ನು ನಗರದಲ್ಲಿ ಶನಿವಾರ ಬಿಡುಗಡೆ ಮಾಡಲಾಯಿತು.



ಭಿತ್ತಿಪತ್ರ ಬಿಡುಗಡೆಗೊಳಿಸಿದ ಕೇದಾರ ಜಗದ್ಗುರು ಶ್ರೀ ಭೀಮಾಶಂಕರಲಿಂಗ ಶಿವಾಚಾರ್ಯ ಭಗತ್ಪಾದರು, ಸದ್ಯ ವಿಶ್ವದಲ್ಲಿ ಅಶಾಂತಿ ಹಾಗೂ ಮೂರನೇ ಮಹಾ ಯುದ್ಧದ ಸನ್ನಿವೇಶ ಎದುರಾಗಿದೆ. ಹೀಗಾಗಿ ವಿಶ್ವ ಶಾಂತಿ ಹಾಗೂ ಸಕಲರ ಕಲ್ಯಾಣಕ್ಕಾಗಿ ಡಿಸೆಂಬರ್ 1 ರಿಂದ 8 ರ ವರೆಗೆ ನ್ಯೂ ನಾಂದೇಡ್‌ನ ಗೋಪಾಳ ಚೌಡಿಯ ಭೀಮಾಶಂಕರ ನಗರದಲ್ಲಿರುವ ಶ್ರೀ ಗುರು ದೇಶಮುಖ ಆಶ್ರಮದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಎಂಟು ದಿನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಜಗದ್ಗುರುಗಳು, ಸಂತರು, ಮಹಾ ಪುರುಷರು, ವಿದ್ವಾಂಸರು ಪಾಲ್ಗೊಳ್ಳಲಿದ್ದಾರೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು. ಪಂಚ ಪೀಠಗಳು ಹಾಗೂ ಅವುಗಳ ಅಧೀನದ 8 ಸಾವಿರ ಮಠಗಳು ಸನಾತನ ಸಂಸ್ಕೃತಿ, ವೀರಶೈವ ಲಿಂಗಾಯತ ಪರಂಪರೆಯನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿವೆ. ಭಕ್ತರ ಕಲ್ಯಾಣಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿವೆ. ಜಗದ್ಗುರು ಪಂಚಾಚಾರ್ಯರ ತತ್ವಾದರ್ಶಗಳನ್ನು ಜಗತ್ತಿಗೆ ಬೋಧಿಸುವ ದಿಸೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ ಎಂದು ತಿಳಿಸಿದರು. ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ, ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿಯ ಸದಸ್ಯ ಶಿವಯ್ಯ ಸ್ವಾಮಿ ಮಾತನಾಡಿ, ಎಂಟು ದಿನಗಳ ಅವಧಿಯಲ್ಲಿ ದೇಶ, ವಿದೇಶದ ಒಂದೂವರೆ ಕೋಟಿ ಜನ ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ನಾಂದೇಡ್ ಕಾರ್ಯಕ್ರಮ ಇತಿಹಾಸದಲ್ಲಿ ದಾಖಲಾಗುವ ಕಾರ್ಯಕ್ರಮ ಆಗಲಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ಸಂಸದರು, ಶಾಸಕರು, ಗಣ್ಯರು, ಸಾಹಿತಿಗಳು, ಚಿಂತಕರು, ವೀರಶೈವ ಲಿಂಗಾಯತರು ಸೇರಿದಂತೆ ಸರ್ವ ಸಮಾಜದವರು ಭಾಗವಹಿಸಲಿದ್ದಾರೆ. ಜಿಲ್ಲೆ ಹಾಗೂ ರಾಜ್ಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಜಗದ್ಗುರುಗಳು ಹಾಗೂ ಇತರ ಮಠಾಧೀಶರ ದರ್ಶನಾಶೀರ್ವಾದ ಪಡೆಯಬೇಕು ಎಂದು ಕೋರಿದರು. ಪ್ರಮುಖರಾದ ವರದಯ್ಯ ಸ್ವಾಮಿ, ಮಹೇಶ ಪಾಟೀಲ, ನಾಗರಾಜ ಮಠ, ಪ್ರವೀಣ್ ಸ್ವಾಮಿ, ರಾಜಕುಮಾರ ಬಿರಾದಾರ, ಶಿವಶಂಕರ ಬೆಮಳಗಿ, ರೇವಣಸಿದ್ದ ಮಠಪತಿ, ಸಂಜೀವಕುಮಾರ ಸ್ವಾಮಿ, ಸಚಿನ್ ಮಠಪತಿ, ಶ್ರೀಕಾಂತ ಹೊನ್ನಿಕೇರಿ ಮತ್ತಿತರರು ಇದ್ದರು.

# ಜೆಇಇ ಅಡ್ವಾನ್ಸ್ ಪರೀಕ್ಷೆ ಬರೆಯಲು ಅರ್ಹತೆ ಗಿಟ್ಟಿಸಿದ 300 ವಿದ್ಯಾರ್ಥಿಗಳು



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಏ.19: ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ಅಭಿಷೇಕ ಶಂಕರ ಬಿರಾದಾರ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ 99.78 ಪರ್ಸೆಂಟೈಲ್ ಅಂಕ ಪಡೆದ ಅತ್ಯುತ್ತಮ ಸಾಧನೆ ಮಾಡಿದ್ದಾನೆ. ಕಾಲೇಜಿನ ಒಟ್ಟು 300 ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ ಪರೀಕ್ಷೆ ಬರೆಯಲು ಅರ್ಹತೆ ಗಿಟ್ಟಿಸಿದ್ದಾರೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

ಸುಮಿತ್ ರಾಜೇಂದ್ರ 99.54, ಶಿವಕುಮಾರ ಜಗನ್ನಾಥ 99.42, ಗಣೇಶ ಬಾಲಾಜಿ 99.41, ಪ್ರದ್ಯುಮ್ ಪಂಡರಿನಾಥ 99.28, ಅಭಿಷೇಕರೆಡ್ಡಿ ವೆಂಕಟರೆಡ್ಡಿ 99.25, ಅಸ್ಮಿತಾ ರಾಮ 99.23, ಗುಂಡಪ್ಪ ಮಾರುತಿ 99.23, ಶಶಾಂಕ ಭೀಮಶಾ 99.21, ಸಂಕಲ್ಪ ಸುಭಾಷ 99.18, ಸುಜಲ್ ದೀಪಕ 99.09, ವಿ.ಕಾವ್ಯಾಂಜಲಿ 98.75, ಅಕ್ಷಿತಾ ವೈ. 98.63, ಆನಂದ ಅಶೋಕ ಶಿಂಧೆ 98.59, ಕಾರ್ತಿಕ ಜಗದೀಶ 98.47, ಸುಮಿತ್‌ರೆಡ್ಡಿ ಜಗನ್ನಾಥ ರೆಡ್ಡಿ 98.45, ಹರ್ಷ ಮಹಾದೇವ 98.31, ವೇದಾಂತ ಹಣಮಂತ 98.28, ಮೇಘನಾ ಮೋಹನರೆಡ್ಡಿ 98.21, ತನೀಶಾ ರಾಮಕೃಷ್ಣ 98.10, ಚನ್ನಬಸವ ಮಹಾದೇವ 98.09, ಶ್ರಾವಿ ರವಿ 98.08, ವಿವೇಕರೆಡ್ಡಿ ಬಸವರಾಜ 98.05, ಸೃಷ್ಟಿ ಸತ್ಯನಾರಾಯಣ 98, ವಿವೇಕ ಸಂತೋಷಕುಮಾರ 97.94, ಯಶ ಆನಂದ 97.91, ಪೃಥ್ವಿ ಕವಿರಾಜ 97.67, ಶರಣ ನಾಗಣ್ಣಾ 97.67, ಚೇತನ ವಿಜಯಕುಮಾರ 97.50, ಅತಿಥ ರಘುನಾಥ 97.48, ಕಾರ್ತಿಕ ಚಂದ್ರಕಾಂತ 97.36, ಹರ್ಷ ಪ್ರಕಾಶ 97.32, ಆದಿತ್ಯಾ ಸುಭಾಷ 97.12, ಸೋಹಂ ಸಂತೋಷ 97.05, ಅವಿನಾಶ ಮೋಹನರೆಡ್ಡಿ 97, ಅನಿರುದ್ಧ ರಾಜೇಶ 96.97, ಓಂಕಾರ ವಸಂತ 96.83, ವಿಷ್ಣು ಶರಣಪ್ಪಾ 96.55, ಅಂಕಿತಾ ರಾಜೇಂದ್ರ 96.49, ನಾಗಶೆಟ್ಟಿ ಸಂಗನಬಸಪ್ಪಾ 96.41, ನಿಂಗಯ್ಯಾ ಚಂದ್ರಶೇಖರಯ್ಯಾ 96.30, ಪ್ರಜ್ವಲ್ ಕಂಟೆಪ್ಪಾ 96.21, ಚನ್ನಬಸವ ಸೋಮನಾಥ 96.14, ವಿಜಯಕುಮಾರ ಶಿವಕುಮಾರ 96.14, ಜ್ಞಾನೇಂದ್ರಕುಮಾರ ರಮೇಶ 96.01, ಶಶಿಕಾಂತ ವಿಶ್ವನಾಥ 96.01, ಸೃಷ್ಟಿ ರಾಘವೇಂದ್ರ 95.99, ಹರಿಪ್ರಸಾದ ರಾಜಕುಮಾರ 95.86, ಸುಧಾಂಶು ಶಿವಕುಮಾರ 95.76, ಅನುಷ್ಕಾ ನೀಲಕಂಠ 95.72, ಅಲೋಕ ಕಿಶೋರ 95.43, ಪೃಥ್ವಿರಾಜ ಮನೋಜ 95.40, ಭೂಮಿಕಾ ಶಿವಕುಮಾರ 95, ದೀಕ್ಷಾ ಸಂಗಪ್ಪಾ 95, ಗಣೇಶ ಗೋವಿಂದರಾವ್ 95, ಗಣೇಶ ಸಂತೋಷ ಉಪ್ಪೆ 95, ಮಹಮ್ಮದ್ ತಲಾಹ್ 95, ಪ್ರೇಮ ಮಾಣಿಕ 95, ಶ್ರೀಪಾದ ರಾಜೇಂದ್ರ 95, ವೈಷ್ಣವಿ ರೇವಣೇಶ 95 ಪರ್ಸೆಂಟೈಲ್ ಅಂಕ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಉಪ ಪ್ರಾಚಾರ್ಯ ಸಿದ್ರಾಮ ಗೊಗ್ಗಾ, ಶೈಕ್ಷಣಿಕ ನಿರ್ದೇಶಕ ಎಂ.ಶ್ರೀನಿವಾಸರೆಡ್ಡಿ, ರಾಘವೇಂದ್ರ ಪತ್ರಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಮ್ಮ ಕಾಲೇಜಿನಲ್ಲಿ ನುರಿತ ಉಪನ್ಯಾಸಕರು ನೀಡುತ್ತಿರುವ ಐಐಟಿ, ಜೆಇಇ ಸಂಬಂಧಿತ ಯೋಜನಾಬದ್ಧ, ಪರಿಣಾಮಕಾರಿ ತರಬೇತಿ, ಗುಣಮಟ್ಟದ ಪರೀಕ್ಷೆಗಳು, ನಮ್ಮ ಅವಿರತ ಪ್ರಯತ್ನ ರಾಷ್ಟ್ರಮಟ್ಟದ ಸಾಧನೆಗೆ ಸಹಕಾರಿ ಆಗಿವೆ.

**–ಅಭಿಷೇಕ ಶಂಕರ ಬಿರಾದಾರ, ವಿದ್ಯಾರ್ಥಿ**

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿರುವುದು ನಮ್ಮ ಕಾಲೇಜಿನಲ್ಲಿ ದೊರೆಯುತ್ತಿರುವ ಗುಣಾತ್ಮಕ ತರಬೇತಿ, ಶಿಕ್ಷಣ–ಕ್ಕೆ ಸಾಕ್ಷಿ. ಇದರ ಶ್ರೇಯ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಸಲ್ಲುತ್ತದೆ.

**–ಬಸವಲಿಂಗ ಪಟ್ಟದ್ದೇವರು, ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ**

# ಕಾರ್ಯಕರ್ತರ ನೇಮಕಾತಿಯಲ್ಲಿ ಅವ್ಯವಹಾರ

ಬೀದರ. ಏ. 19 : ಭಾಲ್ಕಿ ತಾಲೂಕಿನ ಕಾಸರ ತೂಗಾಂವ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತರು ಹುದ್ದೆ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದ್ದು, ತನಿಖೆ ನಡೆಸಿ ಕ್ರಮಕೈಗೊಳ್ಳಬೇಕು ಎಂದು ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಘಟಕ ಆಗ್ರಹಿಸಿದೆ.

ಈ ಕುರಿತು ಶನಿವಾರ ಜಿಲ್ಲಾಕಾರಿ ಅವರಿಗೆ ಮನವಿ ಪತ್ರ ಸಲ್ಲಿಸಿ, ಕಾಸರ ತೂಗಾಂವನ ಅಂಗನವಾಡಿ ಕಾರ್ಯಕರ್ತರ ಹುದ್ದೆ ನೇಮಕಾತಿಯಲ್ಲಿ ಸರ್ಕಾರದ ನಿಯಮ ಪಾಲಿಸಿಲ್ಲ. ಲಂಚ ಕೊಟ್ಟವರಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ದೂರಿದ್ದಾರೆ. ಅಂಗನವಾಡಿ ಹುದ್ದೆಗೆ ಅರ್ಜಿ ಸಲ್ಲಿಸಿದ ಗೀತಾ ಶಂಕರ ಪಿಯುಸಿ ಫಲಿತಾಂಶ ಶೇ.84 ಇದ್ದರೆ, ಅಂಜಲಿ ಶೇ.65 ಇದೆ. ಆದರೆ ಭಾಲ್ಕಿ ಶಿಶು ಅಭವೃದ್ಧಿ ಯೋಜನಾಕಾರಿ ಅವರು ಅಂಜಲಿ ಹತ್ತಿರ ಹಣ ಪಡೆದು ನೇಮಕಾತಿ ಮಾಡಿದ್ದಾರೆ. ಈ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ಸಂಘಟನೆ ಜಿಲ್ಲಾಧ್ಯಕ್ಷ ಸುಭಾಷ ಕೆನಾಡೆ, ಪವನಕುಮಾರ ರಾಠೋಡ್, ರಾಜಶೇಖರ, ರಾಜು ರಾಟೋಡ್, ನಾಗೇಶ್, ದೀಪಕ್, ಶಂಕರ, ನಾಗರಾಜ ಇತರರಿದ್ದರು.

# ಶಶಿಕಾಂತ ಪಾಟೀಲ ಚೌಳಿ ಗೃಹಬಂಧನಕ್ಕೆ ಸ್ಪಷ್ಟಿಕರಣ ಕೊಡಿ: ಅಂಬಾದಾಸ ಗಾಯಕವಾಡ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 19 : ಈ ತಿಂಗಳ 16 ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಬೀದರಗೆ ಬರುವ ದಿನದಂದು ಬೆಳಿಗ್ಗೆ 5.30 ಗಂಟೆಗೆ ಮುಖಂಡರಾದ ಶಶಿಕುಮಾರ ಎಸ್ ಪೊಲೀಸ್ ಪಾಟೀಲ ಚೌಳಿ ಅವರನ್ನು ಪೊಲೀಸರು ಗೃಹಬಂಧನದಲ್ಲಿ ಇರಿಸಿರುವುದರ ಬಗ್ಗೆ ಸ್ಪಷ್ಟಿಕರಣ ನೀಡಬೇಕೆಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಂಚಾಲಕ ಅಂಬಾದಾಸ ಗಾಯಕವಾಡ ಒತ್ತಾಯಿಸಿದ್ದಾರೆ.




ಶನಿವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು ಮುಖ್ಯಮಂತ್ರಿಗಳು ಜಿಲ್ಲೆಗೆ ಬರುವ ಸಂದರ್ಭದಲ್ಲಿ ಈ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವ ಅವಕಾಶ ಸಿಗಬೇಕು. ಆದರೆ ಶಶಿಕುಮಾರ ಪೊಲೀಸ್ ಪಾಟೀಲ ಚೌಳಿಯವರು ಮುಖ್ಯಮಂತ್ರಿಗಳು ಬರುವ ಸಂದರ್ಭದಲ್ಲಿ ತಾನು ಹೋರಾಟ ಮಾಡುತ್ತೇನೆಂದು ಎಲ್ಲಿಯೂ ಹೇಳಿಲ್ಲ. ಯಾವುದೇ ಸರ್ಕಾರದ ವಿರುದ್ಧ ಸಹ ಮಾತನಾಡಿರಲಿಲ್ಲ. ಹೀಗಿರುವಾಗ ಅಂತಹ ನಿಷ್ಠಾವಂತ ನಾಯಕರನ್ನು ಗೃಹಬಂಧನದಲ್ಲಿರಿಸಿ ಜಿಲ್ಲೆಯಾದ್ಯಂತ ಸುತ್ತಾಡಿಸಿ ಮುಖ್ಯಮಂತ್ರಿಗಳು ಇಲ್ಲಿಂದ ನಿರ್ಗಮಿಸಿದ ಬಳಿಕ ಅವರನ್ನು ಬಿಡುಗಡೆ ಮಾಡುವ ಅನಿವಾರ್ಯತೆ ಏನಿತ್ತು? ಚೌಳಿಯವರನ್ನು ಗೃಹಬಂಧನದಲ್ಲಿರಿಸಿ ಎಂದು ನಿಮಗೆ ಯಾರು ನಿರ್ದೇಶನ ನೀಡಿದ್ದರು? ಇದರ ಹಿಂದೆ ಯಾರ ಕೈವಾಡವಿದೆ? ಈ ಎಲ್ಲಾ ಪ್ರಶ್ನೆಗಳಿಗೆ ಜಿಲ್ಲಾ ಪೊಲೀಸ್ ಹಿರಿಯ ಅಧಿಕಾರಿಗಳು ಉತ್ತರಿಸಬೇಕಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹಾಗೂ ಪೌರಾಡಳಿತ ಸಚಿವ ರಹಿಂ ಖಾನ್ ಇಬ್ಬರೂ ಪ್ರಶ್ನಾತೀತ ನಾಯಕರು. ಈ ವಿಚಾರವಾಗಿ ಅವರಿಬ್ಬರ ಮೇಲೆ ಆಪಾದನೆ ಹೊರಿಸುತ್ತಿರುವುದರಲ್ಲಿ ಹುರುಳಿಲ್ಲ. ಈಶ್ವರ ಖಂಡ್ರೆ ಒಬ್ಬ ಅಜಾತಶತ್ರು. ರಾಜ್ಯದ ಚುಕ್ಕಾಣಿ ಹಿಡಿಯುವ ಮುಖಂಡರು. ಚೌಳಿಯವರನ್ನು ಬಂಧನದಲ್ಲಿರಿಸಲು ಈಶ್ವರ ಖಂಡ್ರೆಯವರು ನಿರ್ದೇಶಿಸಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ವಿಷಯ. ಅವರ ಹೆಸರಿಗೆ ಮಸಿ ಬಳಿಯುವ ಕೆಲಸ ಪೊಲೀಸರು ಮಾಡಿದ್ದಾರೆ. ಇದನ್ನು ಸಾರ್ವಜನಿಕರಿಗೆ ಸ್ಪಷ್ಟಪಡಿಸಬೇಕು. ಸಚಿವದ್ವಯರ ಮೇಲೆ ಬಂದಿರುವ ಈ ಸುಳ್ಳು ಆರೋಪಕ್ಕೆ ಉತ್ತರ ಸಿಗಬೇಕು ಎಂದು ಆಗ್ರಹಿಸಿದ ಗಾಯಕವಾಡ ಅವರು ಇದನ್ನು ಕೂಡಲೇ ಸ್ಪಷ್ಟಪಡಿಸದಿದ್ದಲ್ಲಿ ಪೊಲೀಸರ ವಿರುದ್ಧ ಜಿಲ್ಲೆಯಾದ್ಯಂತ ಎಲ್ಲಾ ದಲಿತಪರ ಸಂಘಟನೆಗಳು ಸೇರಿ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಡಿಎಸ್‌ಎಸ್ ಭೀಮವಾದ ಜಿಲ್ಲಾ ಸಂಚಾಲಕ ಸುನೀಲ ಸಂಗಮ, ಡಿಎಸ್‌ಎಸ್ ಅಂಬೇಡ್ಕರ್ ವಾದ ಜಿಲ್ಲಾ ಸಂಚಾಲಕ ರಮೇಶ ಮಂದಕನಳ್ಳಿ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಎ.ಪಿ.ಬೌದ್ಧೆ ಅಮಲಾಪುರ, ಭಾರತೀಯ ಜೈಭೀಮ್ ದಳ ಜಿಲ್ಲಾಧ್ಯಕ್ಷ ಅಂಬೇಡ್ಕರ್ ಸಾಗರ, ಭೀಮ ಟೈಗರ್ ಸೇನಾ ಜಿಲ್ಲಾಧ್ಯಕ್ಷ ನರ್ಸಿಂಗ್ ಸಾಮ್ರಾಟ್, ದಲಿತ ಮುಖಂಡ ಅಂಬಾದಾಸ್ ಸೋನಿ, ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ರವಿಂದ್ರ ಕೊಳ್ಳೂರ, ದಲಿತಮುಖಂಡರಾದ ಲಕ್ಷ್ಮಿಕಾಂತ್, ಅಹ್ಮದ್ ಪಾಶಾ, ದಿಲೀಪ, ಲಕ್ಷ್ಮಣ ಶೇರಿಕಾರ, ಭಾಸ್ಕರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಸವ ಜಯಂತಿ ಉತ್ಸವ ಸಮಿತಿ ಕಚೇರಿ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ.19: 2025ನೇ ಸಾಲಿನ ಬಸವ ಜಯಂತಿ ಉತ್ಸವ ಸಮಿತಿಯ ಕಚೇರಿಯನ್ನು ನಗರದ ಉದಗಿರ ರಸ್ತೆಯಲ್ಲಿ ಇರುವ ವಾಲಿ ಕಾಂಪ್ಲೆಕ್ಸ್‌ನಲ್ಲಿ ಶುಕ್ರವಾರ ಉದ್ಘಾಟಿಸಲಾಯಿತು.



ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು ಕಚೇರಿ ಉದ್ಘಾಟಿಸಿದರು. ಬಸವ ಸೇವಾ ಪ್ರತಿಷ್ಠಾನದ ಡಾ. ಗಂಗಾಂಬಿಕೆ ಅಕ್ಕ ಗುರು ಪೂಜೆ ನೆರವೇರಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ನಗರದಲ್ಲಿ ಅದ್ಧೂ–ರಿಯಾಗಿ ಬಸವ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ. ಜಯಂತಿ ಯಶಸ್ವಿಗೆ ಭರದ ಸಿದ್ಧತೆಗಳು ನಡೆದಿವೆ ಎಂದು ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಜೈರಾಜ ಖಂಡ್ರೆ ಹೇಳಿದರು.

ಬಸವ ಜಯಂತಿ ಉತ್ಸವ ಸಮಿತಿಯ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಡಾ. ವಿಜಯಶ್ರೀ ಬಶೆಟ್ಟಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ವಿಜಯಲಕ್ಷ್ಮಿ ಕೌಟಗೆ ಅವರನ್ನು ನೇಮಕ ಮಾಡಲಾಯಿತು.

ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಬೀದರ್ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ.ಜಿ. ಶೆಟಕಾರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ವೈಜಿನಾಥ ಕಮಠಾಣೆ, ರಾಷ್ಟ್ರೀಯ ಬಸವ ದಳದ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಪಾಟೀಲ ಗಾದಗಿ, ಜಾಗತಿಕ ಲಿಂಗಾಯತ ಮಹಾಸಭಾದ ಕೇಂದ್ರ ಸಮಿತಿಯ ಉಪಾಧ್ಯಕ್ಷ ಬಸವರಾಜ ಬುಳ್ಳಾ, ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ, ಬಸವ ಜಯಂತಿ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಂಜೀವಕುಮಾರ ಪಾಟೀಲ, ಖಜಾಂಚಿ ಡಾ. ರಜನೀಶ್ ವಾಲಿ, ಲಿಂಗಾಯತ ಬ್ರಿಗೇಡ್ ಜಿಲ್ಲಾ ಅಧ್ಯಕ್ಷ ಬಸವರಾಜ ಪಾಟೀಲ ಹಾರೂರಗೇರಿ, ಮುಖಂಡರಾದ ದೀಪಕ್ ವಾಲಿ, ಪ್ರಭುರಾವ್ ವಸ್ಮತೆ, ಜಗದೀಶ್ ಖೂಬಾ, ಆನಂದ ದೇವಪ್ಪ, ಧನರಾಜ ಹಂಗರಗಿ, ಬಾಬುರಾವ್ ದಾನಿ, ವಿಜಯಕುಮಾರ ಪಾಟೀಲ ಯರನಳ್ಳಿ, ಬಸವರಾಜ ಭತಮುರ್ಗೆ, ಅರುಣ ಹೋತಪೇಟ್, ಸಿದ್ರಾಮಯ್ಯ ಸ್ವಾಮಿ, ಪ್ರಕಾಶ ಸಾವಳಗೆ, ಕಂಟೆಪ್ಪ ಗಂದಗುಡೆ, ಯೋಗೇಂದ್ರ ಯದಲಾಪುರೆ, ಶಾಂತಾ ಖಂಡ್ರೆ, ಸಂಗಪ್ಪ ಹಿಪ್ಪಳಗಾಂವ್ ಮತ್ತಿತರರು ಇದ್ದರು.

# ಜನಾಕ್ರೋಶ ಅಲ್ಲ; ಹತಾಶೆ ಯಾತ್ರೆ

ಬೀದರ.ಏ.19: ರಾಜ್ಯದಲ್ಲಿ ಬಿಜೆಪಿ ನಡೆಸುತ್ತಿರುವುದು ಜನಾಕ್ರೋಶ ಯಾತ್ರೆಯಲ್ಲ; ಹತಾಶೆಯ ಯಾತ್ರೆ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ ಟೀಕಿಸಿದ್ದಾರೆ. ರಾಜ್ಯದ ಜನ ಕಾಂಗ್ರೆಸ್ ಆಡಳಿತದಿಂದ ಸಂತೃಪ್ತರಾಗಿದ್ದಾರೆ. ಸರ್ಕಾರದ ಜನಪರ ಯೋಜನೆಗಳು ಜನರ ಬದುಕಿನಲ್ಲಿ ಬಹಳಷ್ಟು ಬದಲಾವಣೆ ತಂದಿವೆ. ದಿನೇ ದಿನೇ ಹೆಚ್ಚುತ್ತಿರುವ ಸರ್ಕಾರದ ಜನಪ್ರಿಯತೆ ಬಿಜೆಪಿಗೆ ಸಹಿಸಲು ಆಗುತ್ತಿಲ್ಲ ಎಂದು ಆರೋಪಿಸಿದ್ದಾರೆ. ಜನರಿಗೆ ಸರ್ಕಾರದ ಬಗ್ಗೆ ಯಾವುದೇ ಆಕ್ರೋಶ ಇಲ್ಲ. ವಾಸ್ತವದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಆರೋಪ ಹಾಗೂ ಅಪಪ್ರಚಾರ ಮಾಡಲು ಯಾವುದೇ ಅಂಶಗಳಿಲ್ಲವೆಂಬ ಆಕ್ರೋಶ ಬಿಜೆಪಿಗೆ ಇದೆ. ಮುಂದೆಯೂ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಅವರಿಗೆ ಮನವರಿಕೆಯಾಗಿದೆ. ಹೀಗಾಗಿ ತಮ್ಮ ಆಕ್ರೋಶಕ್ಕೆ, ಜನಾಕ್ರೋಶ ಯಾತ್ರೆಯ ಹೆಸರಿಟ್ಟು ಹೊಸ ನಾಟಕ ಮಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.



ದೇಶದಲ್ಲಿ ಬೆಲೆ ಏರಿಕೆ ಹಾಗೂ ಜನಸಾಮಾನ್ಯರ ಬದುಕು ದುಸ್ತರವಾಗಲು ಕೇಂದ್ರ ಸರ್ಕಾರದ ನೀತಿಗಳೇ ಕಾರಣವಾಗಿವೆ. ಆದರೆ, ಜನರ ದಿಕ್ಕು ತಪ್ಪಿಸಲು ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ಯಾತ್ರೆ ನಡೆಸುತ್ತಿದೆ ಎಂದು ಆರೋಪಿಸಿದ್ದಾರೆ.

ಪ್ರಧಾನಿ ಮೋದಿ ಅವರು ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ಕೊಟ್ಟಿದ್ದರು. ಈಗ ಉದ್ಯೋಗ ಕೇಳಿದರೆ ಪಕೋಡಾ ಮಾರಲು ಹೇಳುತ್ತಿದ್ದಾರೆ. ಬಿಜೆಪಿಯ ಭರವಸೆಗಳೆಲ್ಲ ಹುಸಿಯಾಗಿವೆ. ರಾಜ್ಯ ಸರ್ಕಾರ ಹಾಗೂ ಸಿದ್ದರಾಮಯ್ಯ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ವಿರುದ್ಧ ಹುಸಿ ಆರೋಪ ಮಾಡಿ ಛೀಮಾರಿ ಹಾಕಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಇತ್ತೀಚೆಗೆ ನಡೆದ ರಾಜ್ಯ ವಿಧಾನಸಭೆ ಉಪ ಚುನಾವಣೆಯಲ್ಲಿ ಇಬ್ಬರು ಮಾಜಿ ಮುಖ್ಯಮಂತ್ರಿಗಳ ಮಕ್ಕಳನ್ನು ಜನ ಸೋಲಿಸಿದ್ದಾರೆ. ಕೇಂದ್ರದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಕ್ಷಗಳ ಬಗ್ಗೆ ಜನರಲ್ಲಿ ಎಷ್ಟು ಆಕ್ರೋಶ ಇದೆ ಎಂಬುದ್ದಕ್ಕೆ ಇದು ಉದಾರಣೆಯಾಗಿದೆ ಎಂದು ತಿಳಿಸಿದ್ದಾರೆ.

# ಗೌರ್ಮೆಂಟ್ ಸರ್ವೆಂಟನ ಹೆಂಡ್ತಿ (ಹಾಸ್ಯ/ವಿಡಂಬನೆ)

## ರಂಗಣ್ಣನಿಗೆ ಕೆ.ಎಸ್.ಆರ್.ಟಿ.ಸಿ.ಬಸ್ ಡ್ರೈವರ್ ಹುದ್ದೆ ಸಿಕ್ಕಿದ ಕೂಡಲೆ ಆತನ ಹೆಂಡ್ತಿ ಪಾರುಗೆ ಎಲ್ಲಿಲ್ಲದ ಖುಷಿ. ಅದು ಆಕೆಗೆ ತಡೆಯಲಿಕ್ಕೆ ಆಗಲಿಲ್ಲ.

"ದರಿದ್ರನಿಗೆ ಐಶ್ವರ್ಯ ಬಂದ್ರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಕ್ಕೊಂಡನಂತೆ"ಅಂತಾರಲ್ಲ ? ಹಾಗೆ ಆಕೆ ಒಳಗೊಳಗೆ ಒಂದ್ ನಮೂನಿ ಖುಷಿಯಾಗಿ ಹುಚ್ಚೆದ್ದು ಕುಣಿದಾಡಿದಳು.

ಕಂಡಕಂಡವರಿಗೆಲ್ಲ " ನನ್ ಗಂಡ ಗೌರ್ಮೆಂಟ್ ಸರ್ವೆಂಟ ಆದ.

ನಾನು ಈಗ " ಗೌರ್ಮೆಂಟ್ ಸರ್ವೆಂಟನ ಹೆಂಡ್ತಿ " ಅಂತ ಏನೆಲ್ಲ ಕನಸ ಕಾಣ್ತಾ ಊರಲೆಲ್ಲ ಮನೆಮನೆಗೂ ತಿರುಗಿ

ಪೇಡಾ ಹಂಚಿ ಒಮ್ಮೆ ನಿರ್ಮೂಳಾಗಿನಿಟ್ಟುಸಿರು ಬಿಟ್ಟಳು.

ಈ ಮೊದಲು ರಂಗಣ್ಣ ಲಾರಿ ಡ್ರೈವರ್ ಆಗಿ ಭಾರಿ ವಾಹನ ಚಾಲನ ಪರವಾನಿಗಿ ಪಡೆದು ಮುಂಬೈ –ಹೈದರಾಬಾದ್, ಚೆನ್ನೈಯಂತ ನಗರಗಳಿಗೆ ಸರಕು ಸಾಗಾಣೆ ಮಾಡುತ್ತಾ ತಿರುಗಾಡುತ್ತಿದ್ದ. ಅಂತದ್ರಲ್ಲಿ ಕೆ.ಎಸ್.ಆರ್.ಟಿ.ಸಿ.ಯವರು ಡ್ರೈವರ್ ಕಂ.ಕಂಡಕ್ಟರ್ ಮತ್ತು ಬರಿ ಡ್ರೈವರ್ ಹುದ್ದೆಗೆ ಅರ್ಜಿ ಆಹ್ವಾನಿಸಿದರಿಂದ ಖಖಐಅ ಪಾಸ್ ಇದ್ದ ಕಾರಣ ಅವ ಅರ್ಜಿ ಹಾಕಿದ.

ಆ ವರ್ಷ ನೇಮಕಾತಿ ನಿಯಮದಲ್ಲಿ ಕಡಿಮೆ ಅಂಕ ಪಡೆದು ತೇರ್ಗಡೆಯಾದವರಿಗೆ ಮೊದಲ ಆದ್ಯತೆ ಮೇರೆಗೆ ಆಯ್ಕೆಗೆ ಪರಿಗಣಿಸುತ್ತಿದ್ದರಿಂದ ರಂಗನ ಹೆಸರು ಆಯ್ಕೆ ಪಟ್ಟಿಯಲ್ಲಿ ಮೊದಲನೆಯದಾಗಿ ಸೇರ್ಪಡೆಯಾಗಿತ್ತು.ಇದನು ತಿಳಿದ ಪಾರುಗೆ ಖುಷಿಯೋ ! ಖುಷಿ .

ಆಕೆಯ ಸಂತಸಕ್ಕ ಪಾರವೆ ಇರಲಿಲ್ಲ.

" ಐ ! ವಿಶಾಲಾಕ್ಷಮ್ಮನವರೆ ! ಖರೇನು ನನ್ ಗಂಡ ಅದೇಟ್ಟು ಶಾಣ್ಯ ಅದಾನು ಗೊತ್ತೇನ್ರೀ ?

ಎಟ್ ಸಾಲಿ ಕಲ್ತುರು ನೌಕರಿ ಸಿಗದೆ ಇರೋ ಈ ಕಾಲದಾಗ ನನ್ ಗಂಡ ಒಂದೇ ಏಟಿಗಿ 'ಮಾವಿನಕಾಯಿ'ಉದುರಿಸಿದಾಂಗ 'ಒಂದೇ ಸಲ' ಪರೀಕ್ಷೆ ಬರದು ನೌಕರಿ ತಗೊಂಡಾನ ಅಂದ್ರಾ ಇದೇನು ಸುಮ್ಮನೇನಾ ?

ಇಕಾ ! ಇಲ್ನೋಡ್ರಿ ! ನನ್ ಗಂಡ ಡ್ರೈವರ್ ಡ್ರೆಸಲ್ಲಿ ಎಟ್ ಚಂದ ಮುದ್ದ ಮುದ್ದಾಗಿ ಕಾಣ್ತಾನ ? " ಅಂತ ಪಕ್ಕದ ಮನೆಯವಳಿಗೆ

ತನ್ ಗಂಡ ಡ್ಯೂಟಿ ಮೇಲಿದ್ದಾಗ ತೆಗೆದ ಸೇಲ್ಫಿ ಪೋಟೊ ತೆ–ೂರಿಸಿ ಖುಷಿ ಪಟ್ಟಳು.

ಒಂದಿನ ಪಾರು ಊರ ಕೆರೆಗೆ ಬಟ್ಟೆ ಒಗೆಯಲು ಹೋಗಿದಳು.

ಅಲ್ಲಿ ಆಕೆಯ ಮನೆ ನೆರೆಹೊರೆಯ ಹೆಂಗೆಳೆಯರಾದ ಲಕ್ಷ್ಮಿ ಮತ್ತು ಪ್ರಭಾ ಇದ್ದದ್ದು ನೋಡಿ ಮತ್ತೆ ತನ್ನ ಗಂಡಗ ನೌಕರಿಯಾದ ಖುಷಿಯಲ್ಲಿ ಮಾತಿಗಿಳಿದು

" ಏ , ಲಕ್ಷ್ಮಿ ! ನಿನ್ ಗಂಡ ಏನ್ ಮಾಡ್ತಿದ್ದಾನೆ ? ಹಿನ್ನಾ ಲಾರಿ ಡ್ರೈವರೆ ಆಗೆ ಹನಾ ಏನ್ ಮತ್ತ ? ನನ್ ಗಂಡ ನೋಡು, ಅದೇನೋ ಸಿ.ಟಿ.ಎಕ್ಸಾಮ್ ಬರ್ದು ಸರ್ಕಾರಿ ನೌಕರಿ ತಗೊಂಡಾನ. ನೀನು ನಿನ್ ಗಂಡಗ ಬಸ್ಸಿನ ಡ್ರೈವರ್ 'ಟ್ರಾಯ್ ' ಮಾಡ್ಲಿಕ್ ಹೇಳು " ಅಂತ ಆಕೆ ತನ್ ಗಂಡ ರಂಗಣ್ಣನ ಬಗ್ಗೆ ಬಿಲ್ಡಾಪ ಕೊಟ್ಟು ಮಾತಾಡಿ ಕೆರಯ ಕ–ಟ್ಟೆಯ ಕಲ್ಲಿನ ಮೇಲೆ ಬಟ್ಟೆಗೆ ಸಾಬೂನು ಹಚ್ಚಿ 'ಪರ್ ಪರ್ ' ಅಂತ ಬಗ್ಗಿ ತಿಕ್ಕತೊಡಗಿದಳು.

ಆಗ ಲಕ್ಷ್ಮಿ " ನನ್ ಗಂಡ ಖಖಐಅ ಪಾಸಿಲ್ಲೆ ಯಕ್ಕಾ ! ಅದ್ಕೆ ಅವರು ಸುಮ್ಮಕ್ಕಾಗಿರೊದು." ಅಂತ ಅವಳು ಕೆರೆಯಲ್ಲಿ ನಿಂತು ಬಟ್ಟೆ ಬಡೆಯತೊಡಗಿದಳು.

ಆಗ ಅವಳ ಮಾತಿಗೆ ಮರು ಮಾತಾಡದೆ ಅಲ್ಲಿ ಬಟ್ಟೆಗೆ ನಿರ್ಮಾ ಹಾಕಿ ಬಕೆಟ್ ನಲ್ಲಿ ಕಲಸುತ್ತಾ 'ಬುರುಗ್ ' ಎಬ್ಬಿಸುತ್ತಿದ್ದ ಪ್ರಭಾಳ ಕಡೆಗೆ ನೋಡಿ

" ಏನ್ ಪ್ರಭಾ ! ನಿನ್ ಗಂಡ ಎಟ್ ಸಾಲಿ ಕಲ್ತಾನ , ಆದ್ರೂ ನೌಕರಿ ಸಿಗಲಿಲ್ಲ ? ಎಮ್ಮೇ. ಹೆಮ್ಮೆ.ಫುಲ್.ಪಿಚ್ಡಿ.ಸಾಲಿ ಕಲ್ತರನು ನೀ ಹಿನ್ನಾ ಕಷ್ಟ ಪಡ್ತಿರೊದು ನೋಡದ್ರೆ

ನಂಗೆ ಕರಳು 'ಚುರ್'ಅಂತಾದ ನೋಡು ಪಾಪ ! " ಅಂತ ಆಕೆ ಪ್ರಭಾಳ ಕುರಿತು ಮರುಕ ವ್ಯಕ್ತಪಡಿಸಿದಳು.

" ಏನ್ ಮಾಡ್ಲಾಕ್ ಆಗ್ತದ ಯವ್ವಾ ! ನಮ್ ಹಣೆಬರಹನೆ ಇಷ್ಟು.

ಆ ಬೊಮ್ಮ , ಯಾರ್ಯಾರ್ ಹಣೆಬರಹ ಹ್ಯಾಂಗೆಂಗ್ ಬರದಿದ್ದಾನೋ ! ಯಾನೋ !

ಆ ಶಿವ್ನೆ ಬಲ್ಲ " ಅಂತ ಆಕಿ ತನ್ ಕೆಲಸದಲ್ಲಿ ತಲ್ಲಿನಳಾದಳು.

ಆದ್ರೂ ಮಾತಿನ ಹುಚ್ಚು ಮಾತುಗಾರನಿಗೆ ಗೊತ್ತು .

ಹಾಂಗೆ ಆಕಿ ಮತ್ತೆ ಲಕ್ಷ್ಮಿ ಕಡೆಗೆ ತಿರುಗಿ.

" ಲಕ್ಷ್ಮಿ, ನಿನ್ ಗಂಡ ಏನಾರ್ ಬಂಗಾರ–ಗಿಂಗಾರ್ ಮಾಡಿಸಿದ್ನಾ ಹೆಂಗೆ ? ನನ್ ಗಂಡ ನೋಡು ನೌಕರಿ ಸೇರಿದಾಗ ಬಂದ ಮೊದಲನೇ ಸಲದ ಐದಾರು ತಿಂಗಳ ಪಗಾರದಲ್ಲಿ ನಂಗೆ ಅಂತಾನೆ ಮೂರ್ ತೊಲಿ ಗಂಟನ್ ಮಾಡಿಸಿ ಕ್ವಾಟ್ಟಾನ.

ಮತ್ತೆ ಮುಂದಿನ ಸಲ ಬಂಗಾರ ಬಳೆ ಮಾಡಿಸ್ತಿನಿ ಅಂದಾರ " ಅಂತ ಹಸನ್ಮುಖಿಯಾಗಿ ನುಡಿದಾಗ ಲಕ್ಷ್ಮಿ 'ಹೌದಾ ' ಅಂತ ತಲೆ ಅಲ್ಲಾಡಿಸಿ " ನನ್ ಗಂಡಾನು ಮಾಡಸ್ತಿನಿ ಅಂದಾರ " ಅಂತ ಆಕೆ ಗಂಡನಿಗೆ ಬಿಟ್ಟು ಕೊಡದೆ ಹೇಳಿದಳು. ಆಗ ಮತ್ತೆ ಆಕೆ ಪ್ರಭಾಳ ಕಡೆಗೆ ನೋಡಿ

"ಪ್ರಭಾ ನೀನೇನು ಮಾಡಿಕೊಂಡೆ ? ಅಂತ ಅನ್ನುತ್ತಾ ಬಗ್ಗಿ ಒಗೆದ ಬಟ್ಟೆ ಎಡ್ಡು ಕೈಗಳಿಂದ ಒಡ್ಡಮುರ್ದು ಬಟ್ಟೆ ಹಿಂಡುತ್ತಾ

" ನಿಂಗೇನ್ ಆಗ್ತದ ಬಿಡು. ಪಾಪ ! ನಿನ್ ಗಂಡಂಗೆ ನೌಕರಿ ಇಲ್ಲ. ಚಾಕರಿ ಇಲ್ಲ .ನಿನೊಬ್ಬಳು ಸಿಕ್ಕಿದಿ ಚೊಕರಿ. " ಅಂತ ಲೇವಡಿ ಮಾಡಿ ಒಂದ ನಮೂನಿ ನಕ್ಕು ಮತ್ತೆ ಮುಂದುವರೆದು

" ಏಟ್ ಓದಿದ್ರು ಅಟೇ ಅದಾ .ಓದಿ ಓದಿ ಕೆಟ್ಟ ಖೂಚ್ ಭಟ್ " ಅಂತ ಹೇಳ್ತಾರೆ . ಏಟ್ಟು ಓದ್ದಾರೆ ನಿನ್ ಗಂಡ ? ಜರಾ ಓದೊದು ಬಿಟ್ಟು ಯಾವುದಾದ್ರೂ ಲಾರಿನೋ ! ಬಸ್ನೋ ! ಕಲ್ತು ಡ್ರೈವರ್ ಹುದ್ದೆಗೆ ಸೇರಕ್ಕೊ ! ಅಂತ ಹೇಳಬಾರದೆ ? " ಅಂತ ಆಕೆ ಕೊಂಕು ನುಡಿದು ನನ್ನ ಗಂಡನೆ ಗವರ್ನಮೆಂಟ್ ಸರ್ವೆಂಟ ಹನಾ ಈ ಊರಲ್ಲಿ .ನಾನೇ ಅದೃಷ್ಟವಂತೆ ಇವರೆಲ್ಲ ನನಗಿಂದ ಕನಿಷ್ಠರು ಅನ್ನೋ ಮನೋಭಾವದಲ್ಲಿ ತೆಲಾಡಿದಳು. ಇವಳ ಮಾತು ಪ್ರಭಾಳಿಗೆ ನೋವಾದರು ತೋರ್ಪಡಿಸದೆ ಸುಮ್ಮನಾಗಿದಳು.

ಒಂದಿನ ರಂಗಣ್ಣನ ಹೆಂಡ್ತಿ ಪಕ್ಕದೂರಿಗೆ ಪ್ರಭಾ,ಲಕ್ಷ್ಮಿ ರಾಧಾ ಕಾವೇರಿಯವರ ಜೋತೆಗೂಡಿ ಮದುವೆಗೆಂದು ಹೋಗಿದಳು.

ಅಲ್ಲಿ ಪ್ರಭಾಳ ಸಂಬಂಧಿ ತುಕ್ಕಮ್ಮಾ ಅನ್ನೋ ಮಹಿಳೆಯೊಬ್ಬಳು ಪರಿಚಯವಾಗಿದಳು .

ಅಲ್ಲಿ ಮದುವೆ ಮುಗಿಸಿಕೊಂಡು ಎಲ್ಲರೂ ಜೋತೆಗೂಡಿ ಬಸ್ ನಿಲ್ದಾಣದ ಕಡೆಗೆ ನಡೆದು ಬರುವಾಗ ಎದುರಿಗೆ ಒಂದು ಬಸ್ಸು ದೂರದಿಂದ ಬರತೆ–ೂಡಗಿತು.

ಅದನ್ನು ನೋಡಿದ ಆಕೆಯ ಮಕ್ಕಳು ಆ ಬಸ್ಸನು ನೋಡಿ

" ಮಮ್ಮಿ ಬಸ್ ಬಂತ್ತು . ಬಸ್ಸು ..! " ಅಂತ ಚೀರಿ ಹೇಳಿದ್ದೆ ತಡ

" ಹಾ ! ಬಂತ್ತು ಬಂತ್ತು ನಿಮ್ಮಪ್ಪಂದೆ ಬಸ್ ಬಂತ್ತು. ನೋಡು ನೋಡು ಅಲ್ನೋಡು.

ನಿಮ್ಮಪ್ಪನೆ ಬಸ್ ನಡಸ್ತಾ ಇದ್ದಾನೆ " ಅಂತ ಅಲ್ಲಿದ್ದ ಎಲ್ಲರಿಗೂ ಕೇಳಿಸುವಂತೆ ಏರು ಧ್ವನಿಯಲ್ಲಿ ಹೇಳಿದ್ದೆ ತಡ

" ಅವ್ವಾ ! ಇವ್ಳ ಗಂಡ ಬಸ್ಸಿನ ಡ್ರೈವರ್ ಹನಾ ಏನೆ ತಂಗಿ " ವಯಸ್ಸಾದ ತುಕ್ಕಮಾಜ್ಜಿ ಆಚರ್ಯ ಚಕಿತಳಾಗಿ ಕೇಳಿದಳು.

ಆಗ ಆಕೆ " ಹೂಂ ರ್ೀ ! ನನ್ ಗಂಡ ಬಸ್ಸಿನ ಡ್ರೈವರ್ ಹನಾ " ಅಂತ ಹಮ್ಮಿನಿಂದ ಹೇಳಿದಳು.

ಆಗ ಆಕೆ

" ಐ ! ಬಿಡೇ ತಂಗಿ. ನಿನ್ಗೇನ್ ಕಮ್ಮಿ ಅದಾ. ನೀ ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ ಆದಿ.

ನಿಂಗೇನ್ ಕುದಿ ಅದಾ ಈಗ ? ನಮ್ದು ಈ ಪ್ರಭಾಳದು ದುಡಿದು ತಿನ್ನೋ ಕಷ್ಟದ ಜೀವನ ಅದಾ ನೋಡು "ಅಂತ ಅನ್ನುತ್ತಿದಂತೆ ಪಾರುವಿನ ಮುಖದಲ್ಲಿ ಒಂದು ನಮೂನೆಯ ನಗೆಯ ಬೇಳಕು ಚೆಲ್ಲಿತ್ತು.

ಆಗ ಅಲ್ಲಿ ಹೋಗೊರೆಲ್ಲ ಇವಳ ಕುರಿತು ಮಾತಾಡುವುದನ್ನು ಕೇಳಿ

ಒಮ್ಮೆ ಪಾರುವಿನ ಕಡೆಗೆ ತಿರುಗಿ ವಾರೆಗಣ್ಣಿನಿಂದ ನೋಡಿ

ಹೆಜ್ಜೆ ಹಾಕತೊಡಗಿದರು.

ಆದ್ರೆ ಆ ಬಸ್ಸು ಹತ್ತಿರ ಹತ್ತಿರ ಬರುತ್ತಿದಂತೆ ಅದರ ಡ್ರೈವರ್ ಅವಳ ಗಂಡ ಅಲ್ಲ. ಬೇರೆ ಯಾರೋ ಅನ್ನೋದು ತಿಳಿದು ನೀರಾಸೆಯಾಗಿ ಆಕೆ ಮುಖ ಕೆಳಗೆ ಮಾಡಿದಳು. ಆಕೆಯ ಮಗಳು ಒಮ್ಮೆ ಅಮ್ಮನ ಮುಖ ನೋಡಿ

" ಮಮ್ಮಿ ಪಪ್ಪ ಅಲ್ಲ " ಅಂದಿತ್ತು ಮೆಲ್ಲಗೆ

" ನಿಮ್ಮ ಪಪ್ಪಾಂದೆ ಬಸ್ ಅದಾ ! ಇವತ್ತು ಬೇರೆಯವರಿಗೆ ನಡಸಲಾಕ್ ಕ್ವಾಟ್ಟಾರಂತ ಕಾಣಿಸ್ತದ

ನಡಿ ಮುಂದೂಕ್ ನಡಿ " ಅಂತ ಮಗಳ ಕೈ ಹಿಡಿದೆಳೆದು ರಸ್ತೆ ದಾಟಿ ಎಲ್ಲರೊಂದಿಗೆ ಆಚೆಗೆ ಹೋಗಿ ಊರಿಗೆ ಹೋಗುವ ಬಸ್ಸಿಗಾಗಿ ಕಾಯುತ್ತಾ ನಿಂತಳು.

ಪಾರು ಮದುವೆಗೂ ಮುಂಚೆ ತನ್ನ ತವರು ಮನೆಯಲ್ಲಿ ಕೂಲಿ–ನಾಲಿ ಮಾಡಿಕೊಂಡು ಕಷ್ಟ ಪಡ್ತಿರುವಾಗ ಈ ರಂಗಣ್ಣನ ಜೋತೆಗೆ ಮದುವೆ ಮಾಡಿಕೊಟ್ಟಿದ್ರು ಮದುವೆಗೂ ಮುಂಚೆ ರಂಗಣ್ಣ ಲಾರಿ ಡ್ರೈವರ್ ಆಗಿ ಕೆಲಸ ಮಾಡ್ತಿದ್ದ . ಅವನ ಊರಲ್ಲಿ



ಯಾರಿಗೂ ಸರ್ಕಾರಿ ನೌಕರಿ ಇಲ್ಲದ ಕಾಲದಲ್ಲಿ ಇದ್ದಕ್ಕಿದ್ದಂತೆ ಬಸ್ ಡ್ರೈವರ್ ಹುದ್ದೆಗೆ ಆಯ್ಕೆ ಆದಾಗಿನಿಂದ ರಂಗಣ್ಣನಕ್ಕಿಂತ ಅವನ ಹೆಂಡ್ತಿನೆ ತೊಲ್ ಜಂಭ ಕೊಚ್ಚಕೊಳ್ತಾ ಇದ್ದಳು.

" ಈ ಊರಲ್ಲಿ ನಾನೆ ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ"ಅನ್ನೋ ಮನೋಭಾವದಲ್ಲಿ ವರ್ತಿಸುತ್ತಿದ್ದಳು.

ಒಂದು ದಿನ ಪಾರುವಿನ

ಎದಿರು ಮನೆಯ ಪ್ರಭಾಳ ಗಂಡನಿಗೆ ನೇರವಾಗಿ ಸರ್ಕಾರಿ ಕಾಲೇಜಿನ ಉಪನ್ಯಾಸಕ ಹುದ್ದೆಗೆ ಆಯ್ಕೆಯಾಗಿದ್ದರಿಂದ ಅವಳು ಕುಟುಂಬ ಸಮೇತ ಬೀದರದಲ್ಲಿ ಉಳಿದು ಜೀವನ ಮಾಡತೊಡಗಿದಳು.

ಬಹಳ ದಿನಗಳ ನಂತರ ಪಾರುವಿಗೆ ಗೊತ್ತಾಗಿತ್ತು.

ನಿಜವಾಗಿ "ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ " ಪ್ರಭಾ ಅನ್ನೋದು.

ತನ್ನ ಗಂಡ ಅರೆಸರ್ಕಾರಿ ದಿನಗೂಲಿ ನೌಕರಿಯಲ್ಲಿದ್ದಾನೆಂದು ಆಕೆಯ ಗಂಡ ಒಂದು ದಿನ ಟಿ.ವಿ.ಯಲ್ಲಿ ಕೆ.ಎಸ್.ಆರ್.ಟಿ.ಸಿ.ನೌಕರರು ನಡೆಸಿದ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಆತನೆ ನೇರವಾಗಿ ಮಾತಾಡುತ್ತಿದ್ದ.

"ನಮಗೂ ಸರ್ಕಾರಿ ನೌಕರ–ರೆಂದು ಪರಿಗಣಿಸಿ. ಸರ್ಕಾರಿ ನೌಕರರಿಗೆ ನೀಡುವ ಸವಲತ್ತುಗಳನ್ನು ನೀಡಿ ಸಹಾಯ ಸಹಕಾರ ಮಾಡಿ.ನಮ್ಮ ಕೆ.ಎಸ.ಆರ್.ಟಿ.ಸಿ .ಸಿಬ್ಬಂದಿಯವರ ಕುಟುಂಬದವು ತುಂಬ ಅತಂತ್ರದಲ್ಲಿವೆ.ನಮಗೂ ಸೇವಾ ಭದ್ರತೆ ಒದಗಿಸಿ. ನಮ್ಮ ಡ್ರೈವರ್–ಕಂಡಕ್ಟರ ಕುಟುಂಬಗಳಿಗೆ ರಕ್ಷಣೆ ನೀಡಿ. ಮತ್ತೆ ನಮಗೆ 'ಅರೆಸರ್ಕಾರಿ ನೌಕರರು' ಅನ್ನೋ ಪದ ತೆಗೆದು ಪೂರ್ಣ ಪ್ರಮಾಣದ ಸರ್ಕಾರಿ ನೌಕರ–ರೆಂದು ಘೋಷಣೆ ಮಾಡಿ. ಎಲ್ಲಿಯವರೆಗೆ ನೀವು ನಮಗೆ ' ಸರ್ಕಾರಿ ನೌಕರರು' ಅಂತ ಘೋಷಣೆ ಮಾಡುವುದಿಲ್ಲವೋ ! ಅಲ್ಲಿಯವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ " ಅಂತ ಹೇಳಿ ರಂಗಣ್ಣ ತನ್ನ ಭಾಷಣ ಮುಗಿಸಿದ.

ಈ ಮಾತುಗಳನ್ನು ನೇರವಾಗಿ ಎಲ್ಲಾ ಟಿ.ವಿ ಚಾನಲ್ ಗಳಲ್ಲಿ ಬಿತ್ತರವಾಗತೊಡಗಿತ್ತು.

ಇದನ್ನು ಕೇಳಿದ ಪಾರುವಿಗೆ ಈಗ ನಿಜವಾಗಿಯೂ ಅರ್ಥವಾಗಿತ್ತು.

ಈಗ ನಮ್ಮೂರಲ್ಲಿ "ಪ್ರಭಾ ಮಾತ್ರ ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ " ಅಂತ.

[18/04, 01:23] ಟಚಿಛಿಜಟ–ಜಡಿಚಿಚಿ40: ರಂಗಣ್ಣನಿಗೆ ಕೆ.ಎಸ್. ಆರ್.ಟಿ.ಸಿ.ಬಸ್ ಡ್ರೈವರ್ ಹುದ್ದೆ ಸಿಕ್ಕಿದ ಕೂಡಲೆ ಆತನ ಹೆಂಡ್ತಿ ಪಾರುಗೆ ಎಲ್ಲಿಲ್ಲದ ಖುಷಿ. ಅದು ಆಕೆಗೆ ತಡೆಯಲಿಕ್ಕೆ ಆಗಲಿಲ್ಲ.

"ದರಿದ್ರನಿಗೆ ಐಶ್ವರ್ಯ ಬಂದ್ರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಕ್ಕೊಂಡನಂತೆ"ಅಂತಾರಲ್ಲ ? ಹಾಗೆ ಆಕೆ ಒಳಗೊಳಗೆ ಒಂದ್ ನಮೂನಿ ಖುಷಿಯಾಗಿ ಹುಚ್ಚೆದ್ದು ಕುಣಿದಾಡಿದಳು.

ಕಂಡಕಂಡವರಿಗೆಲ್ಲ " ನನ್ ಗಂಡ ಗೌರ್ಮೆಂಟ್ ಸರ್ವೆಂಟ ಆದ.

ನಾನು ಈಗ " ಗೌರ್ಮೆಂಟ್ ಸರ್ವೆಂಟನ ಹೆಂಡ್ತಿ " ಅಂತ ಏನೆಲ್ಲ ಕನಸ ಕಾಣ್ತಾ ಊರಲೆಲ್ಲ ಮನೆಮನೆಗೂ ತಿರುಗಿ

ಪೇಡಾ ಹಂಚಿ ಒಮ್ಮೆ ನಿರ್ಮೂಳಾಗಿನಿಟ್ಟುಸಿರು ಬಿಟ್ಟಳು.

ಈ ಮೊದಲು ರಂಗಣ್ಣ ಲಾರಿ ಡ್ರೈವರ್ ಆಗಿ ಭಾರಿ ವಾಹನ ಚಾಲನ ಪರವಾನಿಗಿ ಪಡೆದು ಮುಂಬೈ –ಹೈದರಾಬಾದ್, ಚೆನ್ನೈಯಂತ ನಗರಗಳಿಗೆ ಸರಕು ಸಾಗಾಣೆ ಮಾಡುತ್ತಾ ತಿರುಗಾಡುತ್ತಿದ್ದ. ಅಂತದ್ರಲ್ಲಿ ಕೆ.ಎಸ್.ಆರ್.ಟಿ.ಸಿ.ಯವರು ಡ್ರೈವರ್ ಕಂ.ಕಂಡಕ್ಟರ್ ಮತ್ತು ಬರಿ ಡ್ರೈವರ್ ಹುದ್ದೆಗೆ ಅರ್ಜಿ ಆಹ್ವಾನಿಸಿದರಿಂದ ಖಖಐಅ ಪಾಸ್ ಇದ್ದ ಕಾರಣ ಅವ ಅರ್ಜಿ ಹಾಕಿದ.

ಆ ವರ್ಷ ನೇಮಕಾತಿ ನಿಯಮದಲ್ಲಿ ಕಡಿಮೆ ಅಂಕ ಪಡೆದು ತೇರ್ಗಡೆಯಾದವರಿಗೆ ಮೊದಲ ಆದ್ಯತೆ ಮೇರೆಗೆ ಆಯ್ಕೆಗೆ ಪರಿಗಣಿಸುತ್ತಿದ್ದರಿಂದ ರಂಗನ ಹೆಸರು ಆಯ್ಕೆ ಪಟ್ಟಿಯಲ್ಲಿ ಮೊದಲನೆಯದಾಗಿ ಸೇರ್ಪಡೆಯಾಗಿತ್ತು.ಇದನು ತಿಳಿದ ಪಾರುಗೆ ಖುಷಿಯೋ ! ಖುಷಿ .

ಆಕೆಯ ಸಂತಸಕ್ಕ ಪಾರವೆ ಇರಲಿಲ್ಲ.

" ಐ ! ವಿಶಾಲಾಕ್ಷಮ್ಮನವರೆ ! ಖರೇನು ನನ್ ಗಂಡ ಅದೇಟ್ಟು ಶಾಣ್ಯ ಅದಾನು ಗೊತ್ತೇನ್ರೀ ?

ಎಟ್ ಸಾಲಿ ಕಲ್ತುರು ನೌಕರಿ ಸಿಗದೆ ಇರೋ ಈ ಕಾಲದಾಗ ನನ್ ಗಂಡ ಒಂದೇ ಏಟಿಗಿ 'ಮಾವಿನಕಾಯಿ'ಉದುರಿಸಿದಾಂಗ 'ಒಂದೇ ಸಲ' ಪರೀಕ್ಷೆ ಬರದು ನೌಕರಿ ತಗೊಂಡಾನ ಅಂದ್ರಾ ಇದೇನು ಸುಮ್ಮನೇನಾ ?

ಇಕಾ ! ಇಲ್ನೋಡ್ರಿ ! ನನ್ ಗಂಡ ಡ್ರೈವರ್ ಡ್ರೆಸಲ್ಲಿ ಎಟ್ ಚಂದ ಮುದ್ದ ಮುದ್ದಾಗಿ ಕಾಣ್ತಾನ ? " ಅಂತ ಪಕ್ಕದ ಮನೆಯವಳಿಗೆ

ತನ್ ಗಂಡ ಡ್ಯೂಟಿ ಮೇಲಿದ್ದಾಗ ತೆಗೆದ ಸೇಲ್ಫಿ ಪೋಟೊ ತೆ–ೂರಿಸಿ ಖುಷಿ ಪಟ್ಟಳು.

ಒಂದಿನ ಪಾರು ಊರ ಕೆರೆಗೆ ಬಟ್ಟೆ ಒಗೆಯಲು ಹೋಗಿದಳು.

ಅಲ್ಲಿ ಆಕೆಯ ಮನೆ ನೆರೆಹೊರೆಯ ಹೆಂಗೆಳೆಯರಾದ ಲಕ್ಷ್ಮಿ ಮತ್ತು ಪ್ರಭಾ ಇದ್ದದ್ದು ನೋಡಿ ಮತ್ತೆ ತನ್ನ ಗಂಡಗ ನೌಕರಿಯಾದ ಖುಷಿಯಲ್ಲಿ ಮಾತಿಗಿಳಿದು

" ಏ , ಲಕ್ಷ್ಮಿ ! ನಿನ್ ಗಂಡ ಏನ್ ಮಾಡ್ತಿದ್ದಾನೆ ? ಹಿನ್ನಾ ಲಾರಿ ಡ್ರೈವರೆ ಆಗೆ ಹನಾ ಏನ್ ಮತ್ತ ? ನನ್ ಗಂಡ ನೋಡು, ಅದೇನೋ ಸಿ.ಟಿ.ಎಕ್ಸಾಮ್ ಬರ್ದು ಸರ್ಕಾರಿ ನೌಕರಿ ತಗೊಂಡಾನ. ನೀನು ನಿನ್ ಗಂಡಗ ಬಸ್ಸಿನ ಡ್ರೈವರ್ 'ಟ್ರಾಯ್ ' ಮಾಡ್ಲಿಕ್ ಹೇಳು " ಅಂತ ಆಕೆ ತನ್ ಗಂಡ ರಂಗಣ್ಣನ ಬಗ್ಗೆ ಬಿಲ್ಡಾಪ ಕೊಟ್ಟು ಮಾತಾಡಿ ಕೆರಯ ಕ–ಟ್ಟೆಯ ಕಲ್ಲಿನ ಮೇಲೆ ಬಟ್ಟೆಗೆ ಸಾಬೂನು ಹಚ್ಚಿ 'ಪರ್ ಪರ್ ' ಅಂತ ಬಗ್ಗಿ ತಿಕ್ಕತೊಡಗಿದಳು.

ಆಗ ಲಕ್ಷ್ಮಿ " ನನ್ ಗಂಡ ಖಖಐಅ ಪಾಸಿಲ್ಲೆ ಯಕ್ಕಾ ! ಅದ್ಕೆ ಅವರು ಸುಮ್ಮಕ್ಕಾಗಿರೊದು." ಅಂತ ಅವಳು ಕೆರೆಯಲ್ಲಿ ನಿಂತು ಬಟ್ಟೆ ಬಡೆಯತೊಡಗಿದಳು.

ಆಗ ಅವಳ ಮಾತಿಗೆ ಮರು ಮಾತಾಡದೆ ಅಲ್ಲಿ ಬಟ್ಟೆಗೆ ನಿರ್ಮಾ ಹಾಕಿ ಬಕೆಟ್ ನಲ್ಲಿ ಕಲಸುತ್ತಾ 'ಬುರುಗ್ ' ಎಬ್ಬಿಸುತ್ತಿದ್ದ ಪ್ರಭಾಳ ಕಡೆಗೆ ನೋಡಿ

" ಏನ್ ಪ್ರಭಾ ! ನಿನ್ ಗಂಡ ಎಟ್ ಸಾಲಿ ಕಲ್ತಾನ , ಆದ್ರೂ ನೌಕರಿ ಸಿಗಲಿಲ್ಲ ? ಎಮ್ಮೇ. ಹೆಮ್ಮೆ.ಫುಲ್.ಪಿಚ್ಡಿ.ಸಾಲಿ ಕಲ್ತರನು ನೀ ಹಿನ್ನಾ ಕಷ್ಟ ಪಡ್ತಿರೊದು ನೋಡದ್ರೆ

ನಂಗೆ ಕರಳು 'ಚುರ್'ಅಂತಾದ ನೋಡು ಪಾಪ ! " ಅಂತ ಆಕೆ ಪ್ರಭಾಳ ಕುರಿತು ಮರುಕ ವ್ಯಕ್ತಪಡಿಸಿದಳು.

" ಏನ್ ಮಾಡ್ಲಾಕ್ ಆಗ್ತದ ಯವ್ವಾ ! ನಮ್ ಹಣೆಬರಹನೆ ಇಷ್ಟು.

ಆ ಬೊಮ್ಮ , ಯಾರ್ಯಾರ್ ಹಣೆಬರಹ ಹ್ಯಾಂಗೆಂಗ್ ಬರದಿದ್ದಾನೋ ! ಯಾನೋ !

ಆ ಶಿವ್ನೆ ಬಲ್ಲ " ಅಂತ ಆಕಿ ತನ್ ಕೆಲಸದಲ್ಲಿ ತಲ್ಲಿನಳಾದಳು.

ಆದ್ರೂ ಮಾತಿನ ಹುಚ್ಚು ಮಾತುಗಾರನಿಗೆ ಗೊತ್ತು .

ಹಾಂಗೆ ಆಕಿ ಮತ್ತೆ ಲಕ್ಷ್ಮಿ ಕಡೆಗೆ ತಿರುಗಿ.

" ಲಕ್ಷ್ಮಿ, ನಿನ್ ಗಂಡ ಏನಾರ್ ಬಂಗಾರ–ಗಿಂಗಾರ್ ಮಾಡಿಸಿದ್ನಾ ಹೆಂಗೆ ? ನನ್ ಗಂಡ ನೋಡು ನೌಕರಿ ಸೇರಿದಾಗ ಬಂದ ಮೊದಲನೇ ಸಲದ ಐದಾರು ತಿಂಗಳ ಪಗಾರದಲ್ಲಿ ನಂಗೆ ಅಂತಾನೆ ಮೂರ್ ತೊಲಿ ಗಂಟನ್ ಮಾಡಿಸಿ ಕ್ವಾಟ್ಟಾನ.

ಮತ್ತೆ ಮುಂದಿನ ಸಲ ಬಂಗಾರ ಬಳೆ ಮಾಡಿಸ್ತಿನಿ ಅಂದಾರ " ಅಂತ ಹಸನ್ಮುಖಿಯಾಗಿ ನುಡಿದಾಗ ಲಕ್ಷ್ಮಿ 'ಹೌದಾ ' ಅಂತ ತಲೆ ಅಲ್ಲಾಡಿಸಿ " ನನ್ ಗಂಡಾನು ಮಾಡಸ್ತಿನಿ ಅಂದಾರ " ಅಂತ ಆಕೆ ಗಂಡನಿಗೆ ಬಿಟ್ಟು ಕೊಡದೆ ಹೇಳಿದಳು. ಆಗ ಮತ್ತೆ ಆಕೆ ಪ್ರಭಾಳ ಕಡೆಗೆ ನೋಡಿ

"ಪ್ರಭಾ ನೀನೇನು ಮಾಡಿಕೊಂಡೆ ? ಅಂತ ಅನ್ನುತ್ತಾ ಬಗ್ಗಿ ಒಗೆದ ಬಟ್ಟೆ ಎಡ್ಡು ಕೈಗಳಿಂದ ಒಡ್ಡಮುರ್ದು ಬಟ್ಟೆ ಹಿಂಡುತ್ತಾ

" ನಿಂಗೇನ್ ಆಗ್ತದ ಬಿಡು. ಪಾಪ ! ನಿನ್ ಗಂಡಂಗೆ ನೌಕರಿ ಇಲ್ಲ. ಚಾಕರಿ ಇಲ್ಲ .ನಿನೊಬ್ಬಳು ಸಿಕ್ಕಿದಿ ಚೊಕರಿ. " ಅಂತ ಲೇವಡಿ ಮಾಡಿ ಒಂದ ನಮೂನಿ ನಕ್ಕು ಮತ್ತೆ ಮುಂದುವರೆದು

" ಏಟ್ ಓದಿದ್ರು ಅಟೇ ಅದಾ .ಓದಿ ಓದಿ ಕೆಟ್ಟ ಖೂಚ್ ಭಟ್ " ಅಂತ ಹೇಳ್ತಾರೆ . ಏಟ್ಟು ಓದ್ದಾರೆ ನಿನ್ ಗಂಡ ? ಜರಾ ಓದೊದು ಬಿಟ್ಟು ಯಾವುದಾದ್ರೂ ಲಾರಿನೋ ! ಬಸ್ನೋ ! ಕಲ್ತು ಡ್ರೈವರ್ ಹುದ್ದೆಗೆ ಸೇರಕ್ಕೊ ! ಅಂತ ಹೇಳಬಾರದೆ ? " ಅಂತ ಆಕೆ ಕೊಂಕು ನುಡಿದು ನನ್ನ ಗಂಡನೆ ಗವರ್ನಮೆಂಟ್ ಸರ್ವೆಂಟ ಹನಾ ಈ ಊರಲ್ಲಿ .ನಾನೇ ಅದೃಷ್ಟವಂತೆ ಇವರೆಲ್ಲ ನನಗಿಂದ ಕನಿಷ್ಠರು ಅನ್ನೋ ಮನೋಭಾವದಲ್ಲಿ ತೆಲಾಡಿದಳು. ಇವಳ ಮಾತು ಪ್ರಭಾಳಿಗೆ ನೋವಾದರು ತೋರ್ಪಡಿಸದೆ ಸುಮ್ಮನಾಗಿದಳು.

ಒಂದಿನ ರಂಗಣ್ಣನ ಹೆಂಡ್ತಿ ಪಕ್ಕದೂರಿಗೆ ಪ್ರಭಾ,ಲಕ್ಷ್ಮಿ ರಾಧಾ ಕಾವೇರಿಯವರ ಜೋತೆಗೂಡಿ ಮದುವೆಗೆಂದು ಹೋಗಿದಳು.

ಅಲ್ಲಿ ಪ್ರಭಾಳ ಸಂಬಂಧಿ ತುಕ್ಕಮ್ಮಾ ಅನ್ನೋ ಮಹಿಳೆಯೊಬ್ಬಳು ಪರಿಚಯವಾಗಿದಳು .

ಅಲ್ಲಿ ಮದುವೆ ಮುಗಿಸಿಕೊಂಡು ಎಲ್ಲರೂ ಜೋತೆಗೂಡಿ ಬಸ್ ನಿಲ್ದಾಣದ ಕಡೆಗೆ ನಡೆದು ಬರುವಾಗ ಎದುರಿಗೆ ಒಂದು ಬಸ್ಸು ದೂರದಿಂದ ಬರತೆ–ೂಡಗಿತು.

ಅದನ್ನು ನೋಡಿದ ಆಕೆಯ ಮಕ್ಕಳು ಆ ಬಸ್ಸನು ನೋಡಿ

" ಮಮ್ಮಿ ಬಸ್ ಬಂತ್ತು . ಬಸ್ಸು ..! " ಅಂತ ಚೀರಿ ಹೇಳಿದ್ದೆ ತಡ

" ಹಾ ! ಬಂತ್ತು ಬಂತ್ತು ನಿಮ್ಮಪ್ಪಂದೆ ಬಸ್ ಬಂತ್ತು. ನೋಡು ನೋಡು ಅಲ್ನೋಡು.

ನಿಮ್ಮಪ್ಪನೆ ಬಸ್ ನಡಸ್ತಾ ಇದ್ದಾನೆ " ಅಂತ ಅಲ್ಲಿದ್ದ ಎಲ್ಲರಿಗೂ ಕೇಳಿಸುವಂತೆ ಏರು ಧ್ವನಿಯಲ್ಲಿ ಹೇಳಿದ್ದೆ ತಡ

" ಅವ್ವಾ ! ಇವ್ಳ ಗಂಡ ಬಸ್ಸಿನ ಡ್ರೈವರ್ ಹನಾ ಏನೆ ತಂಗಿ " ವಯಸ್ಸಾದ ತುಕ್ಕಮಾಜ್ಜಿ ಆಚರ್ಯ ಚಕಿತಳಾಗಿ ಕೇಳಿದಳು.

ಆಗ ಆಕೆ " ಹೂಂ ರ್ೀ ! ನನ್ ಗಂಡ ಬಸ್ಸಿನ ಡ್ರೈವರ್ ಹನಾ " ಅಂತ ಹಮ್ಮಿನಿಂದ ಹೇಳಿದಳು.

ಆಗ ಆಕೆ

" ಐ ! ಬಿಡೇ ತಂಗಿ. ನಿನ್ಗೇನ್ ಕಮ್ಮಿ ಅದಾ. ನೀ ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ ಆದಿ.

ನಿಂಗೇನ್ ಕುದಿ ಅದಾ ಈಗ ? ನಮ್ದು ಈ ಪ್ರಭಾಳದು ದುಡಿದು ತಿನ್ನೋ ಕಷ್ಟದ ಜೀವನ ಅದಾ ನೋಡು "ಅಂತ ಅನ್ನುತ್ತಿದಂತೆ ಪಾರುವಿನ ಮುಖದಲ್ಲಿ ಒಂದು ನಮೂನೆಯ ನಗೆಯ ಬೇಳಕು ಚೆಲ್ಲಿತ್ತು.

ಆಗ ಅಲ್ಲಿ ಹೋಗೊರೆಲ್ಲ ಇವಳ ಕುರಿತು ಮಾತಾಡುವುದನ್ನು ಕೇಳಿ

ಒಮ್ಮೆ ಪಾರುವಿನ ಕಡೆಗೆ ತಿರುಗಿ ವಾರೆಗಣ್ಣಿನಿಂದ ನೋಡಿ

ಹೆಜ್ಜೆ ಹಾಕತೊಡಗಿದರು.

ಆದ್ರೆ ಆ ಬಸ್ಸು ಹತ್ತಿರ ಹತ್ತಿರ ಬರುತ್ತಿದಂತೆ ಅದರ ಡ್ರೈವರ್ ಅವಳ ಗಂಡ ಅಲ್ಲ. ಬೇರೆ ಯಾರೋ ಅನ್ನೋದು ತಿಳಿದು ನೀರಾಸೆಯಾಗಿ ಆಕೆ ಮುಖ ಕೆಳಗೆ ಮಾಡಿದಳು. ಆಕೆಯ ಮಗಳು ಒಮ್ಮೆ ಅಮ್ಮನ ಮುಖ ನೋಡಿ

" ಮಮ್ಮಿ ಪಪ್ಪ ಅಲ್ಲ " ಅಂದಿತ್ತು ಮೆಲ್ಲಗೆ

" ನಿಮ್ಮ ಪಪ್ಪಾಂದೆ ಬಸ್ ಅದಾ ! ಇವತ್ತು ಬೇರೆಯವರಿಗೆ ನಡಸಲಾಕ್ ಕ್ವಾಟ್ಟಾರಂತ ಕಾಣಿಸ್ತದ

ನಡಿ ಮುಂದೂಕ್ ನಡಿ " ಅಂತ ಮಗಳ ಕೈ ಹಿಡಿದೆಳೆದು ರಸ್ತೆ ದಾಟಿ ಎಲ್ಲರೊಂದಿಗೆ ಆಚೆಗೆ ಹೋಗಿ ಊರಿಗೆ ಹೋಗುವ ಬಸ್ಸಿಗಾಗಿ ಕಾಯುತ್ತಾ ನಿಂತಳು.

ಪಾರು ಮದುವೆಗೂ ಮುಂಚೆ ತನ್ನ ತವರು ಮನೆಯಲ್ಲಿ ಕೂಲಿ–ನಾಲಿ ಮಾಡಿಕೊಂಡು ಕಷ್ಟ ಪಡ್ತಿರುವಾಗ ಈ ರಂಗಣ್ಣನ ಜೋತೆಗೆ ಮದುವೆ ಮಾಡಿಕೊಟ್ಟಿದ್ರು ಮದುವೆಗೂ ಮುಂಚೆ ರಂಗಣ್ಣ ಲಾರಿ ಡ್ರೈವರ್ ಆಗಿ ಕೆಲಸ ಮಾಡ್ತಿದ್ದ . ಅವನ ಊರಲ್ಲಿ ಯಾರಿಗೂ ಸರ್ಕಾರಿ ನೌಕರಿ ಇಲ್ಲದ ಕಾಲದಲ್ಲಿ ಇದ್ದಕ್ಕಿದ್ದಂತೆ ಬಸ್ ಡ್ರೈವರ್ ಹುದ್ದೆಗೆ ಆಯ್ಕೆ ಆದಾಗಿನಿಂದ ರಂಗಣ್ಣನಕ್ಕಿಂತ ಅವನ ಹೆಂಡ್ತಿನೆ ತೊಲ್ ಜಂಭ ಕೊಚ್ಚಕೊಳ್ತಾ ಇದ್ದಳು.

" ಈ ಊರಲ್ಲಿ ನಾನೆ ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ"ಅನ್ನೋ ಮನೋಭಾವದಲ್ಲಿ ವರ್ತಿಸುತ್ತಿದ್ದಳು.

ಒಂದು ದಿನ ಪಾರುವಿನ

ಎದಿರು ಮನೆಯ ಪ್ರಭಾಳ ಗಂಡನಿಗೆ ನೇರವಾಗಿ ಸರ್ಕಾರಿ ಕಾಲೇಜಿನ ಉಪನ್ಯಾಸಕ ಹುದ್ದೆಗೆ ಆಯ್ಕೆಯಾಗಿದ್ದರಿಂದ ಅವಳು ಕುಟುಂಬ ಸಮೇತ ಬೀದರದಲ್ಲಿ ಉಳಿದು ಜೀವನ ಮಾಡತೊಡಗಿದಳು.

ಬಹಳ ದಿನಗಳ ನಂತರ ಪಾರುವಿಗೆ ಗೊತ್ತಾಗಿತ್ತು.

ನಿಜವಾಗಿ "ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ " ಪ್ರಭಾ ಅನ್ನೋದು.

ತನ್ನ ಗಂಡ ಅರೆಸರ್ಕಾರಿ ದಿನಗೂಲಿ ನೌಕರಿಯಲ್ಲಿದ್ದಾನೆಂದು ಆಕೆಯ ಗಂಡ ಒಂದು ದಿನ ಟಿ.ವಿ.ಯಲ್ಲಿ ಕೆ.ಎಸ್.ಆರ್.ಟಿ.ಸಿ.ನೌಕರರು ನಡೆಸಿದ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಆತನೆ ನೇರವಾಗಿ ಮಾತಾಡುತ್ತಿದ್ದ.

"ನಮಗೂ ಸರ್ಕಾರಿ ನೌಕರ–ರೆಂದು ಪರಿಗಣಿಸಿ. ಸರ್ಕಾರಿ ನೌಕರರಿಗೆ ನೀಡುವ ಸವಲತ್ತುಗಳನ್ನು ನೀಡಿ ಸಹಾಯ ಸಹಕಾರ ಮಾಡಿ.ನಮ್ಮ ಕೆ.ಎಸ.ಆರ್.ಟಿ.ಸಿ .ಸಿಬ್ಬಂದಿಯವರ ಕುಟುಂಬದವು ತುಂಬ ಅತಂತ್ರದಲ್ಲಿವೆ.ನಮಗೂ ಸೇವಾ ಭದ್ರತೆ ಒದಗಿಸಿ. ನಮ್ಮ ಡ್ರೈವರ್–ಕಂಡಕ್ಟರ ಕುಟುಂಬಗಳಿಗೆ ರಕ್ಷಣೆ ನೀಡಿ. ಮತ್ತೆ ನಮಗೆ 'ಅರೆಸರ್ಕಾರಿ ನೌಕರರು' ಅನ್ನೋ ಪದ ತೆಗೆದು ಪೂರ್ಣ ಪ್ರಮಾಣದ ಸರ್ಕಾರಿ ನೌಕರ–ರೆಂದು ಘೋಷಣೆ ಮಾಡಿ. ಎಲ್ಲಿಯವರೆಗೆ ನೀವು ನಮಗೆ ' ಸರ್ಕಾರಿ ನೌಕರರು' ಅಂತ ಘೋಷಣೆ ಮಾಡುವುದಿಲ್ಲವೋ ! ಅಲ್ಲಿಯವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ " ಅಂತ ಹೇಳಿ ರಂಗಣ್ಣ ತನ್ನ ಭಾಷಣ ಮುಗಿಸಿದ.

ಈ ಮಾತುಗಳನ್ನು ನೇರವಾಗಿ ಎಲ್ಲಾ ಟಿ.ವಿ ಚಾನಲ್ ಗಳಲ್ಲಿ ಬಿತ್ತರವಾಗತೊಡಗಿತ್ತು.

ಇದನ್ನು ಕೇಳಿದ ಪಾರುವಿಗೆ ಈಗ ನಿಜವಾಗಿಯೂ ಅರ್ಥವಾಗಿತ್ತು.

ಈಗ ನಮ್ಮೂರಲ್ಲಿ "ಪ್ರಭಾ ಮಾತ್ರ ಗವರ್ನಮೆಂಟ್ ಸರ್ವೆಂಟನ ಹೆಂಡ್ತಿ " ಅಂತ.

**ಮಚ್ಛೇಂದ್ರ ಪಿ ಅಣಕಲ್**

# 6ನೇ ತರಗತಿ ಪ್ರವೇಶಾತಿಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆ ಏ.27ಕ್ಕೆ

ಮಲ್ಲಮ್ಮ ನುಡಿ ವಾರ್ತೆ

ಬೀದರ–ಏಪ್ರಿಲ್.19:ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಲೆ ಹಾಗೂ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 2025–26ನೇ ಸಾಲಿನಲ್ಲಿ 6ನೇ ತರಗತಿ ಪ್ರವೇಶ ಪಡೆಯಲು ಈಗಾಗಲೇ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ದಿನಾಂಕ : 27–04–2025 ರಂದು ಬೆಳಿಗ್ಗೆ 11 :00 ಗಂಟೆಯಿಂದ ಮಧ್ಯಾಹ್ನ 1 :00 ಗಂಟೆಯವರೆಗೆ ಜ್ಞಾನ ಸುಧಾ ವಿದ್ಯಾಲಯ ಮಾಮನಕೇರಿ ಬೀದರ, ಸಿದ್ಧಾರ್ಥ ಸಂಯುಕ್ತ ಪದವಿ ಪೂರ್ವ ಶಿಕ್ಷಣ ಸಂಸ್ಥೆ ಜನವಾಡ ರಸ್ತೆ ಬೀದರ ಹಾಗೂ ವಿದ್ಯಾರಣ್ಯ ಪ್ರೌಢ ಶಾಲೆ ಡಾ.ಬಿ.ಆರ್. ಅಂಬೇಡ್ಕರ್ ವೃತ್ತ ಜನವಾಡ ರಸ್ತೆ ಶಾಲೆಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುತ್ತಿದೆಂದು ಬೀದರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ ಆಣಣಠಿ://ಜಠಟ. ಇಚಿಡಿಟಿಚಿಣಚಿಞಚಿ.ರಠತ.ಟಿ ನಲ್ಲಿ ಅನ್‌ಲೈನ್ ಮೂಲಕ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಜಿಲ್ಲಾ ಕಛೇರಿ ಮತ್ತು ತಾಲ್ಲೂಕು ಕಛೇರಿಗಳನ್ನು ಅಥವಾ ಬೀದರ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳಾದ ಉಮೇಶ ಮೊಬೈಲ್ : 9448844387, ಹುಮನಾಬಾದ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳಾದ ಶಿವಕುಮಾರ ಮೊಬೈಲ್ : 6361879744ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಏ.22 ರಂದು ಲೋಕಾಯುಕ್ತ ಅಹವಾಲು ಸಭೆ

ಬೀದರ–ಏಪ್ರಿಲ್.19: ಉಮೇಶ ಬಿ.ಕೆ. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಕಲಬುರಗಿ ಅವರ ಆದೇಶದ ಮೇರೆಗೆ ಬೀದರ ಜಿಲ್ಲೆಯ ಬಾಬಾಸಾಹೇಬ ಪಾಟೀಲ್ ಪೊಲೀಸ್ ನಿರೀಕ್ಷಕರು–3, ಕರ್ನಾಟಕ ಲೋಕಾಯುಕ್ತ ಬೀದರ ಅವರು ದಿನಾಂಕ : 22–04–2025 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹುಮನಾಬಾದ ಪ್ರವಾಸಿ ಮಂದಿರದಲ್ಲಿ ಬ್ರಷ್ಟಾಚಾರ ಮತ್ತು ಕುಂದು ಕೊರತೆಗಳ ಬಗ್ಗೆ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆಂದು ಬೀದರ ಕರ್ನಾಟಕ ಲೋಕಾಯುಕ್ತ ಪೊಲೀಸ್ ನಿರೀಕ್ಷಕರು–3 ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಸರ್ಕಾರಿ ಕಛೇರಿಗಳಲ್ಲಿ ಕೆಲಸಗಳನ್ನು ವಿಳಂಭ ಮಾಡುತ್ತಿದ್ದರೆ ಕಾಣ ಇಲ್ಲದೆ ಅರ್ಜಿ ತಿರಸ್ಕರಿಸುತ್ತಿದ್ದರೆ ಅಥವಾ ಕಛೇರಿಗೆ ಅಲೆದಾಡಿಸುತ್ತಿದ್ದರೆ ಅಲ್ಲದೆ, ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡಿಕೊಡಲು ಯಾರಾದರೂ ಲಂಚ ಕೇಳಿದರೆ ನಮ್ಮ ಗಮನಕ್ಕೆ ತರಬಹುದಾಗಿದೆ. ಕಾರಣ ಸಾರ್ವಜನಿಕರು ಇದರ ಸದ ುಪಯೋಗಪಡಿಸಿಕೊಳ್ಳಬಹುದ ಾಗಿದೆ. ಹೆಚ್ಚಿನ ಮಾಹಿತಿಗಾಗಿ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ ಎಮ್.ಐ.ಜಿ.ನಂ. 29, ಕೆ.ಎಚ್.ಬಿ.ಕಾಲೋನಿ ಬೀದರ ದೂರವಾಣಿ ಸಂಖ್ಯೆ : 9364062674, 08482–295445ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಳ್ಳಾರಿ: ಜಿಲ್ಲಾ ಆಸ್ಪತ್ರೆಯಲ್ಲಿ ಅಗ್ನಿ ಶಾಮಕ ದಳದಿಂದ ಅಣಕು ಪ್ರದರ್ಶನ

# ಅಗ್ನಿ ಅವಘಡ ತಡೆಗಟ್ಟುವಿಕೆ ಕುರಿತು ಸಾರ್ವಜನಿಕರು ಜಾಗೃತಿ ಹೊಂದಬೇಕು: ಕೆ.ತಿಮ್ಮಾರೆಡ್ಡಿ





ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.19-ನಗರದ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ವತಿಯಿಂದ ಶನಿವಾರ ಅಗ್ನಿ ಅವಘಡ ತಡೆಗಟ್ಟುವಿಕೆಯಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಜಾಗೃತಿ ಮೂಡಿಸುವ ಕುರಿತು ಅಣಕು ಪ್ರದರ್ಶನ ನಡೆಯಿತು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಪ್ರಾದೇಶಿಕ ಅಗ್ನಿಶಾಮಕಅಧಿಕಾರಿ ಕೆ.ತಿಮ್ಮಾರೆಡ್ಡಿ ಅವರುಮಾತನಾಡಿ,ಸಾರ್ವಜನಿಕರು ತಮ್ಮ ಸುತ್ತ-ಮುತ್ತ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದಲ್ಲಿ ಅದರ ತಡೆಗಟ್ಟುವಿಕೆ ಕುರಿತು ಅರಿವು ಹೊಂದಬೇಕು ಎಂದು ಹೇಳಿದರು.

ಆಸ್ಪತ್ರೆಗಳು ಅತ್ಯಂತ ಸೂಕ್ಷ್ಮ ಸ್ಥಳಗಳು.ಆರೋಗ್ಯಸಿಬ್ಬಂದಿಗಳು ಜಾಗರೂಕತೆ ಹೊಂದಿರಬೇಕು. ಬೆಂಕಿ ನಂದಿಸುವ ಸಾಧನಗಳು ಸುವ್ಯವಸ್ಥೆಯಲ್ಲಿ ಇಟ್ಟುಕೊಳ್ಳಬೇಕು. ಅಗ್ನಿಶಾಮಕ ದಳದವರು 24 ಗಂಟೆಯೂಸೇವೆನೀಡುತ್ತಾರೆ.ಅಗ್ನಿ ದುರಂತ,ತುರ್ತು ಸೇವೆಗಳಿಗಾಗಿ ಸದಾಸನ್ನದ್ಧರಾಗಿರುತ್ತಾರೆ ಎಂದು ತಿಳಿಸಿದರು.

ಇದೇ ವೇಳೆ ಬೆಂಕಿ ನಂದಿಸುವ ಕಾರ್ಯಾಚರಣೆ ಕುರಿತು ಮಾಹಿತಿ ನೀಡಿದರು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹನುಮನಗೌಡ ಪೊಲೀಸ್ ಪಾಟೀಲ್ ಅವರು ಮಾತನಾಡಿ, ಪ್ರತಿ ವರ್ಷ ಏಪ್ರಿಲ್ 14 ರಿಂದ 20 ರ ವರೆಗೆ ದೇಶದಾದ್ಯಂತ ಅಗ್ನಿಶಾಮಕ ಸೇವಾ ಸಪ್ತಾಹವನ್ನು ಆಚರಿಸಿ ಸಾರ್ವಜನಿಕರಿಗೆ ಅಗ್ನಿ ಸುರಕ್ಷತೆ ಕುರಿತು ತಿಳುವಳಿಕೆ ನೀಡಿ ಅಣಕುಪ್ರದರ್ಶನ ನಡೆಸಲಾಗುತ್ತದೆ ಎಂದು ಹೇಳಿದರು.

ಬಳಿಕ ಅಗ್ನಿಶಾಮಕ ಅಧಿಕಾರಿಗಳ ತಂಡ ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರ ನೇತೃತ್ವದಲ್ಲಿ ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿಗಳ ತಂಡ ರಚಿಸಿ, ಕುತೂಹಲಕಾರಿಯಾಗಿ ಅಣಕು ಪ್ರದರ್ಶನ ನಡೆಸಲಾಯಿತು.

ಅಣಕು ಪ್ರದರ್ಶನದಲ್ಲಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದಲ್ಲಿ ಬಳಸಬಹುದಾದ ಬೆಂಕಿ ನಂದಿಸುವ ಸಾಧನಗಳು, ಅಗ್ನಿ ಸಂಭವಿಸಿದ ಸ್ಥಳದಿಂದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳಿಸುವುದು,ಪ್ರಥಮ ಚಿಕಿತ್ಸೆ ಹಾಗೂ ಇತರೆ ಕ್ರಮಗಳ ಕುರಿತು ಪರಿಪೂರ್ಣ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಡಾ.ಗುರುನಾಥ ಬಿ.ಚೌವ್ಹಾಣ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪರಿವೀಕ್ಷಕಪರಮೇಶ್ವರ್,ಅಗ್ನಿಶಾಮಕ ಠಾಣಾಧಿಕಾರಿ ದಯಾನಂದಗೌಡ, ಜಿಲ್ಲಾ ಆಸ್ಪತ್ರೆಯ ಸಹಾಯಕ ಆಡಳಿತಾಧಿಕಾರಿ ಗುಮಾಸ್ತೆ ದೇಸಾಯಿ, ಶುಶ್ರೂಷಣಾ ಅಧೀಕ್ಷಕಿ ವಿಮಲಾಕ್ಷಿ ಸೇರಿದಂತೆ ಜಿಲ್ಲಾ ಆಸ್ಪತ್ರೆಯ ತಜ್ಞವೈದ್ಯರು, ವೈದ್ಯಾಧಿಕಾರಿಗಳು,ಶುಶ್ರೂಷಕರು, ಅಧೀನ ಸಿಬ್ಬಂದಿ ಮತ್ತು ಸಾರ್ವಜನಿಕರು ಹಾಜರಿದ್ದರು.

## ಬಿಎಸ್‌ಎನ್‌ಎಲ್: ಮೂರು ದಿನಗಳ ಕಾಲ ಗ್ರಾಹಕರ ಸೇವಾ ಶಿಬಿರ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.19 ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ ಬಳ್ಳಾ-ರಿಯ ಪ್ರಧಾನ ವ್ಯವಸ್ಥಾಪಕರ ಕಚೇರಿ ವತಿಯಿಂದ ಗ್ರಾಹಕರ ವಿವಿಧ ಟೆಲಿಕಾಂ ಗ್ರಾಹಕ ಸೇವಾ ಸಮಸ್ಯೆಗಳನ್ನು ಬಗೆಹರಿಸಲು ಏ.21, ಏ.24 ಮತ್ತು ಏ.29 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಬಳ್ಳಾರಿ ಕಚೇರಿ ಮತ್ತು ಹೊಸಪೇಟೆಯ ಕೆಕೆಆರ್‌ಟಿಸಿ ಬಸ್ ನಿಲ್ದಾಣ ಎದುರುಗಡೆಯ ಕಚೇರಿಯಲ್ಲಿ 'ಗ್ರಾಹಕರ ಸೇವಾ ಶಿಬಿರ'ಗಳನ್ನು ಆಯೋಜಿಸಲಾಗುತ್ತಿದೆ.

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ ವು ಸಾರ್ವಜನಿಕರ ದೂರಸಂಪರ್ಕ ಸೇವಾ ಪೂ-ರೈಕೆದಾರರಿಗಾಗಿ ಏಪ್ರೀಲ್ ಮಾಹೆಯನ್ನು 'ಕನ್ನೆಕ್ಟಿಂಗ್ ವಿಥ್ ಕೇರ್' ಎಂಬ ಥೀಮ್ ನೊಂದಿಗೆ ಗ್ರಾಹಕ ಸೇವಾ ಮಾಸವನ್ನಾಗಿ ಆಚರಿಸುತ್ತಿದೆ.

ಗ್ರಾಹಕರು ತಮ್ಮ ಸೇವೆಗಳಲ್ಲಿ ಶ್ರೇಷ್ಠತೆ ತರಲು ಬಿಎಸ್‌ಎನ್‌ಎಲ್ ಕ್ಯಾಂಪ್ ಕಚೇರಿ ಮತ್ತು ಡಿಜಿಟಲ್ ದೂರು-ಟ್ರ್ಯಾಕಿಂಗ್ ಪೋರ್ಟಲ್ ೢಣಣಠಿ://ಛಿಜಿಠಿ.ಛಟಿಟ.ಛಿಠಿ.ಟಿ ಮೂಲಕ ತಮ್ಮ ಪ್ರತಿಕ್ರಿಯೆ ನೀಡಬಹುದು. ಗ್ರಾಹಕರು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದು ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ ಬಳ್ಳಾ-ರಿಯ ಉಪಪ್ರಧಾನ ವ್ಯವಸ್ಥಾಪಕ ಡಿ.ಶ್ರೀಧರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾಲೂಕ ಆಡಳಿತದಿಂದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್, ಡಾ. ಬಾಬು ಜಗಜೀವನ್ ರಾಮ್ ಜಯಂತಿ ಆಚರಣೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರ ಪಟ್ಟಣದಲ್ಲಿ ಶನಿವಾರ ತಾಲೂಕ ಆಡಳಿತ,ತಾಲೂಕ ಪಂಚಾಯಿತಿ, ಪಟ್ಟಣ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ರವರ 134 ನೇ ಜನ್ಮದಿನಾಚರಣೆ ಹಾಗೂ ಹಸಿರು ಕ್ರಾಂತಿಯ ಹರಿಕಾರ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ 118ನೇ ಜನ್ಮ ದಿನಾಚರಣೆ ಸಮಾರಂಭವನ್ನು ಮಹನೀಯರ ಭಾವಚಿತ್ರಗಳಿಗೆ ಪಟ್ಟಣದ ಡಾ. ಬಿಆರ್ ಅಂಬೇಡ್ಕರ್ ವೃತ್ತದಲ್ಲಿ ಪೂಜೆ ಸಲ್ಲಿಸಿ ಮೆರವಣಿಗೆಯೊಂದಿಗೆ ಚಾಲನೆ ನೀಡಲಾಯಿತು.

ಈ ವೇಳೆ ಬಸವರಾಜ ಸೂಳಿಬಾವಿ ಮಾತನಾಡಿ

ವೇದಿಕೆಯ ಕಾರ್ಯಕ್ರಮವನ್ನು ಉದ್ದೇಶಿಸಿ ಬಸವರಾಜ್ ಸುಳಿಭಾವಿ ಮಾತನಾಡುತ್ತಾ ಡಾ.ಬಾಬಾ ಸಾಹೇಬ ಅಂಬೇಡ್ಕರರು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ದೊರಕಲಿ ಎಂದು ಸಮಾನತೆಯ ಸಂವಿಧಾನವನ್ನು ರಚನೆ ಮಾಡಿದ್ದು ವಿಪರ್ಯಾಸವೆಂದರೆ ದೇಶದ ಸುಮಾರು 75 ಪ್ರತಿಶತ ಜನರಿಗೆ ಸಂವಿಧಾನದ ಅರ್ಥವೇ ಇನ್ನು ತಿಳಿಯದಾಗಿದ್ದು ಇನ್ನೂ ಸಮಾಧಾನತೆಯ ಮಾತು ಮರಿಚಿಕೆಯಾಗಿ ಉಳಿದಿರುವುದು ವಿಪರ್ಯಾಸವೇ ಸರಿ ಎಂದು ಹೇಳಿದರು.

ಕುಕನೂರು ತಹಸೀಲ್ದಾರ ಪ್ರಾಣೇಶ್ ಹೆಚ್ ಮಾತನಾಡಿ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಸೇರಿದಂತೆ ಇನ್ನಿತರ ಮಹಾನಿಯರ ಜೀವನದ ಪ್ರತಿಯೊಂದ ಹೆಜ್ಜೆಯಲ್ಲಿಯೂ ಅವರ ತತ್ವಾದರ್ಷಗಳನ್ನು ಜೀವನದಲ್ಲಿ ರೂಡಿಸಿ ಕೊಂಡಾಗ ಬದುಕು ಸಾರ್ಥಕ ಗೊಳ್ಳುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ರವೀಂದ್ರ ಭಾಗಲಕೋಟೆ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು. ವೇದಿಕೆಗೂ ಮುನ್ನ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್ ರಾಮ್ ರವರ ಬೃಹತ್ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

ವೇದಿಕೆಯಲ್ಲಿ ತಾಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸೋಮಶೇಖರ್ ಬಿರಾದರ, ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ಬೆಟ್ಟದಪ್ಪ ಮಾಳೆಕೊಪ್ಪ,ಹಿಂದುಳಿದವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಡಾ. ಶಿವಶಂಕರ ಕರಡಕಲ್, ಪಟ್ಟಣ ಪಂಚಾಯತ ಉಪಾಧ್ಯಕ್ಷರಾದ ಪ್ರಶಾಂತ್ ಆರ್ ಬೆರಳಿನ್, ಮಹಾಂತೇಶ್ ಬೂದುಗುಂಪ, ಪ್ರಮುಖರಾದ ರಾಮಣ್ಣ ಭಜಂತ್ರಿ, ಗಗನ ನೋಟಗಾರ,ನೂರುದ್ದೀನ್ ಸಾಬ್ ಗುಡಿಹಿಂದಲ,ಮಾಂತೇಶ್ ಬೂದುಗುಂಪ, ಲಕ್ಷ್ಮಣ ಕಾಳಿ, ನಿಂಗಪ್ಪ ಗೋರ್ಲೆಕೊಪ್ಪ, ಪೀರ್ ಸಾಬ್ ದಪೇದಾರ, ಶರಣಪ್ಪ ವೀರಾಪೂರ,ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

## ಒಮನ್ ದೇಶದ,ಮಸ್ಕತ್‌ನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿರುವ ಹುಲಿಗಿಯ ಶೃತಿ ಹ್ಯಾಟಿ.




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಮೊಟ್ಟ ಮೊದಲ ಬಾರಿಗೆ ಒಮಾನ ದೇಶದ ಮಸ್ಕತ್‌ನಲ್ಲಿ ಇದೇ ತಿಂಗಳು ಏಪ್ರಿಲ್ 26 ರಂದು ನಡೆಯುವ ಜನಪದ ಸಂಗೀತ ತಂಡದ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆಯಿಂದ ನಾನು ಪಾಲ್ಗೊಳ್ಳುತ್ತಿರುವುದಾಗಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕಿ ಶೃತಿ ಹ್ಯಾಟಿ ಹುಲಿಗಿ ಹೇಳಿದರು.

ಅವರು ಶನಿವಾರದಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ, ಉದ್ದೇಶಿಸಿ ಮಾತನಾಡಿ ಈ ಕಾರ್ಯಕ್ರಮದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬಹಳಷ್ಟು ಜನ ಕಲಾವಿದರು ಪಾಲ್ಗೊಳ್ಳುತ್ತಿದ್ದು, ಕೊಪ್ಪಳ ಜಿಲ್ಲೆಯಿಂದ ಈ ಕಾರ್ಯಕ್ರಮಕ್ಕೆ ನಾನು ಆಯ್ಕೆಗೊಂಡಿದ್ದೇನೆ, ಈ ಕಾರ್ಯಕ್ರಮ ಜಾನಪದ ಗಾಯಕ ಗೋನಾಸ್ವಾಮಿ ಸಾರಥ್ಯದಲ್ಲಿ ಕರ್ನಾಟಕದಿಂದ 30 ಕಲಾವಿದರ ತಂಡ ಪಾಲ್ಗೊಳ್ಳುತ್ತಿದ್ದು, ಜಗ್ಗಣ್ಣಕ್ಕ ಹಾಗೂ ಆರೋಗ್ಯ ದಂಪತಿ ಕಾರ್ಯಕ್ರಮ, ಹಾಸ್ಯಭರಿತ ದಂಪತಿಗಳ ಕಾರ್ಯಕ್ರಮಗಳು ಜರುಗುವವು ಎಂದು ಅವರು ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಮಹಾರಾಷ್ಟ್ರ,ಒರಿಸ್ಸಾ, ದೆಹಲಿಯ ಗಣರಾಜ್ಯೋತ್ಸವದಲಿ ದೇಶದ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಹಾಡಿರುವುದಾಗಿ ಹಾಗೂ ವಿವಿಧ ಉತ್ಸವಗಳಲ್ಲಿ,ನಾನು ಪಾಲ್ಗೊಂಡು ಕಾರ್ಯಕ್ರಮ ನೀಡಿರುವುದಾಗಿ ತಿಳಿಸಿದ ಅವರು ಮೊಟ್ಟಮೊದಲ ಬಾರಿಗೆ ವಿದೇಶದ ಓಮಾನ ದೇಶದ ಮಸ್ಕತ್ ನಲ್ಲಿ ನನ್ನ ಕಲೆಯನ್ನು ಪ್ರಥಮ ಬಾರಿಗೆ ಪ್ರದರ್ಶಿಸಲು ನನಗೆ ಸಂತಸ ಆಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹನುಮಂತಪ್ಪ ಹ್ಯಾಟಿ ಹುಲಿಗಿ ಉಪಸ್ಥಿತರಿದ್ದರು.

## ಮೀನುಗಾರಿಕೆ ಇಲಾಖೆ: ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.19-ಮೀನುಗಾರಿಕೆ ಇಲಾಖೆ ವತಿಯಿಂದ 2024-25 ನೇ ಸಾಲಿನ ಮತ್ತು ಹಿಂದಿನ ಸಾಲಿನಲ್ಲಿ ಅನುಷ್ಠಾನವಾಗದೇ ಬಾಕಿ ಉಳಿದ ಗುರಿಗಳಿಗೆ ಫಲಾನುಭವಿ ಆಧಾರಿತ ಪ್ರಧಾನ ಮಂತ್ರಿ ಮತ್ಸ ಸಂಪದ ಯೋಜನೆಯ ವಿವಿಧ ಘಟಕಗಳಿಗೆ ಸಹಾಯಧನ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಹೊಸ ಸಿಹಿನೀರಿನ ಫಿನ್‌ಫಿಶ್ ಮೊಟ್ಟೆ ಕೇಂದ್ರಗಳ ಸ್ಥಾಪನೆ,ಲವಣಯುಕ್ತ/ಕ್ಷಾರೀಯ ಪ್ರದೇಶಗಳಿಗೆ ಹೊಸ ಕೊಳದ ನಿರ್ಮಾಣ, ಹೊಸ ಬೆಳೆಯುವ ಕೊಳ,ಲವಣಯುಕ್ತ, ಸೌಮ್ಯ,ಕ್ಷಾರೀಯಕ್ಕಾಗಿ ಬಯೋಫ್ಲಾಕ್ ಕೊಳಗಳ ನಿರ್ಮಾಣ ಮತ್ತು ದಿನಕ್ಕೆ 2 ಟನ್ ಉತ್ಪಾದನಾ ಸಾಮರ್ಥ್ಯದ ಮಿನಿ ಫೀಡ್ ಗಿರಣಿಗಳು.ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.60ರಷ್ಟು ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.40 ರಂತೆ ಸಹಾಯಧನ ನೀಡಲಾಗುವುದು. ಅರ್ಜಿ ಸಲ್ಲಿಸಲು ಮೇ 03 ಕೊನೆಯ ದಿನವಾಗಿದ್ದು, ಅರ್ಜಿಗಳನ್ನು ಸಂಬಂಧಿಸಿದ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೂ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪ ನಿರ್ದೇಶಕರ ಕಚೇರಿ-ಮೊ.9449593156, ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ ಬಳ್ಳಾರಿ-ಮೊ.7406508971 ಮತ್ತು ಸಂಡೂರು ಮೊ.7204911897 ಗೆ ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಭಗೀರಥ ಜಯಂತ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಣೆಗೆ ನಿರ್ಧಾರ



ಯಾದಗಿರಿ ಏ.19-ಜಿಲ್ಲಾಡಳಿತ, ಜಿಲ್ಲಾಪಂಚಾಯತ್,ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ನಗರಸಭೆ ಇವರ ಸಹಯೋಗದಲ್ಲಿ

ಜಿಲ್ಲೆಯಲ್ಲಿ ಬರುವ ಮೇ 4 ರಂದು ಶ್ರೀ ಭಗೀರಥ ಮಹರ್ಷಿ ಜಯಂತ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಚುನಾವಣಾ ತಹಸೀಲ್ದಾರ್ ಸಂತೋಷ ರಾಣಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಶ್ರೀ ಭಗೀರಥ ಮಹರ್ಷಿ ಜಯಂತ್ಯೋತ್ಸವ ಆಚರಣೆ ಕುರಿತು ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಬರುವ ಮೇ 4 ರ ಮಧ್ಯಾಹ್ನ 12 -30 ಗಂಟೆಗೆ ಈ ಜಯಂತ್ಯೋತ್ಸವವನ್ನು ನಗರದ ಪದವಿ ಕಾಲೇಜು ಸಭಾಂಗಣದಲ್ಲಿ ಆಚರಿಸಲು ನಿರ್ಧರಿಸಲಾಗಿದ್ದು, ಅವಶ್ಯಕ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅಂದು ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು,ವೇದಿಕೆ, ಆಹ್ವಾನ ಪತ್ರಿಕೆ, ವೇದಿಕೆ ಸಿದ್ದತೆ ಮಾಡಿಕೊಳ್ಳುವಂತೆ ಹಾಗೂ ನುರಿತ ಉಪನ್ಯಾಸಕರನ್ನು ಆಹ್ವಾನಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಮೆರವಣಿಗೆ ಮಾರ್ಗದ ಕುರಿತು ಮುಂಚಿತವಾಗಿ ತಿಳಿಸಬೇಕು.ಜಿಲ್ಲಾ ,ಗ್ರಾಮ ಪಂಚಾಯತ್, ತಾಲೂಕ ಮಟ್ಟ ವಿವಿಧ ಕಚೇರಿ ಗಳಲ್ಲಿ ಹಾಗೂ ಶಾಲಾ, ಕಾಲೇಜುಗಳಲ್ಲಿ, ಜಯಂತಿ ಆಚರಣೆಗೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ ಎರಡು ವರ್ಷಗಳಲ್ಲಿ ಲೋಕಸಭಾ, ವಿಧಾನ ಸಭಾ ಚುನಾವಣೆ ಗಳ ಹಿನ್ನೆಲೆಯಲ್ಲಿ ಮಹನೀಯರ ಜಯಂತಿ ಸರಳವಾಗಿ ಆಚರಿಸಲಾಗಿದೆ.ಈ ಬಾರಿ ಕಾರ್ಯಕ್ರಮವು ಶಿಸ್ತುಬದ್ಧವಾಗಿ ನಡೆಯಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.ವಿವಿಧ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಕಾರ್ಯಕ್ರಮದಲ್ಲಿ ಹಾಜರಿರಬೇಕು. ಜಯಂತಿಯಂದು ಸೂಕ್ತ ಪೋಲಿಸ್ ಬಂದೋಬಸ್ತ್, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಇನ್ನಿತರ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಲು ಅವರು ಸೂಚಿಸಿದರು.

ಶ್ರೀ ರಾಮದಾಸ್ ಅನಪುರ್, ರಾಮಲಿಂಗಪ್ಪ,ಡಾ.ಆಂಜನೇಯ, ಶ್ರೀಶೈಲ ಬಂದಳ್ಳಿ,ವೆಂಕಟೇಶ್ ದೇಸಾಯಿ,ಭೀಮಶೇಖರ್

ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಸಮಾಜದ ಮುಖಂಡರು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಏ.22 ರಂದು ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.19-ಬಳ್ಳಾರಿಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110ಕೆ.ವಿ ಅಲ್ಲಿಪುರ-ಬಳ್ಳಾರಿಉತ್ತರಮಾರ್ಗದ ಲಿಲೋ ನಿರ್ಮಾಣ ಕಾರ್ಯ ತುರ್ತಾಗಿ ಕೈಗೊಳ್ಳುತ್ತಿರುವುದರಿಂದ 110/11ಕೆ.ವಿ ಸೋಮಸಮುದ್ರ ವಿದ್ಯುತ್ ಉಪ-ಕೇಂದ್ರ ಮತ್ತು 33/11ಕೆ.ವಿ ಗುಡದೂರು ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಲ್ಲಾ 11ಕೆ.ವಿ ಮಾರ್ಗಗಳಲ್ಲಿ ಏ.22 ರಂದು ಬೆಳಿಗ್ಗೆ 07 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:*

110/11ಕೆ.ವಿ ಶ್ರೀಧರಗಡ್ಡೆ ಉಪ-ಕೇಂದ್ರದ 110/11ಕೆ.ವಿ ಶ್ರೀಧರಗಡ್ಡೆ ಉಪ-ಕೇಂದ್ರದಿಂದ ಹೊರಡುವ ಎಲ್ಲಾ 11ಕೆ.ವಿ ಫೀಡರ್‌ಗಳು ಮತ್ತು 33/11ಕೆ.ವಿ ಗುಡದೂರು ಉಪ-ಕೇಂದ್ರದ 33/11ಕೆ.ವಿ ಗುಡದೂರು ಉಪ-ಕೇಂದ್ರದಿಂದ ಹೊರಡುವ ಎಲ್ಲಾ 11ಕೆ.ವಿ. ಫೀಡರ್‌ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.21 ರಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.19-ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-1ರ ವ್ಯಾಪ್ತಿಯ 220/11ಕೆವಿ ಅಲ್ಲಿಪುರ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್-2ನ ಫೀಡರ್ ಆದ ಎಫ್-36 ರ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಏ.21 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಬಂಡಿಹಟ್ಟಿ, ಆಶ್ರಯ ಕಾಲೋನಿ, ಈದ್ಗ ರೋಡ್, ಟೀರ್ಸ್ ಕಾಲೋನಿ, ಜಾಗೃತಿ ನಗರ ಸರ್ಕಲ್, ಆಜಾದ್ ನಗರ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು,ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಮನೆ/ಫ್ಲ್ಯಾಟ್/ನಿವೇಶಗಳನ್ನು

## ಕೈಗೆಟಕುವ ದರದಲ್ಲಿ ವಿಲೇವಾರಿ ಮಾಡಲು ಎಕ್ಸಪೋ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.19.-ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ವಿವಿಧ ಬಡಾವಣೆಗಳಲ್ಲಿ ಖಾಲಿಯಿರುವ ಮನೆ/ಫ್ಲ್ಯಾಟ್/ನಿವೇಶಗಳನ್ನು ವಿಲೇವಾರಿ ಮಾಡಲು ಇದೇ ಏಪ್ರಿಲ್ 22 ರಂದು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕವಡಿಮಟ್ಟಿ ಬಡಾವಣೆಯಲ್ಲಿ ಹಾಗೂ ಏಪ್ರಿಲ್ 23ರಂದು ಕಲಬುರಗಿ ಜಿಲ್ಲೆಯ ಗ್ರೀನ್‌ಪಾರ್ಕ್ ಬಡಾವಣೆಯಲ್ಲಿ ಎಕ್ಸಪೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಅವಶ್ಯಕ ದಾಖಲೆಗಳೊಂದಿಗೆ ಬಂದು ಸ್ವತ್ತುಗಳನ್ನು ಖರೀದಿ ಮಾಡಬಹುದಾಗಿದೆ ಎಂದು ಕಲಬುರಗಿ ಕರ್ನಾಟಕ ಗೃಹ ಮಂಡಳಿಯ ಸಮನ್ವಯ ಕಚೇರಿಯ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಎಮ್. ಹೊಸಳ್ಳಿ-ಯಾದಗಿರಿ ಹಾಗೂ ಸುರಪುರ ತಾಲೂಕಿನ ಕವಡಿಮಟ್ಟಿ ಮತ್ತು ಕಲಬುರಗಿ ಜಿಲ್ಲೆಯ ಗ್ರೀನ್ ಅಪಾರ್ಟಮೆಂಟ್,ಶಹಾಬಾದ, ಚಿಂಚೋಳಿ ಮತ್ತು ಆಳಂದ ತಾಲೂಕಿನ ಬಡಾವಣೆಗಳಲ್ಲಿ ಲಭ್ಯವಿರುವ ಮನೆ/ಫ್ಲ್ಯಾಟ್/ನಿವೇಶಗಳನ್ನು ಕೈಗೆಟಕುವ ದರದಲ್ಲಿ ಹೇಗಿವೆಯೋ ಹಾಗೆ (AsiswhereisBasis) ಎಕ್ಸಪೋ ಮೂಲಕ ಹಂಚಿಕೆ ಮಾಡಲಾಗುತ್ತದೆ.

ಆಸಕ್ತರು ಮೇಲ್ಕಂಡ ದಿನದಂದು ಅಗತ್ಯ ದಾಖಲೆಗಳಾದ ಆಧಾರ್ ಕಾರ್ಡ್,ಪ್ಯಾನ್ ಕಾರ್ಡ್,ಬ್ಯಾಂಕ್ ಪಾಸ್‌ಬುಕ್ ದಾಖಲೆಗಳೊಂದಿಗೆ ಬಂದು ಸ್ವತ್ತುಗಳನ್ನು ಖರೀದಿ ಮಾಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಬುದ್ಧಿಮಾಂದ್ಯ ಮಕ್ಕಳಿಗೆ ಫೀಜಿಯೋತೆರಫಿಗೆ ಒಳಪಡಿಸಲು ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.19.-ಕಲಬುರಗಿ ಮಹಾನಗರಪಾಲಿಕೆಯಿಂದ ಎಸ್.ಎಫ್.ಸಿ. ಕ್ರೀಯಾ ಯೋಜನೆಗಳ ಯೋಜನೆಯಡಿ ವಿಕಲಚೇತನರಿಗೆ ಕೆಳಕಂಡ ಕಲ್ಯಾಣ ಕಾರ್ಯಕ್ರಮಗಳಡಿ ಶೇ. 5ರ ಶಾಖೆಯ ಯೋಜನೆಯಾದ 2019-20ನೇ ಸಾಲಿನ ಬುದ್ಧಿ ಮಾಂದ್ಯ ಮಕ್ಕಳಿಗೆ ಫೀಜಿಯೋ ತೆರಫಿಗೆ ಒಳಪಡಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಮಹಾನಗರ ಪಾಲಿಕೆಯ ಉಪ ಆಯುಕ್ತರು (ಆಡಳಿತ) ಅವರು ತಿಳಿಸಿದ್ದಾರೆ.

# ಜಾತಿ ಗಣತಿಯಲ್ಲಿ ಗಾಣಿಗ ಸಮಾಜಕ್ಕೆ ಅನ್ಯಾಯ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.19–ಜಾತಿ ಗಣತಿಯಲ್ಲಿ ಗಾಣಿಗ ಸಮಾಜಕ್ಕೆ ಅನ್ಯಾಯವಾಗಿದೆ ಎಂದು ಅಖಿಲ ಕರ್ನಾಟಕ ಗಾಣಿಗ ಸಮೂಹ ಸಂಘದ ರಾಜ್ಯಾಧ್ಯಕ್ಷ ಮಹಾಂತೇಶ ಚೊಳಚಗುಡ್ಡ ಹೇಳಿದರು.

ಶನಿವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಪ್ರಕಾಶ ಹೆಗಡೆ ಅವರು ನೀಡಿರುವ ವರದಿ ಸರ್ಕಾರದ ದಿಕ್ಕು ತಪ್ಪಿಸುತ್ತದೆ ಎಂದರು. ರಾಜ್ಯದ ಯಾವುದೇ ಒಂದು ಗ್ರಾಮಗಳಿಗೆ ಮತ್ತು ಕುಟುಂಬಗಳಿಗೆ ಭೇಟಿ ನೀಡದೇ ಸುಳ್ಳು ವರದಿಯನ್ನು ನೀಡಿದ್ದಾರೆ. ನಮ್ಮ ಸಮಾಜವು ಸುಮಾರು 40 ಲಕ್ಷಕ್ಕಿಂತ ಹೆಚ್ಚು ಇದ್ದರೂ ಈಗಿನ ಜಾತಿ ವರದಿಯಲ್ಲಿ ಕೇವಲ 6 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇದೆ ಎಂದು ತೋರಿಸಲಾಗಿದೆ. ಯಾವ ಆಧಾರದ ಮೇಲೆ ವರದಿಯನ್ನು ನೀಡಿದ್ದಾರೆಂದು ತಿಳಿಯದಾಗಿದೆ. ಸರ್ಕಾರ ನಮ್ಮ ಸಮಾಜವನ್ನು ಕಡೆಗಣಿಸಿದರೆ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಚೊಳಚಗುಡ್ಡ ಹೇಳಿದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕಾದರೆ ಗಾಣಿಗ ಸಮಾಜ ಪ್ರಮುಖ ಪಾತ್ರ ವಹಿಸಿದೆ. ಮರು ಜಾತಿ ಗಣತಿ ಮಾಡಿ ಸೂಕ್ತ ವರದಿಯನ್ನು ನೀಡಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಗಾಣಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಆರ್.ಜಿ.ಪಾಟೀಲ, ಅಖಿಲ ಭಾರತ ಗಾಣಿಗ ಸಂಘದ ಅಧ್ಯಕ್ಷ ಗುರಣ್ಣ ಗೋಡಿ, ಗಾಣಿಗ ಸಮಾಜದ ಯುವ ಮುಖಂಡ ಬಸವರಾಜ ಮಡ್ಡಿ, ಹಿರಿಯ ಮುಖಂಡ ಶಿವಪುತ್ರಪ್ಪ ಕಣಗಿ ಇದ್ದರು.

# ಬಾಗಲಕೋಟೆ ನವನಗರಕ್ಕೆ ವಾರಕ್ಕೆ ಎರಡು ಬಾರಿ ನೀರು

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.19–ಬಾಗಲಕೋಟೆ ನವನಗರಕ್ಕೆ ಬನ್ನಿದಿನ್ನಿ ಬ್ಯಾರೇಜನಿಂದ ಇಲ್ಲಿಯವರೆಗೆ ಶುದ್ದೀಕರಣ ಮಾಡಿ ವಾರಕ್ಕೆ ಮೂರು ಸಲ ನೀರು ಸರಬರಾಜು ಮಾಡಲಾಗುತ್ತಿತ್ತು.

ಪ್ರಸಕ್ತ ಸಾಲಿನಲ್ಲಿ ಮಳೆಯಾಗದ ಕಾರಣ ಘಟಪ್ರಭಾ ನದಿಯ ನೀರಿನ ಹರಿವು ಕಡಿಮೆಯಾಗಿದ್ದು, ಸದ್ಯ ಬನ್ನಿದಿನ್ನಿ ಬ್ಯಾರೇಜನಲ್ಲಿ ನೀರಿನ ಸಂಗ್ರಹಣೆ ತುಂಬಾ ಕಡಿಮೆಯಾಗಿದ್ದರಿಂದ ಎಪ್ರೀಲ್ 21 ರಿಂದ ವಾರಕ್ಕೆ ಎರಡು ಸಲ ನೀರು ಬಿಡಲಾಗುತ್ತಿದೆ.

ಆದ್ದರಿಂದ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಿಕೊಂಡು ಪ್ರಾಧಿಕಾರದೊಂದಿಗೆ ಸಹಕರಿಸುವಂತೆ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾದಾಮಿ–ಕೆರೂರ ಪಟ್ಟಣಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.19–ಆಲಮಟ್ಟಿ ಜಲಾಶಯದ ಜಾಕ್ ವೆಲ್‌ನಲ್ಲಿ 700 ಅಶ್ವಶಕ್ತಿ ಪಂಪ್ ದುರಸ್ತಿ ಇರುವ ಹಿನ್ನೆಲೆಯಲ್ಲಿ ಬಾದಾಮಿ ಹಾಗೂ ಕೆರೂರು ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜಿನಲ್ಲಿ ಏ.21 ವರೆಗೆ ವ್ಯತ್ಯಯ ಉಂಟಾಗಲಿದೆ.

ದುರಸ್ತಿ ಕಾರ್ಯ ಈಗ ಪ್ರಗತಿಯಲ್ಲಿದ್ದು, ಸಾರ್ವಜನಿಕರು ಜಲಮಂಡಳಿ, ಬಾದಾಮಿ ಪುರಸಭೆ ಹಾಗೂ ಕೆರೂರು ಪಟ್ಟಣ ಪಂಚಾಯತಗೆ ಸಹಕಾರ ನೀಡುವಂತೆ ಉಪ-ವಿಭಾಗ ಬಾಗಲಕೋಟೆಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಬಾಗಲಕೋಟೆ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ 8 ವರ್ಷಗಳ ಕಾಲ ಕಾರ್ಯನಿರ್ವಹಿಸಿ ಈಗ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ಹೊಂದಿರುವ ಭರತಕುಮಾರ ಕೆ. ಅವರನ್ನು ಇಲಾಖೆ ವತಿಯಿಂದ ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ವಾರ್ತಾಧಿಕಾರಿ ಕಸ್ತೂರಿ ಪಾಟೀಲ ಹಾಗೂ ಸಿಬ್ಬಂದಿ ವರ್ಗದವರು ಇದ್ದರು.


# ಡಾ.ರಾಜಕುಮಾರ ಜನ್ಮದಿನ ಗೀತ ಗಾಯನ ಸ್ಪರ್ಧೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.19–ಜಿಲ್ಲಾಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಎಪ್ರೀಲ್ 24 ರಂದು ಡಾ.ರಾಜಕುಮಾರ ಜನ್ಮ ದಿನಾಚರಣೆ ಅಂಗವಾಗಿ ಡಾ.ರಾಜ್‌ಕುಮಾರ ಅವರ ಚಲನಚಿತ್ರಗೀತೆಗಳ ಗಾಯನ ಸ್ಪರ್ಧೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 5 ಗಂಟೆಗೆ ನವನಗರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಯಲು ರಂಗಮಂದಿರದಲ್ಲಿ ಸ್ಪರ್ಧೆ ನಡೆಯಲಿದ್ದು, ಸ್ಪರ್ಧೆಗೆ ವಯಸ್ಸಿನ ಮಿತಿ ಇರುದಿಲ್ಲ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಎಪ್ರೀಲ್ 22 ರಂದು ಸಂಜೆ 5 ಗಂಟೆಯೊಳಗಾಗಿ ಮೊಬೈಲ್ ನಂ.9480841239,8722204023ಗೆ ಕರೆಮಾಡಿ ಹೆಸರನ್ನು ನೋಂದಾಯಿಸಿ ಕೊಳ್ಳಬಹುದಾಗಿದೆ ಎಂದು ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಣೆ ತಿಳಿಸಿದೆ.

# ಡಾ.ಬಸವರಾಜ ಕುಂಬಾರ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘದ ಜಿಲ್ಲಾಧ್ಯಕ್ಷ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.19–ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘದ ಜಿಲ್ಲಾಧ್ಯಕ್ಷರಾಗಿ ಸಾಹಿತಿ ಡಾ.ಬಸವರಾಜ ಕುಂಬಾರ ಅವರನ್ನು ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ರಮೇಶ ಕಮತಗಿ ನೇಮಕ ಮಾಡಿದ್ದಾರೆ.

ಜಿಲ್ಲೆಯ ಸಾಹಿತಿಗಳು, ಕಲಾವಿದರಿಗೆ ವೇದಿಕೆ ಕಲ್ಪಿಸುವ ಕಾರ್ಯಕ್ರಮಗಳನ್ನು ಮಾಡಿ ಪ್ರೋತ್ಸಾಹಿಸಬೇಕು ಹಾಗೂ ಜಿಲ್ಲೆಯ ಎಲ್ಲಾ ತಾಲೂಕು ಹಾಗೂ ವಲಯ ಘಟಕ ಸ್ಥಾಪಿಸಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ನೇಮಿಕ ಮಾಡಿ, ಕನ್ನಡ ಕಟ್ಟುವ ಹಾಗೂ ಕಲಾವಿದರಿಗೆ ಪ್ರೋತ್ಸಾಹ ನೀಡುವ ಕೆಲಸಕ್ಕೆ ಜೊತೆಯಾಗಿರಬೇಕು ಎಂದು ನೇಮಕಾತಿ ಪತ್ರದಲ್ಲಿ ತಿಳಿಸಿದ್ದಾರೆ.

ನೇಮಕಾತಿ ಪತ್ರ ನೀಡುವ ಸಂದರ್ಭದಲ್ಲಿ ಡಾ.ಬಸವರಾಜ ಕುಂಬಾರ ಅವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷ ರಮೇಶ ಕಮತಗಿ, ಮುತ್ತು ಬಳ್ಳಾ, ಶ್ರೀಹರಿ ದೂಪದ, ವೀಣಾ ಕಲ್ಮಠ ಇದ್ದರು.

# ಸಿಇಟಿ ಪರೀಕ್ಷೆ ತಪಾಷಣೆ ಜನಿವಾರ ಕಳಚಿ ಅವಮಾನ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ರಾಜ್ಯದ ಸಿಇಟಿ ಪರೀಕ್ಷಾ ಕೇಂದ್ರಗಳಾದ ಬೀದರ ಮತ್ತು ತಿರ್ಥಳ್ಳಿಯಲ್ಲಿ ತಪಾಷಣೆಯಲ್ಲಿ ಬ್ರಾಹ್ಮಣ ಸಮಾಜದ ಯುವಕನ ಪವಿತ್ರ ಜನಿವಾರವನ್ನೆ ಕಳಚಿಟ್ಟುಕೊಂಡು ಪರೀಶೀಲನೆ ಮಾಡಿದ್ದು ಅವಮಾನವೀಯ ಘಟನೆಯಾಗಿದ್ದು. ತಪಾಷಣೆ ಮಾಡಿದ ಸಿಇಟಿ ಕೇಂದ್ರದ ಅಧಿಕಾರಿಯನ್ನು ಕೂಡಲೆ ಅಮಾನತ್ತುಗೊಳಿಸಿ ನ್ಯಾಯ ದೊರಕಿಸಿ ಕೊಡಬೆಕು ಎಂದು ತಾಲುಕಾ ಬ್ರಾಹ್ಮಣ ಸಮಾಜದ ಮುಖಂಡರು ಒತ್ತಾಯ ಮಾಡಿದರು,ಕಡು ಬಡತನದಲ್ಲೂ ಪುರೋಹಿತರಾಗಿ ಅರ್ಚಕರಾಗಿ ಸೇವೆ ಸಲ್ಲಿಸಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಶ್ರಮವಹಿಸುತ್ತಿರುವ ಬ್ರಾಹ್ಮಣ ಪಾಲಕರು ನೊಂದುಕೊಳ್ಳುವ ಹೀನಾಯ ಸ್ಥಿತಿಯನ್ನು ಉಂಟು ಮಾಡಿದ್ದಾರೆ, ತಕ್ಷಣದಲ್ಲೆ ತಪ್ಪಿಸ್ಥಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತಹಿಸಲ್ದಾರ ಉಮಾಕಾಂತ ಹಳ್ಳೆಯವರಿಗೆ ಮನವಿ ಪತ್ರ ಸಲ್ಲಿಸಿ ಆಗ್ರಹ ಮಾಡಿದ್ದಾರೆ,ಈ ಪ್ರತಿಭಟನೆಯಲ್ಲಿ ಕಿರಣಭಟ್ ಜ್ಯೋಶಿ ಹನಮಂತ್ರಾವ್ ಕುಲಕರ್ಣಿ. ಮುರುಳಧರ ಸುಂಬಡ. ಶ್ರೀಕಾಂತ ಸರ್ಕಿಲ್, ಶ್ರೀಪಾದರಾವ್ ಕುಲಕರ್ಣಿ, ಅಪ್ಪಣ ಕುಲಕರ್ಣಿ, ಗುರುರಾಜ ದೇಶಪಾಂಡೆ ಪ್ರೆಮೋದ ಗುರುಜೀ, ಪವನ ಕುಲಕರ್ಣಿ ವೇಣುಗೊಪಾಲ ಸುಂಬಡ, ಅರವಿಂದ ಕುಲಕರ್ಣಿ, ಸುಧಾಕರ ಕುಲಕರ್ಣಿ, ಭೀಮಸೇನರಾವ್ ಪದಕಿ ಆನಂದ ಸುಂಬಡ, ಪ್ರಜ್ವಲ್ ರಾಘವೆಂದ್ರ ಸೇರಿದಂತೆ ಅನೇಕ ಸಮಾಜದ ಮುಖಂಡರು ಹಿರಿಯರು ಯುವಕರು ಪಾಲ್ಗೊಂಡಿದ್ದರು,

# ಮಾರ್ಕೆಟ ರಸ್ತೆಯಲ್ಲೆ ದುಪ್ಪಟ್ಟು ವ್ಯಾಪಾರ. ಜನ ಸಾಮಾನ್ಯರಿಗೆ ಪರದಾಟ

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ತರಕಾರಿ ಮಾರುಕಟ್ಟೆಯಲ್ಲಿ ವಾಹನಗಳಿಂದ ದೂಳು ಮುಚ್ಚಿದ ತರಕಾರಿ.ಒಬ್ಬೊಬ್ಬರು ಎರಡು ಬಂಡಿಗಳಿನ್ನಿಟ್ಟು ರಸ್ತೆಗೆ ವ್ಯಾಪಾರ ಅಲ್ಲದೆ ಜನರ ಓಡಾಟಕ್ಕೂ ತಿವ್ರ ತೊಂದರೆಯಾಗಿ ಇಂದು ತರಕಾರಿ ಮಾರುಕಟ್ಟೆ ದಾಟಬೆಕಾದರೆ ಹರಸಾಹಸ ಪಡಬೆಕಾಗಿದೆ, ಇದು ಶಹಾಪುರ ತರಕಾರಿ ಮಾರುಕಟ್ಟೆ ದುಸ್ತಿತಿಯಾಗಿದೆ, ದುರ್ವಾಸನೆ ಚರಂಡಿ ಗಳಲ್ಲಿ ಹಂದಿಗಳು ಒಂದಡೆಯಾದರೆ ಗೂಳಿಗಳು ಬೀಡಾಡಿ ದನಗಳು ಎಗ್ಗಿಲ್ಲದೆ ತರಕಾರಿ ಖರಿದೀಸುವವರ ಮೇಲೆ ನುಗ್ಗುತ್ತವೆ, ತರಕಾರಿ ಮಾರುಕಟ್ಟೆಯ ಒಳ ಮುಖ್ಯರಸ್ತೆಯಲ್ಲೆ ತರಕಾರಿ ಹಣ್ಣು ಹಂಪಲುಗಳ ತಳ್ಳು ಬಂಡಿಗಳು, ಹಾಗು ಕಾಯಿಪಲ್ಯ ವ್ಯವಹಾರ ಮಾಡುವವರ ಹಾವಳಿಯಿಂದ ಇಂದು ತರಕಾರಿ ಮರುಕಟ್ಟೆಯ ಜಾಗಗಳಿಲ್ಲದೆ ಜನರು ತೊಂದರೆಯಲ್ಲಿದ್ದಾರೆ, ಹಲವಾರು ಬಾರಿ ನಗರಸಭೆ ಪೌರಾಯುಕ್ತರು ಪತ್ರಿಕೆ ಮುಖಾಂತರ ಗಮನಕ್ಕೆ ತಂದರೂ ಯಾವುದೆ



ಕ್ರಮಕ್ಕೆ ಕೈಗೊಳ್ಳುತ್ತಿಲ್ಲ, ಕರ್ತವ್ಯ ನಿರ್ಲಕ್ಷದೊರಣೆಯಲ್ಲಿ ಪರಿಸರ ಇಂಜಿನಿಯರ್ ತೊಡಗಿದ್ದು, ಇಂದಿನವರೆಗೂ ಯಾವುದೆ ಅಂಗಡಿ ಮುಗ್ಗಟ್ಟುಗಳಿಗೆ ಬೇಟ್ಟಿ ನೀಡಿದೆ ಕೇವಲ ಕಚೇರಿಯಲ್ಲಿ ಕಾಲಹರಣ ಮಾಡುತ್ತಿದ್ದಾರೆ, ನಕಲಿ ತನಿಸಿ ಸಾಮಾನುಗಳು ಹೆಚ್ಚಾಗುತ್ತಿದೆ ಜನರಿಗೆ ಅಲರ್ಜಿ ವಾಂತಿ ಬರುತ್ತಿದ್ದು, ಅಲ್ಲದೆದ ತರಕಾರಿಯನ್ನು ಸ್ವಚ್ಚತೆ ಕಾಪಾಡುವಲ್ಲಿ ವ್ಯಾಪಾರಸ್ತರು ರಸ್ತೆಯಲ್ಲೆ ಇಟ್ಟು ವ್ಯವಹಾರ ಮಾಡುತ್ತಿದ್ದಾರೆ, ಪರಿಸರ ದುಸ್ಪರಿಣಾಮಗಳು ಬೀರಿದರೂ ನಗರಸಭೆ ಆಡಳಿತ ಎಚ್ಚತ್ತುಕೊಳ್ಳುತ್ತಿಲ್ಲ. ಎಂದು ಜವಳಿಯವರು, ಜಿಲ್ಲಾಧಿಕಾರಿಗಳು ಸಹ ಯಾವುದೆ ಪ್ರತಿಕ್ರೀಯ ನೀಡುತ್ತಿಲ್ಲ, ನಗರ ಪ್ರದೇಶಗಳಲ್ಲಿ ತರಕಾರಿ ಕಿರಾಣಿ ಅಂಗಡಿಗಳು ರಸ್ತೆಯನ್ನು ಆಕ್ರಮಸಿಕೊಂಡಿದ್ದರೂ ಮೌನವಹಿಸಿದಾರೆ,

ಕೂಡಲೆ ಸೂಕ್ತ ಕ್ರಮಕ್ಕೆ ಮುಂದಾಗಬೆಕು ಎಂದು ಕ,ರಾ,ದ,ಸಂ,ಸ, ಯಾದಗಿರಿ ಜಿಲ್ಲಾ ಸಂಚಾಲಕರಾದ ಶಿವುಪುತ್ರ ಜವಳಿ ಆಗ್ರಹ ಮಾಡಿದ್ದಾರೆ

# ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಣೆಗೆ ನಿರ್ಧಾರ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಏ.19–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ,ನಗರಸಭೆ ಇವರ ಸಹಯೋಗದಲ್ಲಿ

ಜಿಲ್ಲೆಯಲ್ಲಿ ಬರುವ ಮೇ 10 ರಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಸಹಾಯಕ ಆಯುಕ್ತ ಶ್ರೀ ಹಂಪಣ್ಣ ಸಜ್ಜನ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವ ಆಚರಣೆ ಕುರಿತು ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಬರುವ ಮೇ 10 ರಂದು ಈ ಜಯಂತ್ಯೋತ್ಸವವನ್ನು ನಗರದ ಲಕ್ಷ್ಮಿ ನಗರದ ಲಕ್ಷ್ಮಿ ದೇವಸ್ಥಾನದ ಆವರಣದಲ್ಲಿ ಆಚರಿಸಲು ನಿರ್ಧರಿಸಲಾಗಿದ್ದು,



ಅವಶ್ಯಕ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅಂದು ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿಕೆ, ವೇದಿಕೆ ಸಿದ್ದತೆ ಮಾಡಿಕೊಳ್ಳುವಂತೆ ಹಾಗೂ ನುರಿತ ಉಪನ್ಯಾಸಕರನ್ನು ಆಹ್ವಾನಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಮೆರವಣಿಗೆ ಮಾರ್ಗದ ಕುರಿತು ಮುಂಚಿತವಾಗಿ ತಿಳಿಸಬೇಕು.ಜಿಲ್ಲಾ ,ಗ್ರಾಮ ಪಂಚಾಯತ್, ತಾಲೂಕ ಮಟ್ಟ ವಿವಿಧ ಕಚೇರಿ ಗಳಲ್ಲಿ ಹಾಗೂ ಶಾಲಾ, ಕಾಲೇಜುಗಳಲ್ಲಿ, ಜಯಂತಿ ಆಚರಣೆಗೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಕಾರ್ಯಕ್ರಮದಲ್ಲಿ ಹಾಜರಿರಬೇಕು.ಜಯಂತಿಯಂದು ಸೂಕ್ತ ಪೋಲಿಸ್ ಬಂದೋಬಸ್ತ್, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಇನ್ನಿತರ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಲು ಅವರು ಸೂಚಿಸಿದರು. ರಾಮರೆಡ್ಡಿಗೌಡ ತಂಗಡಗಿ,ಡಾ.ಸಿದ್ದರಾಜ ರೆಡ್ಡಿ,ಡಾ.ಶಿವಪುತ್ರರೆಡ್ಡಿ,ಮಲ್ಲನಗೌಡ ಕಲ್ಲೂರ್,ಚನ್ನಪ್ಪಗೌಡ,ಸಿದ್ದರಾಮರೆಡ್ಡಿ ತಿಪ್ಪಾರೆಡ್ಡಿ,ಸಿದ್ದರಾಮಗೌಡ ಯಡ್ಡಳ್ಳಿ, ರಮೇಶ್ ದೊಡಮನಿ, ಸಾಹೇಬ್ ಗೌಡ ಖಾನಾಪುರ,ರುದ್ರಗೌಡ ಪಾಟೀಲ್,ಮಲ್ಲನಗೌಡ ತಳಕ,

ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಸಮಾಜದ ಮುಖಂಡರು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಏ.21ರಂದು ತಾಲ್ಲೂಕ ಪಂಚಾಯತ್ ಕಾರ್ಯಾಲಯ ಎದುರುಗಡೆ ಸಾಂಕೇತಿಕ ಧರಣಿ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ತಾಲ್ಲೂಕಿನ ಸಿಂಧನಕೇರಾ ಗ್ರಾಮ ಪಂಚಾಯತಿಯ ಕ್ಲರ್ಕ-ಕಂ ಎಂಟ್ರಿ ಅಪರೇಟರ್ ಸುಭಾಷ ತಂದೆ ವೀರಪ್ಪಾ ಅವರಿಗೆ ಅಲ್ಲಿನ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ಸುಗಂಧಾ ಇವರು ಸುಮಾರು ದಿನಗಳಿಂದ ಮಾನಸಿಕ ಕಿರುಕುಳ/ಹಿಂಸೆ ನೀಡುತ್ತಾ ಅವ್ಯಾಚ ಪದಗಳಿಂದ ನಿಂದಿಸಿದರಿಂದ ಸುಭಾಷ ಇವರು ಮನನೊಂದು ಏ.1ರಂದು ಮರಣ ಹೊಂದಿರುತ್ತಾರೆ. ಏ.2ರಂದು ಚಿಟಗುಪ್ಪಾ ಪೋಲೀಸ್ ಠಾಣೆಯಲ್ಲಿ ಎಫ್‌ಐಆರ್ ಕ್ರೈಂ ನಂ.0042/2025 ದಾಖಲಾಗಿದೆ. ಆದರೆ ಇಲ್ಲಿಯವರೆಗೆ ಮೇಲಾಧಿಕಾರಿಗಳು ಯಾವುದೇ ಕ್ರಮ ತೆಗೆದು ಕೊಂಡಿರುವದಿಲ್ಲ. ಇದನ್ನು ಪ್ರತಿಭಟಿಸಿ ಭಾರತೀಯ ದಲಿತ ಫ್ಯಾಂಥರ್ ತಾಲ್ಲೂಕ ಶಾಖೆ ಹುಮನಾಬಾದ ವತಿಯಿಂದ ಏ.21ರಂದು ಮುಂಜಾನೆ 10–00 ಗಂಟೆಯಿಂದ ತಾಲ್ಲೂಕ ಪಂಚಾಯತ್ ಕಾರ್ಯಲಯ ಹುಮನಾಬಾದ ಎದುರುಗಡೆ ಸಾಂಕೇತಿಕ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಹುಮನಾಬಾದ ಭಾರತೀಯ ದಲಿತ ಫ್ಯಾಂಥರ್ ತಾಲ್ಲೂಕ ಶಾಖೆಯ ಅಧ್ಯಕ್ಷ ಗಣಪತಿ ಅಷ್ಟೋರೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.ಡಿ.ಪಿಯು ಕಾಲೇಜಿನಲ್ಲಿ 'ಪ್ರತಿಭಾ ಅನಾವರಣ ಕಾರ್ಯಕ್ರಮ

# ವಿದ್ಯಾರ್ಥಿಗಳಿಗೆ ಪಠ್ಯದಜೊತೆಗೆ ಪಠ್ಯೇತರಚಟುವಟಿಕೆಅಗತ್ಯ



ಮಲ್ಲಮ್ಮ ನುಡಿ ವಾರ್ತೆ

ದೋರನಹಳ್ಳಿ:ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯ ಅನಾವರಣಕ್ಕೆ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಟುವಟಿಕೆಯ 'ಪ್ರತಿಭಾ ಅನಾವರಣ ಕಾರ್ಯಕ್ರಮ' ಸೂಕ್ತ ವೇದಿಕೆಯಾಗಿದೆ.ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಅಗತ್ಯ ಎಂದು ಉಪನ್ಯಾಕ ಶ್ರೀಶೈಲ್ ಡಂಬಾಳ ಹೇಳಿದರು.ತಾಲೂಕಿನ ದೋರನಹಳ್ಳಿಯ ಡಿ.ಡಿ.ಯು ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿಗಳ ಪ್ರತಿಭಾ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಮಹೇಶ್ ಪತ್ತಾರ ಮಾತನಾಡಿ ಪಠ್ಯ ಚಟುವಟಿಕೆ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗುವುದರಿಂದ ಅವರ ಮಾನಸಿಕ ಮತ್ತು ಬೌದ್ಧಿಕ ವಿಕಾಸಕ್ಕೆ ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳಲ್ಲಿನ ಸುಪ್ತ ಪ್ರತಿಭೆಯ ಪ್ರದರ್ಶನಕ್ಕೆ ಉಪನ್ಯಾಸಕರ ಶ್ರಮವನ್ನೂ ಮರೆಯುವಂತಿಲ್ಲ ಎಂದು ಶ್ಲಾಘಿಸಿದರು.ವಿದ್ಯಾರ್ಥಿಗಳಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಇಂದಿನ ಯುವಜನತೆಗೆ ಪರಿಚಯಿಸುವ ಈ ಕಾರ್ಯಕ್ರಮ ಅರ್ಥಪೂರ್ಣವಾಗಿದೆ.ಶೈಕ್ಷಣಿಕ ಕಾಲಘಟ್ಟದಲ್ಲಿ ಪಠ್ಯದ ಜೊತೆಗೆ ಇನ್ನಿತರ ಚಟುವಟಿಕೆಗಳಲ್ಲಿ ನಮ್ಮನ್ನು ಹೆಚ್ಚು ಸಕ್ರಿಯರಾಗಿಸುವ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಇಂತಹ ಕಾರ್ಯಕ್ರಮಗಳಲ್ಲಿ ಹೆಚು ಭಾಗವಹಿದ್ದಲ್ಲಿ ವಿದ್ಯಾರ್ಥಿಗಳು ಕ್ರಿಂಯಾತ್ಮಕ ಯೋಚನೆಗಳಿಗೆ ತಮ್ಮನ್ನು ತೆರೆದುಕೊಳ್ಳುತ್ತಾರೆ ಎಂದು ಹೇಳಿದರು.ಉಪನ್ಯಾಸಕಿ ನೀಲಮ್ಮ ಮಾತನಾಡಿ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಇದೊಂದು ಉತ್ತಮ ವೇದಿಕೆಯಾಗಿದೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಮುಂತಾದ ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ಉತ್ತಮ ವ್ಯಕ್ತಿತ್ವ ಮತ್ತು ಉಜ್ವಲ ಭವಿಷ್ಯ ನಿರ್ಮಾಣ ಸಾಧ್ಯ. ಹೊಸ ಹೊಸತಾದ ವಿಚಾರಗಳು, ಸಂಶೋಧನೆಗಳು ಜೀವನಕ್ಕೆ ಹೊಸ ರೂಪಗಳನ್ನು ಕೊಡುತ್ತದೆ ಎಂದು ಹೇಳಿದರು.ವಿದ್ಯಾರ್ಥಿಗಳಿಂದ ನಡೆದ ಪ್ರತಿಭಾ ಅನಾವರಣ ಸಾಂಸ್ಕೃತಿಕ ಕಾರ್ಯಕ್ರಮ ಎಲ್ಲರ ಮನಸೆಳೆಯಿತು. ಜಾನಪದ ಗೀತೆ, ಭಾವಗೀತೆ, ಚಲನ ಚಿತ್ರಗೀತೆ, ಪ್ರಸ್ತುತ ವಿದ್ಯಾಮಾನಗಳ ಕುರಿತು ಚರ್ಚಾ ಸ್ಪರ್ಧೆ, ನಿಮೀಕ್ರೀ ,ರಂಗೋಲಿ ಸಿ ಸ್ಪರ್ಧೆ ಮೊದಲಾದ ಕಲಾಪ್ರಕಾರಗಳನ್ನು ಪ್ರದರ್ಶಿಸಿದರು.ಈ ಸಂಧರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಮಹೇಶ್ ಪತ್ತಾರ, ಉಪನ್ಯಾಸಕ ಶ್ರೀಶೈಲ್ ಡಂಬಾಳ, ಸಂಗಮೇಶ ಪಾಟೀಲ್, ಕೀರಣ ಹೊಸ್ಮನಿ, ನೀಲಮ್ಮ ಮತ್ತು ವಸತಿ ನಿಲಯ ಪಾಲಕ ದೇವಪ್ಪ ಖಾನಾಪುರ, ಮೇಘಾ ಒಂಟೂರು, ಮೈತ್ರಾ ಕಲಬುರ್ಗಿ ಮುಂತಾದವರಿದ್ದರು.ವಿದ್ಯಾರ್ಥಿನಿ ಮೇಘನಾ ಕೊಪ್ಪುರು ಸ್ವಾಗತಿಸಿದರು. ಸಿದ್ದಮ್ಮ ಗುಂಡಳ್ಳಿ ನಿರೂಪಿಸಿದರು, ಸಂದೀಪ್ ವಂದಿಸಿದರು.

# ರಾಮನವಮಿ ಉತ್ಸವ– ಅನ್ನದಾಸೋಹಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಶ್ರೀ ರಾಮ ನವಮಿ ಉತ್ಸವ ಸಮಿತಿಯ ವತಿಯಿಂದ ಆಯೋಜಿಸಿದ್ದ ರಾಮ ನವಮಿ ಉತ್ಸವದ ಶೋಭಾ ಯಾತ್ರೆಯಲ್ಲಿ ಶನಿವಾರ ಆದಿತ್ಯ ಎಂಟರ್ ಪ್ರೈಸೆಸ್ ವತಿಯಿಂದ ಉಚಿತ ಅನ್ನದಾಸೋಹಕ್ಕೆ ಚಾಲನೆ ನೀಡಲಾಯಿತು.

ಅನ್ನದಾಸೋಹಕ್ಕೆ ಚಾಲನೆ ನೀಡಿ ಮಾತನಾಡಿದ ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ವಂಕೆ, ಶ್ರೀರಾಮ ನವಮಿ ಉತ್ಸವ ಸಮಿತಿಯ ವತಿಯಿಂದ ಆಯೋಜಿಸಿದ್ದ ಶೋಭಾ ಯಾತ್ರೆಯು ಹಳೆ ಪಟ್ಟಣದ ವಿಠಲ ಮಂದಿರದಿಂದ ಗಂಜ್ ಏರಿಯಾದ ಗಾಂಧಿ ವೃತ್ತದ ವರೆಗೆ ಮದ್ಯಾನ್ನದಿಂದ ಸಂಜೆ-ಯ ವರೆಗೆ ವಿವಿಧ ಕಲಾ ತಂಡಗಳ ಪ್ರದರ್ಶನದೊಂದಿಗೆ ಮೆರವಣಿಗೆ ಮೂಲಕ ಬಂದಿರುವುದು ಎಲ್ಲರಿಗೂ ಸಂತಸ ತಂದಿದೆ. ತಾಲೂಕು ಸೇರಿದಂತೆ ವಿವಿಧ ಸ್ಥಳಗಳಿಂದ ಆಗಮಿಸಿದ ಸಾರ್ವಜನಿಕರೂ ಮತ್ತು ಶೋಭಾ ಯಾತ್ರೆಯಲ್ಲಿ ಪಾಲ್ಗೊಂಡ ಯಲ್ಲರಿಗೂ ಜಯರಾಜ್ ಪಾತ್ರೆ ನೇತೃತ್ವದ ಆದಿತ್ಯ ಎಂಟರ್ ಪ್ರೈಸೆಸ್ ವತಿಯಿಂದ ಉಚಿತ ಅನ್ನದಾಸೋಹ ಏರ್ಪಡಿಸಿದ್ದು ಎಲ್ಲರೂ ಮೆಚ್ಚುವಂತಹ ಕಾರ್ಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ಜಯರಾಜ ಪಾತ್ರೆ, ಜಯರಾಜ ಕೊಳ್ಳಾ, ಪ್ರಶಾಂತ ಪಾತ್ರೆ, ಆದಿತ್ಯ ಪಾತ್ರೆ, ಸಂಗಮೇಶ ಕಾರಾಮುಂಗೆ ಸೇರಿದಂತೆ ರಾಮ ಮಂದಿರ ಉತ್ಸವ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

# ಅಭಿವೃದ್ಧಿಯಲ್ಲಿ 2ನೇ ಸ್ಥಾನದಲ್ಲಿದ್ದ ಕರ್ನಾಟಕವೀಗ ಭ್ರಷ್ಟಾಚಾರದಲ್ಲಿ ನಂ.1: ವಿಜಯೇಂದ್ರ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 19 : ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ38,500ಕೋಟಿಹಣವನ್ನು ಕಾಂಗ್ರೆಸ್ ಸರ್ಕಾರವು ದುರುಪಯೋಗ ಮಾಡಿಕೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಜನಾಕ್ರೋಶ ಯಾತ್ರೆಯಲ್ಲಿ ಮಾತನಾಡಿದಅವರು,ಮುಖ್ಯಮಂತ್ರಿಗಳು ಸರ್ಕಾರದ ಜವಾಬ್ದಾರಿ ಮರೆತಿವೆ.

ಅವರನ್ನು ಎಚ್ಚರಿಸುವ ಕೆಲಸವನ್ನು ವಿಪಕ್ಷವಾಗಿ ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಈ ಜನಾಕ್ರೋಶದ ಯಾತ್ರೆ ಎಂದು ತಿಳಿಸಿದರು.

ರಾಜ್ಯದ ಮುಖ್ಯಮಂತ್ರಿಯಾಗಿ ರೈತರ ಕಣ್ಣೀರು ಒರೆಸಿದ್ದೀರಾ? ಬಡವರ ಕಣ್ಣೀರು ಒರೆಸಿದ್ದೀರಾ? ಪರಿಶಿಷ್ಟ ಜಾತಿ, ಪಂಗಡದವರ ನೋವಿಗೆ ಸ್ಪಂದಿಸಿದ್ದೀರಾ ಎಂದು ಸಿದ್ದರಾಮಯ್ಯನವರನ್ನುಪ್ರಶ್ನಿಸಿದರು. ರಾಜ್ಯವು ಹಿಂದೆ ಯಡಿಯೂರಪ್ಪನವರ ನೇತೃತ್ವದಲ್ಲಿ ಅಭಿವೃದ್ಧಿ ವಿಚಾರದಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿತ್ತು ಎಂದು ವಿವರಿಸಿದರು. ರಾಜ್ಯವು ಈಗ ಭ್ರಷ್ಟಾಚಾರದಲ್ಲಿ ನಂಬರ್ ವನ್ ಸ್ಥಾನ ಪಡೆದಿದೆ. ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಈ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದಾರೆ. ಈ ಸರಕಾರದ ಅಲ್ಪಸಂಖ್ಯಾತರ ಪರ ನೀತಿಯಿಂದ ಹಿಂದೂಗಳಿಗೆ ಅನ್ಯಾಯವಾಗಿದೆ ಎಂದು ತಿಳಿಸಿದರು.

ಬಿಜೆಪಿ ಮುಸ್ಲಿಮರ ವಿರೋಧಿಯಲ್ಲ, ತ್ರಿಪಲ್ ತಲಾಖ್ ರದ್ದುಗೊಳಿಸುವ ಮೂಲಕ ನರೇಂದ್ರಮೋದಿ ನೇತೃತ್ವದ ಸರ್ಕಾರ ಮುಸ್ಲಿಂ ಮಹಿಳೆಯರಿಗೆ ಗೌರವ ತಂದು ಕೊಟ್ಟಿದೆ. ನಮ್ಮ ಪಕ್ಷ ಮತ್ತು ಸರ್ಕಾರ ದೇಶ ದ್ರೋಹಿಗಳ ಎಂದಿಗೂ ರಕ್ಷಿಸುವ ಕೆಲಸ ಮಾಡಲ್ಲ. ಸರ್ಕಾರ ಜಾತಿಗಣತಿ ಹೆಸರಿನಲ್ಲಿ ಮುಸ್ಲಿಮರ ಎತ್ತಿಕಟ್ಟಿ, ಹಿಂದೂಗಳಿಗೆ ಅವಮಾನಿಸುವ ಮತ್ತು ಎರಡು ಧರ್ಮಗಳ ನಡುವೆ ವೈರತ್ವ ಸೃಷ್ಟಿಸುವ ಕೆಲಸ ಮಾಡಿದೆ ಎಂದು ವಿಜಯೇಂದ್ರ ಕಿಡಿಕಾರಿದರು.



"ಮೋದಿ ಪಾದದ ಧೂಳಿಗೂ ಸಿದ್ದರಾಮಯ್ಯ ಸಮಾನರಲ್ಲ"

ಪ್ರಧಾನಿ ನರೇಂದ್ರ ಮೋದಿ ಒಬ್ಬ ವ್ಯಕ್ತಿಯಲ್ಲ, ಅದ್ಭುತ ಶಕ್ತಿ. ಭಾರತಕ್ಕೆ ಉಜ್ವಲ ಭವಿಷ್ಯ ಇದೆ ಎಂದು ಪ್ರಜೆಗಳಲ್ಲಿ ವಿಶ್ವಾಸ ಮೂಡಿಸಿದವರು ಮೋದಿ. ಪ್ರಸ್ತುತ ಅವರ ಅಧಿಕಾರಾವಧಿಯಲ್ಲಿ ಭಾರತ ವಿಶ್ವದ ಐದನೇ ದೊಡ್ಡ ಆರ್ಥಿಕ ರಾಷ್ಟ್ರವಾಗಿ ಬೆಳೆದಿದೆ. ಮೋದಿಯವರ ಪಾದದ ಧೂಳಿಗೂ ಸಿಎಂ ಸಿದ್ದರಾಮಯ್ಯ ಸಮಾನರಲ್ಲ. ಅವರ ಬಗ್ಗೆ ಮಾತನಾಡುವ ಯೋಗ್ಯತೆ-ಯೂ ಅವರಿಗಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಪ್ರಭು ಚವ್ಹಾಣ, ಡಾ. ಶೈಲೇಂದ್ರ ಬೆಲ್ದಾಳೆ, ಶರಣು ಸಲಗರ್, ಡಾ. ಸಿದ್ದು ಪಾಟೀಲ, ಎಂಎಲ್‌ಸಿ ಎಂ.ಜಿ ಮುಳೆ, ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ, ಮಾಜಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ, ಮಾಜಿ ಶಾಸಕರಾದ ಪ್ರಕಾಶ ಖಂಡ್ರೆ, ಗುಂಡಪ್ಪ ವಕೀಲ್, ಪ್ರಮುಖರಾದ ಈಶ್ವರಸಿಂಗ್ ಠಾಕೂರ್, ಬಾಬು ವಾಲಿ, ಬಸವರಾಜ ಆರ್ಯ, ಕಿರಣ ಪಾಟೀಲ ಮತ್ತಿತರರು ವೇದಿಕೆಯಲ್ಲಿದ್ದರು.

# ವಚನ ಜಾತ್ರೆ-2025 ಸಮಾರಂಭ ಇಂದಿನಿಂದ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಏ.19: ಪಟ್ಟಣದಲ್ಲಿ ವಚನ ಜಾತ್ರೆ-2025 ಮತ್ತು ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ 26ನೆಯ ಸ್ಮರಣೋತ್ಸವನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾಹಿತಿ ನೀಡಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಪಟ್ಟಣದ ಚನ್ನಬಸವಾಶ್ರಮದಲ್ಲಿ 20 ರಂದು ಭಾನುವಾರ ಸಾಯಂಕಾಲ 6 ಗಂಟೆಗೆ ಅನುಭವಂಟಪವನು ಮಾಡಿ ಅನುಭಾವ ಮೂರ್ತಿಯಾದ ನಮ್ಮ ಬಸವಯ್ಯನು ಗೋಷ್ಠಿಯೊಂದಿಗೆ ಮೂರು ದಿವಸದ ಕಾರ್ಯಕ್ರಮಗಳಿಗೆ ವಿದ್ಯುಕ್ತ ಚಾಲನೆ ಸಿಗಲಿದೆ. ಗೋರ್ಟಾ ಲಿಂಗಾಯತ ಮಹಾಮಠದ ಪ್ರಭುದೇವ ಸ್ವಾಮೀಜಿ, ಬೆಳಗಾವಿ-ಯಮಕನಮರಡಿ ಜಗದ್ಗುರು ಶೂನ್ಯ ಸಂಪಾದನಾ ಹುಣಸಿಕೊಳ್ಳ ಮಠದ ಉತ್ತರಾಧಿಕಾರಿ ಸಿದ್ಧಬಸವ ದೇವರು ಗೋಷ್ಠಿಯ ದಿವ್ಯ ಸನ್ನಿಧಾನ ವಹಿಸಲಿದ್ದಾರೆ.

ಕೌಠಾ ಬಸವಯೋಗಾಶ್ರಮದ ಡಾ.ಸಿದ್ಧರಾಮ ಶರಣರು ಬೆಲ್ದಾಳ ಅನುಭಾವ ನೀಡಲಿದ್ದಾರೆ. ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಆಯುಕ್ತ ಜಗನ್ನಾಥ ರೆಡ್ಡಿ ಗೋಷ್ಠಿ ಉದ್ಘಾಟಿಸಲಿದ್ದಾರೆ. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶಂಭುಲಿಂಗ ಕಾಮಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

21 ರಂದು ಸೋಮವಾರ ಸಾಯಂಕಾಲ 6 ಗಂಟೆಗೆ ನಡೆಯಲಿರುವ ಜಾಗತೀಕರಣ ಕಾಲದಲ್ಲೂ ಬಸವವಾದದ ಪ್ರಸ್ತುತತೆ ಗೋಷ್ಠಿಯ ದಿವ್ಯ ಸನ್ನಿಧಾನ ಬಸವಕಲ್ಯಾಣ ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ಬೀದರ್ ಬಸವಸೇವಾ ಪ್ರತಿಷ್ಠಾನದ ಡಾ.ಗಂಗಾಂಬಿಕಾ ವಹಿಸಲಿದ್ದಾರೆ. ಕಲಬುರಗಿ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಸಹಾಯಕ ಪ್ರಾಧ್ಯಾಪಕ ಡಾ.ಕಿರಣ ಎಂ ಗಾಜನೂರು ಅನುಭಾವ ನೀಡಲಿದ್ದಾರೆ.

ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಬಸವರಾಜ ಧನ್ನೂರು ಅಧ್ಯಕ್ಷತೆ ವಹಿಸಲಿದ್ದಾರೆ.

22 ರಂದು ಮಂಗಳವಾರ ಬೆಳಿಗ್ಗೆ 6 ಗಂಟೆಗೆ ಹಿರೇಮಠ ಸಂಸ್ಥಾನ ದಿಂದ ಚನ್ನಬಸವಾಶ್ರಮದ ವರೆಗೂ ಬಸವ ನಡಿಗೆ ನಡೆಯಲಿದೆ. ಔಸಾ ಶಿವಛತ್ರಪತಿ ಶಿಕ್ಷಣ ಪ್ರಸಾರಕ ಮಂಡಳ ಸಂಸ್ಥಾಪಕ ನಾಮದೇವರಾವ ಪವಾರ ಷಟಸ್ಥಲ ಧ್ವಜಾರೋಹಣ ನೆರವೇರಿಸಲಿದ್ದಾರೆ. ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ ಸಿಂದಬಂದಗೆ ಬಸವ ಗುರುವಿನ ಪೂಜೆ ನೆರವೇರಿಸುವರು.



ವಿವಿಧ ಮಠಾಧೀಶರು, ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಬೆಳಿಗ್ಗೆ 11 ಗಂಟೆಗೆ ನಡೆಯುವ ಉದ್ಘಾಟನಾ ಸಮಾರಂಭವನ್ನು ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆ ವಹಿಸುವರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಅವರು ಅಥಣೀಶ ಪ್ರಭು ಚನ್ನಬಸವ ಸ್ವಾಮೀಜಿ ವಿರಚಿತ ಮಹಾತ್ಮರ ಚರಿತಮೃತ 10ನೇ ಮುದ್ರಣ ಗ್ರಂಥವನ್ನು ಬಿಡುಗಡೆಗೊಳಿಸಲಿದ್ದಾರೆ.

ಸಚಿವ ರಹೀಂಖಾನ್, ಜಹಿರಾಬಾದ ಸಂಸದ ಸುರೇಶ ಶೆಟಕಾರ್, ಸಂಸದ ಸಾಗರ ಖಂಡ್ರೆ, ಮಹಾರಾಷ್ಟ್ರದ ಉದಗೀರ ಶಾಸಕ ಸಂಜಯ ಬನಸೋಡೆ ಮುಖ್ಯಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕೇಂದ್ರದ ಮಾಜಿ ಮಂತ್ರಿ ಭಗವಂತ ಖೂಬಾ, ಮಾಜಿ ಸಚಿವ ರಾಜಶೇಖರ ಪಾಟೀಲ್ ಹುಮನಾಬಾದ್, ಮಾಜಿ ಶಾಸಕ ಪ್ರಕಾಶ ಖಂಡ್ರೆ, ನಾರಂಜಾ ಸಕ್ಕರೆ ಕಾರಖಾನೆ ಅಧ್ಯಕ್ಷ ಡಿ.ಕೆ.ಸಿದ್ರಾಮ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸಾಯಂಕಾಲ 4 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದ ದಿವ್ಯಸನ್ನಿಧಾನ ಗುಳೇದಗುಡ್ಡ ಜಗದ್ಗುರು ಗುರುಸಿದ್ದೇಶ್ವರ ಬ್ರಹನ್ಮಠದ ಜಗದ್ಗುರು ಬಸವರಾಜ ಪಟ್ಟದಾರ್ಯ ಮಹಾಸ್ವಾಮೀಜಿ, ಜಗದ್ಗುರು ಗುರುಸಿದ್ಧ ಪಟ್ಟದಾರ್ಯ ಮಹಾಸ್ವಾಮೀಜಿ ವಹಿಸಲಿದ್ದಾರೆ. ಹುಲಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಡಾ.ಶಿವಾನಂದ ಸ್ವಾಮೀಜಿ, ಶಿವಾನಂದ ಸ್ವಾಮೀಜಿ, ಆನಂದದೇವರು, ಚಿರಂಜೀವಿ ಶರಣಬಸಪ್ಪ ಅಪ್ಪ, ಮೈತ್ರಾದೇವಿ ತಾಯಿ, ಡಾ.ಮಹಾದೇವಮ್ಮ ತಾಯಿ ಸೇರಿದಂತೆ ಜಿಲ್ಲೆಯ ವಿವಿಧ ಕ್ಷೇತ್ರದ ಶಾಸಕರು, ಗಣ್ಯರು, ಸಾಹಿತಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಪ್ರವಚನಾ ಸೇವಾ ಸಮಿತಿ ಅಧ್ಯಕ್ಷೆ ಶಶಿಕಲಾ ಅಶೋಕ ವಾಲೆ, ವಚನ ಪಾರಾಯಣ ಸೇವಾ ಸಮಿತಿ ಅಧ್ಯಕ್ಷೆ ರೇಖಾ ಮಹಾಜನ, ತಾಲೂಕು ಕದಳಿ ವೇದಿಕೆ ಅಧ್ಯಕ್ಷೆ ಮಲ್ಲಮ್ಮ ನಾಗನಕೇರೆ ಇದ್ದರು.

ವಿವಿಧ ಗ್ರಂಥ ಲೋಕಾರ್ಪಣೆ

ವಚನಜಾತ್ರೆ-2025 ಸಮಾರಂಭದಲ್ಲಿ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಮುದ್ರಣಗೊಂಡ ವಿವಿಧ ಗ್ರಂಥಗಳನ್ನು ಲೋಕಾರ್ಪಣೆಗೊಳ್ಳಲಿವೆ ಎಂದು ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದ್ದಾರೆ. ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಂಪಾದಕತ್ವದ ಮಾತೆಂಬುದು ಜ್ಯೋತಿರ್ಲಿಂಗ, ಶರಣರ ವಚನ ಬೇವ ಸವಿದಂತೆ, ವಚನಾಭಿಷೇಕ, ವಚನ ಪ್ರಸಾದ(4ನೇ ಮುದ್ರಣ), ಚೇತನಾ ಸಂತೋಷಕುಮಾರ ಚನ್ನಶೆಟ್ಟಿ ರಚಿಸಿದ ನವಚೇತನ, ಶಿವಸ್ವಾಮಿ ಚೀನಕೇರಾ ರಚಿಸಿದ ಸಮತಾವಾದ ಒಂದು ವಿವೇಚನೆ ಮತ್ತು ಮರಾಠಿ ಭಾಷೆಯಲ್ಲಿ ಡಾ.ಅಶೋಕ ಮೇನಕುದಳೆ ರಚಿಸಿರುವ ಸಮತಾಸೂರ್ಯ ಮಹಾತ್ಮ ಬಸವೇಶ್ವರ(9ನೇ ಆವೃತ್ತಿ) ಮತ್ತು ಕ್ರಾಂತಿಕಾರಿ ಮಹಾತ್ಮ ಬಸವೇಶ್ವರ(5ನೇ ಆವೃತ್ತಿ) ಗ್ರಂಥಗಳು ಲೋಕಾರ್ಪಣೆ ಆಗಲಿವೆ ಎಂದು ತಿಳಿಸಿದರು.

ಸಾಧಕರಿಗೆ ಪ್ರಶಸ್ತಿ ಪ್ರದಾನ

ಮಂಗಳವಾರ ಮಧ್ಯಾಹ್ನ 3 ಗಂ-ಟೆಗೆ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯಸನ್ನಿಧಾನ ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದ ಮಹಾಸ್ವಾಮೀಜಿ, ಕವಲಗಿ ಜಗದ್ಗುರು ಶಿವಯೋಗಿ ಸಿದ್ಧರಾಮೇಶ್ವರ ಮಹಾಸಂಸ್ಥಾನ ಮಠದ ಡಾ.ಅಭಿನವ ಸಿದ್ಧರಾಮೇಶ್ವರ ಸ್ವಾಮೀಜಿ ವಹಿಸಲಿದ್ದಾರೆ. ಪ್ರಭುಚನ್ನಬಸವ ಸ್ವಾಮಿಗಳು, ಮೋಟಗಿ ಮಠ ಅಥಣಿ (ಡಾ. ಚನ್ನಬಸವ ಪಟ್ಟದ್ದೇವರ ಸಾಹಿತ್ಯ ಪ್ರಶಸ್ತಿ), ಸೋಮನಾಥ ಪಟ್ನೆ, ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಬೆಂಗಳೂರು (ಡಾ.ಚನ್ನಬಸವ ಪಟ್ಟದ್ದೇವರ ಸಮಾಜ ಸೇವಾ ಪ್ರಶಸ್ತಿ), ಡಾ.ಶರಣಪ್ಪ ಹಲಸೆ, ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ ಮೈಸೂರು (ಡಾ. ಚನ್ನಬಸವ ಪಟ್ಟದ್ದೇವರ ಶೈಕ್ಷಣಿಕ ಸೇವಾ ಪ್ರಶಸ್ತಿ), ಡಾ.ಮೃತ್ಯುಂಜಯ ಶೆಟ್ಟರ್, ಖ್ಯಾತ ಹಿಂದೂಸ್ಥಾನಿ ಗಾಯಕರು, ಧಾರವಾಡ (ಸಿದ್ಧರಾಮ ಜಂಬಲದಿನ್ನಿ ವಚನ ಸಂಗೀತ ಪ್ರಶಸ್ತಿ), ಶರಣಪ್ರಕಾಶ ಬಸವರಾಜ ಮುಗಳಿ, ಹುಡುಗಿ (ನಾಡೋಜ ಡಾ.ಜೆ.ಎಸ್. ಖಂಡೇರಾವ ಚಿತ್ರಕಲಾ ಪ್ರಶಸ್ತಿ), ಧ್ರುವ ಜತ್ತಿ, ಸಂಸ್ಥಾಪಕರು, ಜತ್ತಿ ಫೌಂಡೇಷನ್ ಬೆಂಗಳೂರು (ಡಾ. ಚನ್ನಬಸವ ಪಟ್ಟದ್ದೇವರ ಯುವ ಪ್ರಶಸ್ತಿ), ಮಲ್ಲಿಕಾರ್ಜುನ ಮೂಲಗೆ, ಸೋಲಾಪುರ (ಬಸವತತ್ವ ಪ್ರಸಾರ ಸೇವಾ ಪ್ರಶಸ್ತಿ), ಚಂದ್ರಗೌಡ ಕುಲಕರ್ಣಿ, ತಾಳಿಕೋಟೆ (ಡಾ.ಚನ್ನಬಸವ ಪಟ್ಟದ್ದೇವರ ಮಕ್ಕಳ ಸಾಹಿತ್ಯ ಪಶಸ್ತಿ) ನೀಡಿ ಗೌರವಿಸಲಾಗುತ್ತಿದೆ.

**ವಿಶೇಷ ಸನ್ಮಾನ :**

ಸಮಾರೋಪ ಸಮಾರಂಭದಲ್ಲಿ ಕಲಬುರಗಿಯ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರಮನ್ ಮಾತೋಶ್ರೀ ಡಾ.ದಾಕ್ಷಾಯಣಿತಾಯಿ ಶರಣಬಸಪ್ಪ, ಕೊಟ್ಟೂರು ಹಿರಿಯ ಸಾಹಿತಿ ನಾಡೋಜ ಕುಂ.ವೀರಭದ್ರಪ್ಪ, ಪಶ್ಚಿಮ ಬಂಗಾಳ ಚಂದನ ನಗರದ ಐಪಿಎಸ್ ಅಮಿತ ಜವಳಗಿ, ನವದೆಹಲಿ ಸೂರ್ಯ ಫೌಂಡೇಶನ್‌ನ ಅನಂತ ಬಿರಾದಾರ್, ಕಲಬುರಗಿ ಸಮಾಜ ಸೇವಕ ಉಮೇಶ ಶೆಟ್ಟಿ ಅವರನ್ನು ಶ್ರೀಮಠದ ಪರವಾಗಿ ವಿಶೇಷವಾಗಿ ಸನ್ಮಾನಿಸಲಾಗುತ್ತಿದೆ ಎಂದು ಶ್ರೀಗಳು ತಿಳಿಸಿದರು. ವಚನ ಸಾಹಿತ್ಯ, ಕನ್ನಡ ಭಾಷೆಯ ಬಗ್ಗೆ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರು ಅಪಾರ ಗೌರವ ಹೊಂದಿದ್ದರು. ಆ ಕಾರಣಕ್ಕಾಗಿಯೇ ಪ್ರತಿವರ್ಷ ಪೂಜ್ಯರ ಸ್ಮರಣೋತ್ಸವ ಜತೆಗೆ ವಚನ ಜಾತ್ರೆ ಆಚರಿಸುವ ಪರಂಪರೆ ಹಾಕಿಕೊಂಡಿದ್ದೇವೆ.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು

**-ಅಧ್ಯಕ್ಷರು ಅನುಭವ ಮಂಟಪ ಟ್ರಸ್ಟ್ ಬಸವಕಲ್ಯಾಣ**

ಪಟ್ಟಣದಲ್ಲಿ ನಡೆಯುವ ಮೂರು ದಿವಸದ ವಚನ ಜಾತ್ರೆ-2025 ಸಮಾರಂಭದಲ್ಲಿ ನಾಡಿನ ಮಠಾಧೀಶರು, ರಾಜಕೀಯ ಗಣ್ಯರು, ಸಾಹಿತಿಗಳು, ಚಿಂತಕರು ಭಾಗವಹಿಸಲಿದ್ದಾರೆ. ಜಿಲ್ಲೆಯ ಸದ್ಭಕ್ತರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು.

**-ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

# ಹಾಳು ಬಿದ್ದು, ಪುಂಡರ ಅಡ್ಡೆಯಾಗಿರುವ ಟೌನ್ ಹಾಲ್ ಸರ್ಕಾರಿ ಕಚೇರಿಗೆ ಬಳಸಿಕೊಳ್ಳಿ: ಗದ್ದಿಗಿ ಆಗ್ರಹ



ಗುರುಮಿಠಕಲ್. ಏ.19: ಪಟ್ಟಣದ ತಹಸೀಲ ಕಚೇರಿ ಪಕ್ಕದಲ್ಲಿರುವ ಪುರಭವನ (ಟೌನ್ ಹಾಲ್) ಕಟ್ಟಡ ಬಳಕೆ ಇಲ್ಲದೇ ಹಾಳು ಬಿದ್ದಿದ್ದು ಪುಂಡ ಪೋಕರಿಗಳಿಗೆ ಅಡ್ಡಯಾಗಿ ಪರಿವರ್ತನೆಗೊಂಡಿದ್ದು, ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಜಯಕರ್ನಾಟಕ ಸಂಘಟನೆ ಒತ್ತಾಯಿಸಿದೆ.

ಈ ಕುರಿತು ಹೇಳಿಕೆನೀಡಿರುವ ತಾಲ್ಲೂಕು ಅಧ್ಯಕ್ಷ ನಾಗೇಶ ಗದ್ದಿಗಿ, 2016-17ನೇಸಾಲಿನಲ್ಲಿ ಕೆಕೆಆರ್‌ಡಿಬಿ ಅನುದಾನದಲ್ಲಿ ಅಂದಾಜು 1.90 ಕೋಟಿ ಗೂ ಮಿಕ್ಕಿ ಖರ್ಚು ಮಾಡಿ ನಿರ್ಮಿಸಿದ ಕಟ್ಟಡ ವ್ಯರ್ಥ ಹಾಳು ಸುರಿಯುತ್ತಿದೆ. ಇದರಿಂದಾಗಿ ಪುಂಡ ಪೋಕರಿಗಳಿಗೆ ಅನೈತಿಕ ಚಟುವಟಿಕೆಗಳ ತಾಣವಾಗಿದೆ.

ರಾತ್ರಿಯಾದರೆ ಸಾಕು ಕುಡುಕರ ಅಡ್ಡಯಾಗಿ ಬದಲಾಗುವ ಟೌನ್ ಹಾಲ್ ಹೋಗಿ ಅಕ್ರಮ ಅನೈತಿಕ ನೈಟ್ ಕ್ಲಬ್ ಆಗಿ ಬದಲಾಗಿದೆ, ಈ ಕಟ್ಟಡದ ಕಿಟಕಿ ಬಾಗಿಲುಗಳನ್ನು ಧ್ವಂಸ ಮಾಡಿರುವ ಕುಡುಕರು ಕಟ್ಟಡವನ್ನು ಭೂತ ಬಂಗ್ಲೆಯಾಗಿ ಪರಿವರ್ತಿಸಿದ್ದಾರೆ ಎಂದು ಅವರು ದೂರಿದ್ದಾರೆ.

ಕೂಡಲೇ ಕ್ರಮ ಕೈಗೊಂಡು ಈ ಕಟ್ಟಡವನ್ನು ಯಾವುದಾದರೂ ಸರ್ಕಾರಿ ಕಚೇರಿಯನ್ನಾಗಿ ಬದಲಿಸಬೇಕು ಸರ್ಕಾರದ ಹಣ ವ್ಯರ್ಥವಾಗುತ್ತಿದೆ.

ಈ ಹಿಂದೆ ತಾಲ್ಲೂಕು ನ್ಯಾಯಾಲಯ ಸಂಕೀರ್ಣವಾಗಿಸಲು ಬಿಡುಗಡೆ ಮಾಡಿದ 50 ಲಕ್ಷ ರೂ. ಗಳನ್ನು ಪಾಪಸ್ ಪಡೆದಿದ್ದರಿಂದ ಮತ್ತೆ ಈ ಕಟ್ಟಡ ಹಾಳು ಕೊಂಪೆಯಂತಾಗಿದೆ.

ತಾಲ್ಲೂಕು ಕೇಂದ್ರದಲ್ಲಿ ಕಚೇರಿಗಳು ಇಲ್ಲ ಎಂಬ ಸಬೂಬು ಹೇಳುವ ಸರ್ಕಾರ ಇಂತಹ ಕಟ್ಟಡಗಳನ್ನು ಬಳಸಿಕೊಂಡು ಇಲಾಖೆಗಳ ಕಚೇರಿ ಆರಂಭಿಸಲು ಮುಂದಾಗಬೇಕೆಂದು ಅವರು ಒತ್ತಾಯಿಸಿದ್ದಾರೆ.

ತಹಸೀಲ ಕಚೇರಿ ಪಕ್ಕದಲ್ಲೇ ಇದ್ದರೂ ತಹಸೀಲ್ದಾರ ಸೇರಿದಂತೆ ಯಾವೊಬ್ಬ ಅಧಿಕಾರಿಗಳೂ ಈ ಬಗ್ಗೆ ಯೋಚಿಸದೇ ಇರುವುದು ಅಧಿಕಾರ ನಡೆಸುತ್ತಿರುವವರ ಕಾರ್ಯವೈಖರಿಯನ್ನು ಬಿಂಬಿಸುತ್ತಿದೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದು, ಕೂಡಲೇ ಕ್ರಮ ಕೈಗೊಳ್ಳದೇ ಇದ್ದಲ್ಲಿ ಉಗ್ರಹೋರಾಟ ರೂಪಿಸಲಾಗುವುದು ಎಂದು ಗೌರವಾಧ್ಯಕ್ಷ ಮಲ್ಲಿಕಾರ್ಜುನ ಕಾಕಲವಾರ, ಉಪಾಧ್ಯಕ್ಷ ಕಾಶಪ್ಪ ದೊರೆ, ಕಾರ್ಯಾಧ್ಯಕ್ಷ ನರಸಿಂಹಲು, ನಗರಾಧ್ಯಕ್ಷ ಮಹೇಶ ಗೌಡ, ಮುಖಂಡರಾದ ಉದಯಕುಮಾರ, ನಾರಾಯಣ ಮಜ್ಜಿಗೆ, ರಾಮುಲು ಕೊಡಗಂಟಿ, ಅಯಾಜ್, ರವಿ ವಾರದ, ಬನ್ನಪ್ಪ ಮಡಗು, ನರೇಶ ಮಜ್ಜಿಗೆ ಇನ್ನಿತರರು ಎಚ್ಚರಿಕೆ ನೀಡಿದ್ದಾರೆ.

# 14.40 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು

ಮಲ್ಲಮ್ಮ ನುಡಿ ವಾರ್ತೆ


ಕಲಬುರಗಿ,ಏ.19: ಮನೆಯಮಾಲೀಕರು ಮನೆಯಲ್ಲಿ ಇದ್ದಾಗಲೇ 14.40 ಲಕ್ಷ ರೂ.ಮೌಲ್ಯದ 160 ಗ್ರಾಂ. ಚಿನ್ನಾಭರಣವನ್ನು ಕಳ್ಳರು ಕಳವು ಮಾಡಿರುವ ಘಟನೆ ಇಲ್ಲಿನ ಗಣೇಶ ನಗರದಲ್ಲಿ ನಡೆದಿದೆ. ರೋಹಿಣಿ ರವಿ ಕುಲ್ಕರ್ಣಿ ಎಂಬುವವರ ಮನೆಯಲ್ಲಿನ ಚಿನ್ನಾಭರಣ ಕಳವಾಗಿದ್ದು, ಅವರು ಈ ಸಂಬಂಧ ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಮೊಮ್ಮಗನ ಜವಳ ಕಾರ್ಯಕ್ರಮ ಇದ್ದ ಪ್ರಯುಕ್ತ ಇವರು ಬ್ಯಾಂಕ್‌ನ ಲಾಕರ್‌ನಲ್ಲಿ ಇಟ್ಟಿದ್ದ ಬಂಗಾರದ ಆಭರಣಗಳನ್ನು ಮನೆಗೆ ತಂದು ಪರ್ಸನಲ್ಲಿ ಇಟ್ಟಿದ್ದರು. ಜವಳ ಕಾರ್ಯಕ್ರಮ ಮುಗಿದ ನಂತರ ಚಿನ್ನಾಭರಣವನ್ನು ಮರಳಿ ಬ್ಯಾಂಕ್ ಲಾಕರ್‌ನಲ್ಲಿ ಇಡಬೇಕು ಎಂದಿದ್ದರು. ನಡುವೆ ಬ್ಯಾಂಕ್‌ಗಳು ರಜೆ ಇದ್ದುದ್ದ-ರಿಂದ ಮನೆಯಲ್ಲಿ ಇಟ್ಟಿದ್ದರು. ಈ ವೇಳೆ ಕಳ್ಳರು ಚಿನ್ನಾಭರಣವನ್ನು ಕಳವು ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಎಂ.ಬಿ.ನಗರ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ದೇಶದಲ್ಲಿ ಕಾಂಗ್ರೆಸ್ ತನ್ನ ಅಸ್ತಿತ್ವ ಕಳೆದುಕೊಂಡಿದೆ: ವಿಜಯೇಂದ್ರ ಲೇವಡಿ

ಬೀದರ. ಏ. 19 : ಕರ್ನಾಟಕ ಸರ್ಕಾರದ ಮೇಲೆ ತೀವ್ರ ವಾಗ್ದಾಳಿ ನಡೆಸಿದ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಜಾಗತಿಕ ಮನ್ನಣೆಯನ್ನು ಪ್ರತಿಪಾದಿಸುತ್ತಾ, ಕಾಂಗ್ರೆಸ್ ಪಕ್ಷವು ದೇಶದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ ಎಂದು ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ವಿಜಯೇಂದ್ರ, ಆಡಳಿತಾರೂಢ



ಕಾಂಗ್ರೆಸ್ ಸರ್ಕಾರವು ಬೀದರ್ ಜಿಲ್ಲೆಯಲ್ಲಿ ಅಭಿವೃದ್ಧಿಯನ್ನು ನಿರ್ಲಕ್ಷಿಸಿದೆ ಎಂದು ಆರೋಪಿಸಿದರು.

"ಕಾಂಗ್ರೆಸ್ ಪಕ್ಷವು ದೇಶದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯ ಶಕ್ತಿಯನ್ನು ಇಡೀ ಜಗತ್ತಿಗೆ ತಿಳಿದಿದೆ. ಬೀದರ್ ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಇಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗ, ನಾವು ಬೀದರ್‌ಗೆ ಸಾವಿರ ಕೋಟಿ ಅನುದಾನವನ್ನು ನೀಡಿದ್ದೇವೆ. ಅಧಿಕಾರಕ್ಕೆ ಬಂದ ನಂತರ ಕಾಂಗ್ರೆಸ್ ಸರ್ಕಾರ ಎಷ್ಟು ಕೋಟಿ ನೀಡಿದೆ ಎಂಬುದನ್ನು ಚರ್ಚಿಸೋಣ" ಎಂದು ವಿಜಯೇಂದ್ರ ಸವಾಲು ಹಾಕಿದ್ದಾರೆ.

# ನ್ಯಾಯಾಲಯದ ಆದೇಶಕ್ಕೆ ಮಾನ್ಯತೆ ನೀಡದ ಕೊಪ್ಪಳದ ಜಿಲ್ಲಾಧಿಕಾರಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಏ.19: ಭೂಸ್ವಾಧೀನ ಪ್ರಕರಣದಲ್ಲಿ ಜಿಲ್ಲೆಯ ಗಂಗಾವತಿಯ ಹಿರಿಯ ಸಿವಿಲ್ ನ್ಯಾಯಾಧೀಶರ ಆದೇಶದ ಅನ್ವಯ ಜಿಲ್ಲಾಧಿಕಾರಿಗಳ ವಾಹನ ಜಪ್ತಿಗೆ ಆಗಮಿಸಿದ್ದ ನ್ಯಾಯಾಂಗ ಇಲಾಖೆ ಸಿಬ್ಬಂದಿಗಳು ಬರಿಗೈಯಲ್ಲಿ ವಾಪಸ್ ಹೋಗಿರುವುದು ಸಾರ್ವಜನಿಕ ವಲಯದಲ್ಲಿ ವಿವಿಧ ರೀತಿಯ ಚರ್ಚೆಗೆ ಗ್ರಾಸವಾಗಿದೆ.

ಗಂಗಾವತಿ ನಗರದ ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಾಧೀಶರು ಭೂ ಮಾಲೀಕರಿಗೆ ಮಾಹಿತಿಯನ್ನು ರವಾನಿಸದೆ ಗಂಗಾವತಿ ನಗರದ ವಾಲ್ಮೀಕಿ ವೃತ್ತದಿಂದ ಜಯನಗರ ಬಡಾವಣೆಗೆ ಹೋಗುವ ರಸ್ತೆಯನ್ನು ಗಂಗಾವತಿ ನಗರಸಭೆಯಿಂದ ಅಗ್ಲೀಕರಣ ಮಾಡಲಾಗಿದ್ದು ಈ ವೇಳೆಯಲ್ಲಿ ನಗರಸಭೆ ಅಧ್ಯಕ್ಷರು ನಗರದ ಕೊಟ್ಟೂರೇಶ್ವರ ಸ್ವಾಮಿಗಳ ವಿವಿಧೋದ್ದೇಶ ಸಂಸ್ಥೆ ಹಾಗೂ ನಗರದ ವಿರೂಪಾಕ್ಷಪ್ಪ ಎಂಬುವರ ಭೂಮಿ ಒತ್ತುವರಿ ಮಾಡಿಕೊಂಡು ರಸ್ತೆ ಅಗಲೀಕರಣವನ್ನು ಪೂರ್ಣಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಖಾಸಗಿ ಭೂ ಮಾಲಿಕತ್ವದ ಭೂಮಿಯಲ್ಲಿ ಸ್ಥಳೀಯ ಆಡಳಿತ ರಸ್ತೆ ನಿರ್ಮಾಣ ಮಾಡಿದ್ದು ಖಾಸಗಿ ಜಮೀನಿನಲ್ಲಿ ಮಾಹಿತಿ ನೀಡದೆ ರಸ್ತೆ ನಿರ್ಮಾಣ ಮಾಡಿದ್ದು ತಮಗೆ ಯಾವುದೇ ಪರಿಹಾರ ನೀಡಿಲ್ಲ ಎಂದು ಭೂ ಮಾಲೀಕರು ನ್ಯಾಯಾಲಯದ ಮೂರೆ ಹೋಗಿದ್ದರು.





ಕಳೆದ ಆರು (2017) ವರ್ಷಗಳಿಂದ ಸುಧೀರ್ಘವಾದ ವಾದ ವಿವಾದದ ನಂತರ 2021 ಆಗಸ್ಟ್ ಒಂದರಂದು ಪ್ರಕರಣಕ್ಕೆ ನ್ಯಾಯಾಲಯದಿಂದ ಆದೇಶ ನೀಡಲಾಗಿರುತ್ತದೆ. ಆದೇಶದಲ್ಲಿ ಕಲ್ಮಠಕ್ಕೇ 7.94.204 ರೂಪಾಯಿ ಹಾಗೂ ವಿರೂಪಾಕ್ಷಪ್ಪ ಅವರಿಗೆ 5.45.904 ರೂಪಾಯಿ ಪರಿಹಾರ ನೀಡುವಂತೆ ಆದೇಶ ಮಾಡಲಾಗಿದ್ದು ಜಿಲ್ಲಾಧಿಕಾರಿಗಳು ಪರಿಹಾರದ ಮೊತ್ತವನ್ನು ನೀಡಬೇಕು ಎಂದು ನ್ಯಾಯಾಲಯದಿಂದ ಆದೇಶ ಮಾಡಲಾಗಿತ್ತು. ಆದರೆ ನ್ಯಾಯಾಲಯ ಗೊತ್ತುಪಡಿಸಿದ ಸಮಯದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪರಿಹಾರ ಹಣ ನೀಡದಿರುವುದರ ಹಿನ್ನೆಲೆಯಲ್ಲಿ ಭೂಮಿ ಕಳೆದುಕೊಂಡಿರುವ ಮರಳಿ ಕೋರ್ಟ್ ಮೊರೆ ಹೋಗಿರುತ್ತಾರೆ. ಪುನಹ ವಿಚಾರಣೆ ನಡೆಸಿದ ನ್ಯಾಯಾಲಯಡಿಂದ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿಯ ಚರಾಸ್ತಿಗಳ ಆದೇಶ ಮಾಡಲಾಗಿರುತ್ತದೆ.

ಪ್ರಕರಣವನ್ನು ನ್ಯಾಯಾಲಯದಲ್ಲಿ ವಕೀಲರಾದ ಸಂಜಯ ಬಿ ಚಾನೆಲ್, ರಾಮಣ್ಣ ಸೋದರ ಹಾಗೂ ಉಮೇಶ್ ಡಿ ತಮ್ಮ ಕಕ್ಷಿದಾರರೊಂದಿಗೆ ಗುರುವಾರ ಬೆಳಿಗ್ಗೆಯೆ ನ್ಯಾಯಾಲಯದ ಸಿಬ್ಬಂದಿಗಳೊಂದಿಗೆ ನಗರದ ಜಿಲ್ಲಾಡಳಿತ ಭವನಕ್ಕೆ ಆಗಮಿಸಿ ಕಾರು ಜಪ್ತಿ ಮಾಡಲು ಮುಂದಾದರು. ಆದರೆ ಜಿಲ್ಲಾಧಿಕಾರಿ ನ್ಯಾಯಾಲಯದ ಆದೇಶಕ್ಕೂ ಮಾನ್ಯತೆ ನೀಡದೆ ಕಾರ್‌ಕಿ ಕೊಡದೆ ನಿರಾಕರಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಕಾರನ್ನು ಟೋಂಚ (ಎತ್ತಿಕೊಂಡು) ಮಾಡಿಕೊಂಡು ಹೋಗಲು ಪ್ರಯತ್ನಿಸಿರುತ್ತಾರೆ ಆದರೆ ಕಾರಿನ ಕೀಯನ್ನು ಆನ್ ಮಾಡದೆ ಕಾರಿನ ಚಕ್ರಗಳು ಚಲಿಸುವುದಿಲ್ಲ ಎಂಬುದನ್ನು ಅರಿತು ಪ್ರಯತ್ನವನ್ನು ಕೈಬಿಟ್ಟಿದ್ದಾರೆ. ಮತ್ತು ಬರಿ ಕೈಯಲ್ಲಿ ವಾಪಸ್ ತೆರಳಿರುತ್ತಾರೆ.

ಭಾರತದ ಸಂವಿಧಾನದ ಪ್ರಕಾರ ನ್ಯಾಯ ಎಂಬುದು ಎಲ್ಲರಿಗೂ ಒಂದೇ ಆಗಿದ್ದು ಸಂವಿಧಾನದ ಪ್ರಕಾರ ನ್ಯಾಯಾಲಯದ ಆದೇಶವನ್ನು ತಪ್ಪದೇ ಪಾಲಿಸಬೇಕಾದ ಉನ್ನತ ಅಧಿಕಾರಿಯೊಬ್ಬರು ಕಾರು ಚಾವಿ (ಕೀ) ನೀಡದೆ ನ್ಯಾಯಾಲಯಕ್ಕೆ ಅವಮಾನಿಸಿದ್ದು ಎಷ್ಟು ಸರಿ ಎಂದು ಸಾರ್ವಜನಿಕ ವಲಯದಲ್ಲಿ ಹಲವಾರು ಚರ್ಚೆಗಳು ಜರುಗುತ್ತಿದ್ದು. ಜಿಲ್ಲಾಧಿಕಾರಿಗಳ ನಡೆ ಎಷ್ಟರಮಟ್ಟಿಗೆ ಸರಿಯಾಗಿದೆ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.